ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ. ಫಿಲ್. ಪದವಿಯ ಸಂಪ್ರಬಂಧ

" ಹರಿದಾಸ ಸಾಹಿತ್ಯಕ್ಕೆ ಶ್ರೀ ತುಳಸಿರಾಮದಾಸರ ಕೊಡುಗೆ ಒಂದು ಅಧ್ಯಯನ "

ಸಂಶೋಧನ ವಿದ್ಯಾರ್ಥಿನಿ

ಶಾಂತಮ್ಮ . ಆರ್.

ಮಾರ್ಗದರ್ಶಕರು

ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೭-೦೮

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ. ಫಿಲ್. ಪದವಿಯ ಸಂಪ್ರಬಂಧ

" ಹರಿದಾಸ ಸಾಹಿತ್ಯಕ್ಕೆ ಶ್ರೀ ತುಳಸಿರಾಮದಾಸರ ಕೊಡುಗೆ ಒಂದು ಅಧ್ಯಯನ "

ಸಂಶೋಧನ ವಿದ್ಯಾರ್ಥಿನಿ

ಶಾಂತಮ್ಮ . ಆರ್.

ಮಾರ್ಗದರ್ಶಕರು

ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೭-೦೮

ಅಭ್ಯರ್ಥಿಯ ಪ್ರಮಾಣಪತ್ರ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ , ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭–೨೦೦೮ನೇ ಸಾಲಿನ ಎಂ.ಫಿಲ್.ಪದವಿಗಾಗಿ **“ ಹರಿದಾಸ ಸಾಹಿತ್ಯಕ್ಕೆ ಶ್ರೀ ತುಳಸಿರಾಮದಾಸರ ಕೊಡುಗೆ – ಒಂದು ಅಧ್ಯಯನ ”** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಡಾ.ಕೆ.ಎಲ್.ಗೋಪಾಲಕೃಷ್ಣಯ್ಯ ರವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ಇದು ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧನ ವಿದ್ಯಾರ್ಥಿನಿ

ಶಾಂತಮ್ಮ . ಆರ್.

ಶಾಂತಮ್ಮ ಆರ್.

ಸಹಿ/–

ಸ್ಥಳ : ಬೆಂಗಳೂರು

ದಿನಾಂಕ : ೧೫.೧೦.೨೦೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ , ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ೨೦೦೭-೨೦೦೮ನೇ ಸಾಲಿನ ಎಂ.ಫಿಲ್.ಪದವಿಗಾಗಿ " **ಹರಿದಾಸ ಸಾಹಿತ್ಯಕ್ಕೆ ಶ್ರೀ ತುಳಸಿರಾಮದಾಸರ ಕೊಡುಗೆ – ಒಂದು ಅಧ್ಯಯನ** " ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಶಾಂತಮ್ಮ ಆರ್. ರವರು ನನ್ನ ನೇರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ಈ ವಿದ್ಯಾರ್ಥಿನಿಯ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಕೆ.ಎಲ್.ಗೋಪಾಲಕೃಷ್ಣಯ್ಯ

ಸಹಿ/-

ಸ್ಥಳ : ಬೆಂಗಳೂರು

ದಿನಾಂಕ :೧೫.೧೦.೨೦೦೮

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯದ ಚರಿತ್ರೆಯಲ್ಲೇ ದಾಸ ಸಾಹಿತ್ಯವು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಜನರ ಮನಸ್ಸನ್ನು ಸೆಳೆದುಕೊಳ್ಳುವಲ್ಲಿ ದಾಸಸಾಹಿತ್ಯದಷ್ಟು ಬೇರೆ ಯಾವ ಸಾಹಿತ್ಯವೂ ಸರಿ ಸಾಟಿಯಿಲ್ಲವೆನ್ನಬಹುದು. ೧೪ ನೇ ಶತಮಾನದಿಂದ ಆರಂಬಗೊಂಡ ದಾಸ ಸಾಹಿತ್ಯದ ಬೆಳವಣಿಗೆ ಇಂದು ಶಿಥಿಲಗೊಳ್ಳುತ್ತಿರುವುದು ಎಂಬ ಭಾವನೆ ಹೊತ್ತವರು ಇದ್ದಾರೆ. ಆದರೆ 'ಜನರ ಮಧ್ಯೆಯೇ ಬೆಳೆದು ಬಂದ ಸಾಹಿತ್ಯಕ್ಕೆ ಸಾವಿಲ್ಲ' ಎಂಬ ಸತ್ಯ ಟೀಕಿಸುವ ಮಂದಿಗೆ ಸವಾಲೆನ್ನುವಂತೆ ೧೯ನೇ ಶತಮಾನದಲ್ಲಿ ಕಾಣಿಸಿಕೊಂಡ ಶ್ರೀ ತುಳಸಿರಾಮದಾಸರು ದಾಸ ಸಾಹಿತ್ಯವನ್ನು ಇಂದಿಗೂ ಮುಂದುವರೆಸಿದ್ದಾರೆ ಎಂಬುದನ್ನು ನೋಡಬೇಕಾಗಿದೆ

ಕನ್ನಡ ಸಾಹಿತ್ಯದಲ್ಲಿ ಹರಿದಾಸ ಸಾಹಿತ್ಯ ಉಗಮವು ಒಂದು ಧಾರ್ಮಿಕ ನೆಲೆಯಲ್ಲಾದರೂ ಅದು ತನ್ನ ಸಾಹಿತ್ಯಕ ಅನುಸಂಧಾನದಿಂದ ಸಮಾಜದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವುದು ಗಮನಾರ್ಹವಾದುದು. ಇಂತಹ ನಿಟ್ಟಿನಲ್ಲಿಯೇ ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿರುವ ಶ್ರೀ ತುಳಸಿರಾಮದಾಸರನ್ನು ಪರಿಚಯಿಸುತ್ತಾ ಅವರ ಕೀರ್ತನೆ ಕೃತಿಗಳ ವಿವರಗಳನ್ನು ದಾಸ ಸಾಹಿತ್ಯದ ಲೋಕಕ್ಕೆ ತಿಳಿಸುವ ಪ್ರಯತ್ನ ೨೧ನೇ ಶತಮಾನದಲ್ಲೂ ದಾಸ ಸಾಹಿತ್ಯ ತನ್ನ ಜಾಡು ಹಿಡಿದು ಸಾಗುತ್ತಿರುವ ಗುರುತರವಾದ ಕ್ರಮವನ್ನು ತಿಳಿಸಲಾಗುವ ಪ್ರಯತ್ನ ಮುಖ್ಯ ಉದ್ದೇಶವಾಗಿರುತ್ತದೆ.

ಹರಿದಾಸರು ಮುಖ್ಯವಾಗಿ ಒಂದೆಡೆ ನಿಂತು ಸಾಹಿತ್ಯ ರಚಿಸಿದವರಲ್ಲ. ಹಲವಾರು ಕಡೆ ಸುತ್ತಾಡುತ್ತಾ ಅನುಭವಕ್ಕೆ ದಕ್ಕಿದ ವಿಷಯಗಳ ವಿಡಂಬಿಸುತ್ತಾ ಹೊಗಳುತ್ತಾ, ಕೀರ್ತನೆಗಳನ್ನು ಕಟ್ಟಿ ಹಾಡಿದರು. ಅಂದರೆ ಸಮಾಜದೊಂದಿಗೆ ಪ್ರತಿಬಿಂಬಿಸಿದ ಸಾಹಿತ್ಯವನ್ನು ಸೃಷ್ಟಿ ಮಾಡಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದರು. ಅಂತೆಯೇ ಶ್ರೀ ತುಳಸಿರಾಮದಾಸರು ೧೯ನೇ ಶತಮಾನದಲ್ಲಿ ಸಾಮಾಜಿಕ, ಧಾರ್ಮಿಕ ಜಾಗೃತಿಯನ್ನುಂಟು ಮಾಡಲು ಒಂದು ಆಂದೋಲನವನ್ನೇ ಮಾಡಿ ಧಾರ್ಮಿಕ ಪುರುಷರಾಗಿ ಜನಮಾನಸದಲ್ಲಿ ದಂತಕಥೆಯಾಗಿ, ಪವಾಡ ಪುರುಷರಾಗಿ ಸಮಾಜದ್ದೋರಕನಾಗಿ ಬೆರೆತು ಹೋಗಿರುವ ಶ್ರೀ ತುಳಸಿರಾಮದಾಸರ ಜೀವನ ವಿವರ ಮತ್ತು ಕಾಲವು ಬಹಳ ವಿಶಿಷ್ಟವಾಗಿದ್ದು, ಅವರ ಬಗ್ಗೆ ವಿಸ್ತಾರವಾಗಿ ತಿಳಿಸುವ ಪ್ರಯತ್ನ ಮಾಡಿರುವುದು ಮುಖ್ಯ ಆಶಯವನ್ನು ಹೊಂದಿದೆ.

ದಾಸರ ಜೀವನವು ವಿಶಿಷ್ಟ ಪರಂಪರೆಯನ್ನು ಹೊಂದಿದ್ದು, ಇವರ ಸಾಧನೆಯಲ್ಲಿ ಗುರು ಪರಂಪರೆ, ಶಿಷ್ಯ ಪರಂಪರೆ, ಬಹಳ ಮುಖ್ಯವಾಗಿ ಗುರುತಿಸಿ ವಿಸ್ತಾರವಾಗಿ ಹೇಳುವ ಪ್ರಯತ್ನ ಮಾಡಲಾಗಿದೆ. ಪ್ರಶಿಷ್ಯ ಪರಂಪರೆಯಲ್ಲಿಯೂ ಮುಂದುವರೆದಿರುವುದನ್ನು ಗುರುತಿಸುವ ಪ್ರಯತ್ನ ವಿಶೇಷವಾಗಿದೆ. ಕೀರ್ತನೆಗಳ ವಸ್ತು ಮತ್ತು ಸ್ವರೂಪದಲ್ಲಿಯೂ ಭಿನ್ನತೆಯನ್ನು ಹುಡುಕುವುದು ಅದು ಯಾವ ಪ್ರಕಾರದಲ್ಲಿ ಮೂಡಿದೆ

ರಚನೆಯೆಂಬ ಸ್ವರೂಪ ಇತ್ಯಾದಿ ಕುರಿತು ವಿಚಾರ ಮಾಡಲಾಗಿದೆ.

ಆರಂಭದಲ್ಲಿ 'ಹರಿಸ್ತುತಿ' ಕೀರ್ತನೆಗಳಲ್ಲಿ ಕಂಡುಬಂದರೂ, ಮೋಕ್ಷ, ನೀತಿ, ಆತ್ಮ ಸಂತೋಷಕ್ಕಾಗಿ ದೈವ ಸ್ತುತಿಯಾದರೂ, ನಂತರ ಅದರ ಹಿನ್ನಲೆಯಲ್ಲಿಯೇ ಧಾರ್ಮಿಕ, ಸಾಮಾಜಿಕ ಪರವಾದ ಮೂಲಕ ಅನೇಕ ಸಮಾಜಗಳ ಮುಖಮುಖಿಯಾಗಿಸುವ ಪ್ರಯತ್ನ ಶ್ರೀ ತುಳಸಿರಾಮದಾಸರ ದೃಷ್ಟಿಕೋನ ಮತ್ತು ಸಮಾಜವನ್ನು ತನ್ನದೇ ಆದ ದೃಷ್ಟಿಕೋನದಿಂದ ಹೇಗೆ ಗ್ರಹಿಸುತ್ತಾರೆಂಬುದನ್ನು ಗುರುತಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿಯೂ ಮತ್ತು ವಿಸ್ತಾರವನ್ನು ಒಳಗೊಂಡಿರುತ್ತದೆ.

ದ್ವೈತ ಅದ್ವೈತದ ಸಮ್ಮಿಳನವಾಗಿ ಮೂಡಿದ ವಿಶಿಷ್ಟಾದ್ವೈತದ ತತ್ವಕ್ಕೆ ಮಾದರಿಯಾಗಿ ದಾಸರು, ಶಿಷ್ಯರು, ಗುರುವು ತೋರಿದ ಮಾರ್ಗವನ್ನು ಅನುಸರಿಸಿ, ಗುರು – ದೈವದಲ್ಲಿ ಸಮನ್ವಯವನ್ನು ಸಾಧಿಸಿರುವುದು ಇಲ್ಲಿ ಗಮನಾರ್ಹ. ಶಿಷ್ಯ–ಪ್ರಶಿಷ್ಯ ಪರಂಪರೆಯು ಗುರುವನ ನಾಮಸ್ಮರಣೆಯಲ್ಲಿಯೇ ಇಂದಿಗೂ ಮುಂ+ದುವರೆಸಿಕೊಂಡು ದಾಸ ಸಾಹಿತ್ಯದ 'ಹರಿದಾಸ ದಾಸ ಸಾಹಿತ್ಯ'ವನ್ನು ಬೆಳಸುತ್ತಿರುವುದು ಇದನ್ನು ಇಂದಿಗೂ ಪ್ರತಿಪಾದಿಸಿತ್ತದೆ.

ಕೀರ್ತನೆಗಳಲ್ಲಿ ವಸ್ತು ವೈವಿಧ್ಯತೆಯನ್ನು ಹುಡುಕುವುದುರೊಂದಿಗೆ ಅವುಗಳ ಆಕಾರ, ಭಾಷೆಯ ವೈಶಿಷ್ಟ್ಯ, ಭಿನ್ನ ದೃಷ್ಟಿಕೋನ ವ್ಯಾಕರಣ ಅಲಂಕಾರದ ಹಿನ್ನಲೆಯಲ್ಲಿ ಸಂಗೀತ, ಸಾಹಿತ್ಯದ ಹಿನ್ನಲೆಯಲ್ಲಿ ನೋಡುವ ಕ್ರಮವು ವಿಶಿಷ್ಟವಾಗಿದೆ. ಮತ್ತು ಭಾಷೆಯ ವೈವಿಧ್ಯತೆಯಲ್ಲಿ ಕೀರ್ತನೆಯ ಸಾಹಿತ್ಯವು ಇತರ ಹರಿದಾಸರ ಕೀರ್ತನೆಗಿಂತ ರಚನೆಯಲ್ಲಿ ಕಾಣುವ ವ್ಯತ್ಯಾಸವನ್ನು ತಿಳಿಯಬಹುದಾಗಿದೆ.

ಧಾರ್ಮಿಕವಾಗಿ ತುಳಸಿರಾಮದಾಸರಿಗೆ ಇದ್ದ ಮನೋಧರ್ಮ ಧಾರ್ಮಿಕ ಶ್ರದ್ಧೆ ಮತ್ತು ಸಾಮಾಜಿಕ ಕಳಕಳಿಯಲ್ಲಿ ಧರ್ಮವನ್ನು, ಗುರುವನ್ನು, ಸಮಾಜವನ್ನು, ನೈತಿಕ ಮೌಲ್ಯದ ವಿಚಾರವನ್ನು ಚರ್ಚಿಸಿ ಒಬ್ಬ ಆಂದೋಲನಕಾರನಾಗಿ ಜನರ ನಡುವೆ ಮೂಡಿಬಂದ ರೀತಿ ಎಲ್ಲವನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಹಲವಾರು ಮತದವರನ್ನು, ವೈದಿಕ–ವೈದಿಕೇತರರನ್ನು ಒಂದುಗೂಡಿಸುವ ಪ್ರಯತ್ನ ಧಾರ್ಮಿಕ ಜಾಗೃತಿಯ ಮೂಲಕ ಸಮಾಜದಲ್ಲಿ ಮೇಲುಕೀಳು ಎಂಬ ಜಾತಿಯನ್ನು ತೊಡೆದುಹಾಕಿ ತುಳಸಿರಾಮದಾಸರ ವಿಶಿಷ್ಟಾದ್ವೈತ ತತ್ವಕ್ಕೆ ಅನುಗುಣವಾಗಿಯೇ 'ಹರಿಏಕ' ನಿಷ್ಠೆ ಪ್ರತಿಪಾದಿಸಿದವರು. ವೈದಿಕ ಧರ್ಮ ವಿಸ್ತಾರತೆಯನ್ನು ಹೊಂದಿಲ್ಲ. ಎಂಬುವವರಿಗೆ ಉತ್ತರವೆಂಬಂತೆ ಬೇರೆ ಬೇರೆ ಮತಸ್ಥರನ್ನು ಶಿಷ್ಯರಾಗಿಸಿಕೊಂಡು ಸಮಾನತೆ ಮೆರೆದು, ಕೀರ್ತನೆ ರಚಿಸಿದ ಕೊಡುಗೆ ಶ್ರೀ ತುಳಸಿರಾಮದಾಸರದು.

ವೈಯಕ್ತಿಕ ಜೀವನದಿಂದ ಹಿಡಿದು ಅಂತಿಮ ದಿನಗಳವರೆಗೆ ಜೀವನುತ್ಸಾಹವನ್ನು ಜನರಲ್ಲಿ ಬೆಳಸಿ, ಉತ್ಸವಗಳು, ಹರಿದಾಸರ ಕೀರ್ತನೆಗಳು, ಹರಿಕಥೆಯನ್ನು ಮಾಡಿದ್ದರು. ಎಲ್ಲಾ ದಾಸರಂತೆ ಬದುಕಿದ್ದರೂ, ಆದರೆ ಎಲ್ಲಾ ದಾಸರಂತೆ ಬರೀ ಭಜನೆ, ಕೀರ್ತನೆಯಲ್ಲಿ ಕಾಲಹರಣ ಮಾಡದೆ ಜನರೊಂದಿಗೆ ವಿಶಿಷ್ಟವಾಗಿ ಬದುಕಿದ ವಿವರವು ಹೊಂದಿದೆ.

ಒಟ್ಟಾರೆಯಾಗಿ ಶ್ರೀ ತುಳಸಿರಾಮದಾಸರ ಜೀವನ ವಿವರ, ಕಾಲ ಯಾರ ಕಾಲ ಘಟ್ಟದಲ್ಲಿ ಬರುತ್ತಾರೆಂಬುದನ್ನು ತಿಳಿಯುವುದು ಇತರೆ ದಾಸರ ಮೇಲೆ ತುಳಸಿರಾಮದಾಸರ ಪ್ರಭಾವ, ಇವರ ಮೇಲೆ ತೆಲುಗು ದಾಸ ಸಾಹಿತ್ಯದ ಪ್ರಭಾವ, ಗುರು ಪರಂಪರೆಯಲ್ಲಿ ಶಿಷ್ಯ-ಪ್ರಶಿಷ್ಯ ಪರಂಪರೆ ತಿಳಿಸುವ ವಿಸ್ತಾರ ಪ್ರಯತ್ನ, ಗುರು-ದೈವದ ಸಮನ್ವಯತೆ, 'ಹರಿಏಕ'ನಿಷ್ಠೆ ಕೀರ್ತನೆಗಳ ವಸ್ತು ವೈವಿಧ್ಯತೆ, ಮತ್ತು ಸ್ವರೂಪ ದಂಡಕ ಷಟ್ಪದಿ ಗುರುತಿಸುವಿಕೆ, ಆಂದೋಲನಕಾರನಾಗಿ ತುಳಸಿರಾಮದಾಸರು ಹೇಗೆ ಮೂಡಿರುವರು, ಸಾಮಾಜಿಕವಾದ ಮತ್ತು ಮತಧಾರ್ಮಿಕವಾದ ದೃಷ್ಟಿಕೋನಗಳು, ಒಟ್ಟಾರೆಯಾಗಿ ಕಾಣುವ ವಿಶಿಷ್ಟ ದೃಷ್ಟಿಕೋನಗಳನ್ನು ತಿಳಿಸುವ ಪ್ರಯತ್ನವು ವ್ಯಾಪ್ತಿಯನ್ನು ಒಳಗೊಂಡಿರುತ್ತದೆ.

ಹತ್ತಾರು ವಿಷಯಗಳು ಶ್ರೀ ಗುರುತುಳಸಿರಾಮದಾಸರನ್ನು ಕುರಿತು ಯೋಚಿಸುವ ಹೊಸ ದೃಷ್ಟಿಕೋನಗಳು ಮೂಡಿಬಂದಿರಿವುದು ಗಮನಾರ್ಹ. ಹರಿದಾಸ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ, ದ್ವೈತ-ಅದ್ವೈಗಳ ವಿಶಿಷ್ಟತೆಯು 'ಹರಿಏಕನಿಷ್ಠೆ'ಯಲ್ಲದೆ ಸಮಾಜಮುಖಿಯಾದಂತಹ ದೃಷ್ಟಿಕೋನ ಶ್ರೀ ತುಳಸಿರಾಮದಾಸರು ಮತ್ತು ಅವರ ಕೀರ್ತನೆಗಳಿಂದ ಕಂಡುಬರುತ್ತದೆ.

ನನ್ನ ಈ ಅಧ್ಯಯನಕ್ಕೆ ನಾ. ಗೀತಾಚಾರ್ಯರ ಶ್ರೀ ತುಳಸಿರಾಮದಾಸರು ಎಂಬ ಸಂಪಾದನಾ ಕೃತಿಯನ್ನು ಮತ್ತು ವಂಶಿ ನಿರೂಪಣೆಯ ಶ್ರೀ ತುಳಸಿರಾಮದಾಸರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ಲಕ್ಷ್ಮೀಶತಕ ಎಂಬ ಕೃತಿಗಳನ್ನು ಮುಖ್ಯ ಆಕಾರವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ – ಎರಡು

ಹರಿದಾಸ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆ

ಕನ್ನಡ ಸಾಹಿತ್ಯದಲ್ಲಿ ಹರಿದಾಸ ಸಾಹಿತ್ಯವು ವಿಪುಲವಾಗಿ ಬೆಳೆದಿದೆ. 'ದೇವರ ನಾಮ'ಗಳನ್ನು ಹಾಡುತ್ತಾ ವಿಶಿಷ್ಟವಾದ ಉಡುಪು, ಧಾರ್ಮಿಕ ಲಾಂಛನಗಳನ್ನು ಧರಿಸಿ, ತಂಬೂರಿಯನ್ನು ಮೀಟುತ್ತಾ ಬೀದಿಬೀದಿಗಳಲ್ಲಿ ಸುಳಿದಾಡಿಕೊಂಡು ಬರುವ ದಾಸಯ್ಯರನ್ನು ಹಳ್ಳಿಹಳ್ಳಿಗಳಲ್ಲಿ ಕಾಣುತ್ತೇವೆ. ಮೊದಲಲ್ಲಿ ಪಲ್ಲವಿ ಕೊನೆಯಲ್ಲಿ ಅಂಕಿತಗಳೊಂದಿಗೆ ಒಂದೆರಡು ಚರಣಗಳನ್ನು ಹಾಡುವುದನ್ನು ಒಮ್ಮೊಮ್ಮೆ ಕೇಳಿ ತಲೆದೂಗಿದ್ದೇವೆ.

ಹೆಂಗಸರು ತಮ್ಮ ನಿತ್ಯದ ಕೆಲಸಗಳನ್ನು ಮಾಡುವಾಗ ತಮ್ಮಷ್ಟಕ್ಕೆ ತಾವೇ ಹಾಡುವುದನ್ನು, ಕೆಲವು ವಿಶಿಷ್ಟ ಸಂದರ್ಭಗಳಲ್ಲೂ ತಮ್ಮಷ್ಟಕ್ಕೆ ತಾವೇ ಗುನುಗಿಕೊಳ್ಳುತ್ತಾ ತಪ್ತಃ ಮನಸ್ಸಿನಿಂದ ತಲ್ಲೀನರಾಗಿ, ಯಾವ್ಯವುದೋ ಸಾಲಿನ ಹಾಡುಗಳನ್ನು ಹಾಡುವುದು ಕೇಳಿದ್ದೇವೆ. ಆದರೆ ಹಾಗೇ ಹಾಡುವ ಹಾಡನ್ನು ಯಾರು ಬರೆದರೋ ಅವರಿಗೂ ತಿಳಿಯದು. ಆದರೆ ಅದು ಅವರದೇ ಹಾಡಾಗಿರುತ್ತದೆ.

ಜನ ಸಾಮಾನ್ಯರಲ್ಲಿ ಬೆರೆತಿರುವ "ಕೀರ್ತನ ಸಾಹಿತ್ಯ ಬೇರ್ಪಡಿಸಲಾಗದಂತೆ ಎರಕವಾಗಿ ಬೆರೆತು ಹೋಗಿರುವ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. 'ದೇವರ ನಾಮ' ಎಂದೇ ಪ್ರಸಿದ್ಧವಾಗಿ ಕನ್ನಡ ನಾಲಗೆಯ ಮೇಲೆ ನಲಿದಾಡುವ ಸಾಹಿತ್ಯ ಪ್ರಕಾರ." [೧]

ಸಾಮಾನ್ಯ ಜನರ ನಾಲಿಗೆಯ ಮೇಲೆ ಉದಯಿಸಿದ ಈ ಹಾಡುಗಳಲ್ಲಿ "ವರ್ಣನೆ, ಕೀರ್ತನೆ ಈ ಬಗೆಯ ಮಾತುಗಳಲ್ಲಿ ಒಂದು ರೀತಿಯ ತನ್ಮಯತೆಯಂತೆ ಮುಖ್ಯವಾಗಿ ಕಾಣುವ ಗುಣ, ಕನ್ನಡ ಸಾಹಿತ್ಯದಲ್ಲಿ ಕೀರ್ತನೆ ಇಂಥ ಒಂದು ತನ್ಮಯತೆಯ ಫಲ. ಇದು ಭಗವಂತನನ್ನು ಕುರಿತು ಭಕ್ತನ ತನ್ಮಯತೆ ಅತ್ಯಂತ ತೀವ್ರವಾದ ಭಾಷಾ ಹಾಡಾಗಿ ಹೊಮ್ಮತ್ತದೆ ಎಂಬ ಪ್ರಸಿದ್ಧ ಉಕ್ತಿಗೆ ಕೀರ್ತನೆ ಸಾಕ್ಷಿ ಭಗವಂತನ ಭಕ್ತನ ನಡುವಿನ ಗಾಢ ಸಂಬಂಧದ ನಿಬಿಡಭಾವ ಕೀರ್ತನೆಯಾಗಿ ತನ್ನುನ್ನು ಆಕಾರಗೊಳಿಸಿಕೊಂಡಿದೆ." [೨]

ಮುಂದೆ ಭಗವಂತನನ್ನು ಭಕ್ತನು ಹಾಡಿ ಹೊಗಳುತ್ತಾ ಸಾಗಿದನು. ಇದರ ಮೂಲ ಉದ್ದೇಶ ಬದುಕಿನ ಬಂಧನದಿಂದ ಬಿಡಿಸಿಕೊಳ್ಳುವ ಒಂದು ಪಾಡಾಗಿತ್ತು. ಇಂತಹ ಪಾಡು ಹಾಡಾಗಿ ಕೀರ್ತನೆಗಳ ಸಾಹಿತ್ಯದಲ್ಲಿ ಅರಳಿದೆ.

"ಕೀರ್ತನೆಗಳ ಮುಖ್ಯವಾದ ಭಾವ ಭಕ್ತಿ. ಈ ಭಕ್ತಿ ಏಕದೈವ ನಿಷ್ಠೆಯಿಂದಾಗಿ ಹಂಚಿಹೋಗದೆ ಗಾಢವಾಗುವಂತದ್ದು. ವಿಶ್ವದ ಮೂಲಭೂತ ಸತ್ಯದ ಅರಿವಿಗೆ ಈ ಭಕ್ತಿ ಮಾರ್ಗ ಸುಲಭವೆಂಬುದು ಕೀರ್ತನಕಾರರ ಒಟ್ಟು ಧಾಟಿ. ಇಷ್ಟ ದೈವವನ್ನು ಅವರು ಭಕ್ತಿಯ ನಾನಾ ಮುಖಗಳಿಂದ ಅರ್ಚಿಸುತ್ತಾ ತಮ್ಮ

ದಾರಿಯನ್ನು ಕಂಡುಕೊಳ್ಳುವುದರೊಂದಿಗೆ ಸಮಾಜದಲ್ಲೂ ಒಂದು ಹಾದಿಯನ್ನು ಕೀರ್ತನಕಾರರು ಸಿದ್ಧಪಡಿಸಿಕೊಂಡರು.

ಸಂಸಾರದ ನಿಸ್ಸಾರತೆ, ನಶ್ವರತೆಗಳನ್ನು ಎತ್ತಿ ಹಿಡಿಯುವುದು, ತನ್ಮೂಲಕ ಲೌಕಿಕ ಭೋಗದಲ್ಲಿ ತೊಡಗಿ ಯಾವ ಹೇಯ ಕೃತ್ಯಕ್ಕಾದರೂ ಸಿದ್ಧವಾಗುವ ಮನಸ್ಸನ್ನು ಭಗವಂತನ ಕಡೆ ತಿರುಗಿಸುವುದು, ಹಾಗೆ ತಿರುಗಿಸಿ ಶಾಶ್ವತವಾದ ಸುಖದ ಕಡೆ ಜನಸಾಮಾನ್ಯರನ್ನು ಒಯ್ದು ಸ್ಥಾಪಿಸುವುದು ಈ ಹಾಡುಗಾರರ ಒಟ್ಟು ಗುರಿ" [೩] ಇಂತಹ ಗುರಿಯನ್ನು ಇಟ್ಟುಕೊಂಡು ಭಕ್ತಿ ಪರಂಪರೆಯಲ್ಲಿ ತನ್ನ ವೈಯಕ್ತಿಕ ಸ್ವಾರ್ಥಕ್ಕೆ ಮಾತ್ರ ಹವಣಿಸಿದೆ ಇಡೀ ಸಮಾಜದ ಒಳಿತಿಗೆ ಪ್ರಯತ್ನಿಸಿದ ದೃಷ್ಠಿ ಸಾಮಾಜಿಕವಾಗಿ ವಿಶಿಷ್ಟವಾದುದು.

"ಕನ್ನಡ ಸಾಹಿತ್ಯದಲ್ಲಿ ಕೀರ್ತನೆ ಅಥವಾ ಪದ ಎಂಬುದೇನೂ ಹೊಸದಲ್ಲ. ವೈದಿಕ ಪರಂಪರೆಯಿಂದ ಅದು ಬಂದದ್ದೆಂಬುದು ದೂರದ ಮಾತು. ಕನ್ನಡದ ಮಟ್ಟಿಗೆ ಪಾಡು, ಮೆಲ್ವಾಡು ಭಾಜನೆಗಬ್ಬಗಳಿದ್ದವು. ಆಮೇಲೆ ಶರಣರಲ್ಲಿ ಕೆಲವರು ಪದಗಳನ್ನು ಹಾಡಿದರು. ಅದೇ ಹರಿದಾಸರ ಬಾಯಲ್ಲಿ 'ಕೀರ್ತನೆ ಅಂದರೆ ಸ್ತುತಿ (ಹರಿಸ್ತುತಿ) ಪರವಾದ ಹಾಡಾಯಿತು. ಸಂಗೀತದಲ್ಲಿ ಪ್ರಮಾಣ ಸ್ವರೂಪ ಪಡೆಯಿತು." [೪]

ಹರಿದಾಸರ ಹಾಡುಗಳು ಕೀರ್ತನೆಗಳೆಂದು ಜನಪ್ರಿಯತೆಯನ್ನು ಗಳಿಸಿಕೊಂಡಿದ್ದರೂ ಶರಣರು ಹಾಡಿದ ಪದಗಳೇ ಕನ್ನಡದಲ್ಲಿ ಮೊದಲ ಕೀರ್ತನೆಗಳಾದವು. "ಕ್ರಿ.ಶ ೧೨ನೇ ಶತಮಾನದಲ್ಲಿ ಇಡೀ ಭಾರತೀಯ ಸಾಹಿತ್ಯಕ್ಕೆ ವಚನವೆಂಬ ಅಭೂತಪೂರ್ವ ಕಾಣಿಕೆಯನ್ನು ಕೊಟ್ಟ ಶಿವದಾಸರು, ತಮ್ಮಕಾಲಕ್ಕೆ ಅಥವಾ ತತ್ಪೂರ್ವಕ್ಕೆ ಕನ್ನಡದಲ್ಲಿ ಇಲ್ಲದಿದ್ದ ಹಾಡುಗಳನ್ನು ಬರೆಯಲು ಮೊದಲಿಗರಾದರು, ಶಿವಶರಣರು ಬರೆದ ಈ ಹಾಡುಗಳು ಪಲ್ಲವಿಯಿಂದ ಕೂಡಿ ಬೇರೆಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಗೇಯ ಕೃತಿಗಳು ಮುಂದೆ ೧೫–೧೬ನೇ ಶತಮಾನಗಳಲ್ಲಿ, ಹರಿದಾಸರು ಯಾವ ಕೀರ್ತನ ಸಾಹಿತ್ಯ ಪ್ರಕಾರದಿಂದ ಇಡೀ ದಕ್ಷಿಣ ಭಾರತದ ಸಂಗೀತ ಮತ್ತು ಸಾಹಿತ್ಯ ಪ್ರಪಂಚಗಳೆರಡರಲ್ಲೂ ಅದ್ವಿತೀಯ ಕೀರ್ತಿಯನ್ನು ಗಳಿಸಿದರೋ ಆ ಕೀರ್ತನ ಪ್ರಕಾರಕ್ಕೆ ೧೨ನೇಯ ಶತಮಾನದ ಬಸವಾದಿ ಶಿವದಾಸರ ಈ ಗೀತಾ (ಹಾಡುಗಳ) ಪ್ರಕಾರವು ಮೂಲವೂ, ಮಾದರಿಯೂ ಆಗಿದ್ದಿತೆಂಬ ಎಲ್, ಬಸವರಾಜು ಅವರ ಅಭಿಪ್ರಾಯ ಕೀರ್ತನ ಸಾಹಿತ್ಯದ ಉಗಮದ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಶ್ರೀ ಬಸವರಾಜು ಅವರು ಶಿವದಾಸ ಗೀತಾಂಜಲಿ ಸುದೀರ್ಘ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವಂತೆ ಶಿವಶರಣರು ಹಾಡುಗಳನ್ನು ಬರೆದಿರುವರು ಎಂಬುದಕ್ಕೆ ನಮಗೆ ಆಧಾರಗಳಿದ್ದರೂ ಅವರ ಹಾಡುಗಳು ನಮಗೆ ಸಿಕ್ಕಿಲ್ಲ. ಆದರೆ ೧೨ನೇ ಶತಮಾನದ ಬಸವನೂ ಅವನ ಸಂಗಡಿಗರೂ ಸಮಕಾಲೀನರೂ ಆದ, ಶರಣರು ರಚಿಸಿದ ಹಾಡುಗಳು ನಮಗೆ ಹೇರಳವಾಗಿ ದೊರೆಯುತ್ತವೆ." [೫] ಎಂದು ಎಲ್ ಬಸವರಾಜುರವರು ಶಿವದಾಸ ಗೀತಾಂಜಲಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಸಕಳೇಶ ಮಾದರಸ, ಬಸವೇಶ್ವರ, ಅಲ್ಲಮಪ್ರಭು, ಚೆನ್ನ ಬಸವೇಶ್ವರ, ಸಿದ್ಧರಾಮ, ಅಕ್ಕಮಹಾದೇವಿ, ನೀಲಲೋಚನೆ ಮೊದಲಾದವರು ೧೨ನೇ ಶತಮಾನದಲ್ಲಿ ಹಾಡುಗಳನ್ನು ಬರೆದವರಲ್ಲಿ ಪ್ರಮುಖರಾಗಿ ಕಂಡು ಬರುತ್ತಾರೆ.

"ಸಕಳೇಶ ಮಾದರಸರ ಒಂದು ಹಾಡೇ ಅತ್ಯಂತ ಪ್ರಾಚೀನವಾದುದೆಂದು"[1] ಎಲ್ ಬಸವರಾಜುರವರ ಅಭಿಪ್ರಾಯ. ಬಸವೇಶ್ವರರ ಹಿರಿಯ ಸಮಕಾಲೀನರಾದ ಸಕಳೇಶ ಮಾದರಸನಿಂದ ೧೨ನೇಯ ಶತಮಾನದಲ್ಲಿ ಕೀರ್ತನ ಸಾಹಿತ್ಯದ ಪರಂಪರೆ ಪ್ರಾರಂಭವಾಯಿತೆಂದು ಹೇಳಬಹುದು.

೧೩ನೇ ಶತಮಾನದಲ್ಲಿ ರಾಘವಾಂಕನು ಹರಿಹರನನ್ನು ಕುರಿತು ಸ್ತುತಿಸಿ ಬರೆದಿರುವ ಹಾಡೊಂದನ್ನು ಶಿವದಾಸ ಗೀತಾಂಜಲಿಯ ಎಲ್ ಬಸವರಾಜುರವರು ಪ್ರಕಟಿಸಿರುವುದು ಗಮನಾರ್ಹ. "೧೪ ನೇ ಶತಮಾನದಲ್ಲಿ ಗುರುಪುರದ ಮಲ್ಲ ೧೫ನೇ ಶತಮಾನದಲ್ಲಿ ಗುರುಬಸವ, ಕರಸ್ಥಲದ ನಾಗಿದೇವ, ನಿರ್ವಾಣಿ ಬೋಳೇಶ, ಶಂಕರದೇವ, ೧೬ನೇ ಶತಮಾನದಲ್ಲಿ ೨ನೇನಿಜಗುಣ, ೧೭ನೇ ಶತಮಾನ, ೧೮ನೇ ಶತಮಾನದ ಮತ್ತು ೧೯ನೇ ಶತಮಾನದಲ್ಲಿ ಕ್ರಮವಾಗಿ ಷಡಕ್ಷರಿ, ಸಪ್ಪಣ್ಣ, ಬಾಲಲೀಲ, ಮಹಾಂತಲಿಂಗ,"[2] ಮೊದಲಾದ ಶಿವಶರಣರು ಮುಖ್ಯರಾಗುತ್ತಾರೆ.

ನರಹರಿತೀರ್ಥರು ೧೩ ಮತ್ತು ೧೪ ನೇ ಶತಮಾನದ ಹರಿದಾಸ ಕೀರ್ತನ ಪರಂಪರೆಯ ಆದ್ಯ ಕೃತಿಕಾರನಾಗಿರುವುದು. ೧೫ನೇ ಶತಮಾನದಲ್ಲಿ ಗುರುತರವಾದ ಹರಿದಾಸರು ಕಂಡು ಬರುವುದಿಲ್ಲ. ೧೬ನೇ ಶತಮಾನದಲ್ಲಿ ಒಂದು ಪ್ರವಾಹದಂತೆ ದಾಸ ಸಾಹಿತ್ಯ ಹರಿದು, ಪುರಂದರದಾಸರು, ಕನಕದಾಸರ ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗೆ, ಒಂದು ಆಂದೋಲನ ಸ್ವರೂಪವನ್ನು ತಂದುಕೊಟ್ಟಿದ್ದಾರೆ. ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ. ಈ ಕಾಲದ ಹರಿದಾಸರು ಕೀರ್ತನ ಸಾಹಿತ್ಯದ ಸಮೃದ್ಧ ಬೆಳವಣಿಗೆಗೆ ಕಾರಣರಾಗಿದ್ದಾರೆ.

ಕರ್ನಾಟಕ ಸಂಗೀತದ ಪಿತಾಮಹ ಎನಿಸಿದ್ದ ಪುರಂದರದಾಸರು (ಕ್ರಿ.ಶ, ೧೪೮೦-ಕ್ರಿ.ಶ, ೧೫೬೪) ಅವರ ಅಂತ್ಯದೊಂದಿಗೆ ವೈದಿಕ ಪರಂಪರೆ ದಕ್ಷಿಣ ಭಾರತದಲ್ಲಿ ಅಂತ್ಯಗೊಂಡಿತು. ವಿಜಯನಗರ ಪತನಾ ನಂತರ (ಕ್ರಿ.ಶ, ೧೫೬೫) ಮತ್ತೆ ವೈದಿಕ ಧರ್ಮ ಉಳಿಯುವಂತೆ ಮಾಡಿದವರು ಮಹಿಪತಿರಾಯರು. (ಕ್ರಿ.ಶ, ೧೬೪೦-೧೭೧೦).

ದಾಸ ಸಾಹಿತ್ಯದ ದ್ವಿತೀಯ ಘಟ್ಟ ೧೭ನೇ ಶತಮಾನದ ಕೊನೆಯಲ್ಲಿ ಮತ್ತೆ ಪ್ರಾರಂಭವಾಗಿ ವ್ಯಾಸರಾಯರು ೧೬ನೇ ಶತಮಾನದ ದಾಸಕೂಟದ ಕೇಂದ್ರ ಬಿಂದುವಾದರು. ರಾಘವೇಂದ್ರ ತೀರ್ಥರು ದಾಸಕೂಟದ ಸ್ಫೂರ್ತಿ ಕೇಂದ್ರ ಬಿಂದುವಾಗಿ ೧೭ನೇ ಶತಮಾನದಲ್ಲಿ ಕಂಡುಬಂದರು.

ವ್ಯಾಸರಾಯರ ಶಿಷ್ಯರಾಗಿ ಪುರಂದರದಾಸರು ವಹಿಸಿದ ಪಾತ್ರವನ್ನು, ರಾಘವೇಂದ್ರ ಶಿಷ್ಯರಾದ ವಿಜಯದಾಸರು ನಿರ್ವಹಿಸಿದರು. ಇವರ ನೇತೃತ್ವದಲ್ಲಿ ಜಗನ್ನಾಥದಾಸ, ಗೋಪಾಲದಾಸ, ಮೋಹನದಾಸರಿಂದ ಕೀರ್ತನ ಸಾಹಿತ್ಯ ಮತ್ತೆ ವಿಜೃಂಭಿಸಲು ಕಾರಣರಾದರು.

೧೨ನೇ ಶತಮಾನದಲ್ಲಿ ನಿಧಾನವಾಗಿ ಹರಿದ ಈ ದಾಸ ಸಾಹಿತ್ಯದ ಪ್ರಕಾರ ೧೬ನೇ ಶತಮಾನದಲ್ಲಿ ತತ್ವಪದಗಳ ಸೀಳು ಕೂಡಿಕೊಂಡು "೧೭ನೇ ಶತಮಾನದಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ತಿರುಮಲಾರ್ಯ ಮೊದಲಾದ ಶ್ರೀ ವೈಷ್ಣವರು ಅನೇಕ ಕೀರ್ತನೆಗಳನ್ನು ರಚಿಸಿ ಕೀರ್ತನ ಸಾಹಿತ್ಯದ ಪರಂಪರೆಗೆ ಮತ್ತೊಂದು ಉಪನದಿ ಸೇರಲು ಕಾರಣರಾದರು. ಈ ಮಧ್ಯೆ ಜೈನ, ಕ್ರೈಸ್ತ, ಮಹಮ್ಮದೀಯ ಹಾಡುಗಾರರೂ ಆಗಾಗ ತಮ್ಮ ತಮ್ಮ ಕಿರು ಝರಿಗಳನ್ನು ಈ ಮೂಲ ಸ್ತೋತ್ರಕ್ಕೆ ಕೂಡಿಸಿದರು. ೨೦ನೇ ಶತಮಾನದ ಪ್ರಾರಂಭದಲ್ಲಿ ನವೋದಯ ಕವಿಗಳು ವಸ್ತು ವೈವಿಧ್ಯತೆವುಳ್ಳ ಅನೇಕ ಕೀರ್ತನೆಗಳನ್ನು ರಚಿಸಿ ಪರಂಪರೆಯನ್ನು ಅಂದಿನಿಂದ ಇಂದಿಗೆ ತಂದು ತಲುಪಿಸಿದ್ದಾರೆ." [೮]

ಕನಕದಾಸರು ಕೂಡ ವಿಶಿಷ್ಟಾದ್ವೈತಕ್ಕೆ ಬದ್ಧರಾಗಿದ್ದಾರೆಂಬ ಸೂಚನೆಗಳು ಅವರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ೧೭ನೇ ಶತಮಾನದ ನಂತರ ಇನ್ನೇನು ದಾಸ ಸಾಹಿತ್ಯ ವಿನಾಶದ ಅಂಚಿನಲ್ಲಿದೆ ಎಂದು ಊಹಿಸಿಕೊಳ್ಳುತ್ತಿರುವಾಗಲೇ ೧೯ನೇ ಶತಮಾನದಲ್ಲಿ ಹೊಸ ಆಶಾಕಿರಣವೊಂದು ಕಾಣಿಸಿಕೊಂಡಿತು. ಅಧ್ಯಯನಕ್ಕೆ ಆರಿಸಿಕೊಂಡಿರುವ ಆಂಧ್ರದ ಕೀರ್ತನ ಸಾಹಿತ್ಯವನ್ನು ಬೆಳೆಸಿದ ಮತ್ತು ಕನ್ನಡದಲ್ಲೂ ಕೀರ್ತನೆಗಳನ್ನು ರಚಿಸಿ ಸಾಹಿತ್ಯವನ್ನು ಪ್ರಚಾರ ಮಾಡಿದ, ಇಂದಿಗೂ ಮುಂದಕ್ಕೂ ಉಳಿಯುವಂತೆ ಶಿಷ್ಯ ಪರಂಪರೆಯ ಬುನಾದಿಯಾಗಿ ಶ್ರೀ ತುಳಸಿರಾಮದಾಸರನ್ನು ಕಾಣಬಹುದು.

ಅಡಿ ಟಿಪ್ಪಣಿಗಳು

೧. ಎಚ್, ಎಸ್, ವೆಂಕಟೇಶಮೂರ್ತಿ: ಕೀರ್ತನಕಾರರು. ಸಂಪುಟ ೮, ಪು ೧, ಮರುಮುದ್ರಣ, ೨೦೦೦

೨. ಅದೇ ಪುಟ

೩. ಪುಟ ೩

೪. ರಂ, ಶ್ರೀ ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ; ಪು, ೨೭೮, ೧೯೭೧

೫. ಎಲ್, ಬಸವರಾಜು : ಶಿವದಾಸ ಗೀತಾಂಜಲಿ ಪು, ೭೭, ೧೯೬೩

೬. ಡಾ. ಎಚ್, ಎಸ್, ವೆಂಕಟೇಶಮೂರ್ತಿ: ಕೀರ್ತನಕಾರರು. ಪು ೪

೭. ಡಾ. ಎಚ್, ಎಸ್, ವೆಂಕಟೇಶಮೂರ್ತಿ: ಕೀರ್ತನಕಾರರು. ಪು ೬

೮. ಡಾ. ಎಚ್, ಎಸ್, ವೆಂಕಟೇಶಮೂರ್ತಿ: ಕೀರ್ತನಕಾರರು. ಪು ೯

ಅಧ್ಯಾಯ – ಮೂರು

ತುಳಸಿರಾಮದಾಸರ ಕಾಲ ಮತ್ತು ಜೀವನ ವಿವರ

ಕಾಲ:–

ತುಳಸಿರಾಮದಾಸರ ಕಾಲವನ್ನು ನಿರ್ಧರಿಸುವುದು ಅಗತ್ಯವಾಗಿದೆ. ಏಕೆಂದರೆ ಕನ್ನಡ ಸಾಹಿತ್ಯ ಚರಿತ್ರಯಲ್ಲಿ ಸೇರ್ಪಡೆಯಾಗದೆ ಇರುವ ಎಷ್ಟೋ ಹರಿದಾಸರಲ್ಲಿ ಶ್ರೀ ತುಳಸಿರಾಮದಾಸರು ಕೂಡ ಒಬ್ಬರಾಗಿದ್ದಾರೆ. ಇವರ ಹೆಸರು ಸಾಹಿತ್ಯ ಕೃತಿಗಳಲ್ಲಿ ಎಲ್ಲಿಯೂ ಕೇಳಿಬರುವುದಿಲ್ಲ. ಆದಕಾರಣ ಯಾವ ಕಾಲಘಟ್ಟದಲ್ಲಿ ಕಂಡುಬರುತ್ತಾರೆ. ಯಾರು ಸಮಕಾಲೀನರಾಗುತ್ತಾರೆ ಎಂಬುದನ್ನು ಗುರುತಿಸುವುದು ಅವಶ್ಯವೆನಿಸಿದೆ.

"ಹರಿದಾಸ ಪರಂಪರೆಯಲ್ಲಿ ಸುಮಾರು ೧೫ ನೇ ಶತಮಾನದದಿಂದ ೨೦ನೇ ಶತಮಾನದವರೆಗೆ ಹಬ್ಬಿಕೊಂಡಿದ್ದ ಹರಿದಾಸ ಸಾಹಿತ್ಯದಲ್ಲಿ ೩೦೦ಕ್ಕಿಂತ ಅಧಿಕವಾಗಿ ಹರಿದಾಸರು ಹರಿಭಕ್ತಿಪಾರಾಯಣಿಯರು ದೊರಯುತ್ತಾರೆ.

ಶ್ರೀ ಪಾದರಾಯರಿಂದ ಪ್ರಾರಂಭವಾದ ಹರಿದಾಸ ಸಾಹಿತ್ಯದ ಕೃಷಿಯಲ್ಲಿ ಮಹಿಳೆಯರೂ ಪಾಲ್ಗೊಳ್ಳಲು ಮತ್ತೆ ಮೂರು ಶತಮಾನಗಳು ಕಾಯಬೇಕಾಯಿತು. ೧೭–೧೮ ನೇ ಶತಮಾನದಲ್ಲಿಯ ಗಲಗಲಿಯ ಅವ್ವ, ಪ್ರಯಾಗ ಬಾಯಿ, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಮತ್ತು ಇತ್ತೀಚಿನ ಕಾಲದಲ್ಲಿಯ 'ಓರಾಬಾಯಿ' ಮಹಿಳಾ ಹರಿದಾಸ ಸಾಹಿತಿಗಳಲ್ಲಿ ಪ್ರಮುಖರು.

ಮುನ್ನೂರರಲ್ಲಿಯ ಪ್ರಮುಖ ಕೆಲವು ಹರಿದಾಸರನ್ನು ಹೇಳುವುದಾದರೆ ಮೊದಲ ಘಟ್ಟದಲ್ಲಿ ಕ್ರಿ.ಶ, ಸು ೧೪ರಿಂದ ೧೬ನೇ ಶತಮಾನ ಈ ಕಾಲಾವಧಿಯಲ್ಲಿ ಶ್ರೀ ಪಾದರಾಯರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು, ಬೇಲೂರು ವೈಕುಂಠದಾಸರು ಕಂಡುಬರುತ್ತಾರೆ.

ದ್ವಿತೀಯ ಘಟ್ಟದಲ್ಲಿ ಸು, ಕ್ರಿ.ಶ, ೧೭–೧೮ನೇ ಶತಮಾನ ಈ ಅವಧಿಯಲ್ಲಿ ಕಾಖಂಡಕಿ, ಮಹಿಮಾಪತಿದಾಸರು, ಕೃಷ್ಣದಾಸರು, ಬಾಗಿಲುಕೋಟೆಯ ಪ್ರಸನ್ನ ವೆಂಕಟದಾಸರು ಗುರುತಿಸಲ್ಪಡುತ್ತಾರೆ.

ತೃತೀಯ ಘಟ್ಟದಲ್ಲಿ ಸು, ಕ್ರಿ.ಶ, ೧೮–೧೯ನೇ ಶತಮಾನ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮೋಹನದಾಸರು, ವಾಸುದೇವವಿಠ್ಠಲರು, ವ್ಯಾಸ ತತ್ವಜ್ಞರು.

ಚತುರ್ಥ ಘಟ್ಟದಲ್ಲಿ ಕ್ರಿ, ಶ, ೧೯–೨೦ನೇ ಶತಮಾನ ಪ್ರಾಣೇಶ ವಿಠಲ, ಶ್ರೀದವಿಠಲ, ಅಭಿನವ, ಜನಾರ್ಧನ ವಿಠಲ, ಕಮಲೇಶ ವಿಠಲ, ಇಂದಿರೇಶ, ಪರದೇಶ ವಿಠಲ, ಅನಂತಾದ್ರೀಶ, ವಿದ್ಯಾಪ್ರಸನ್ನ ತೀರ್ಥರು, ಶಿರಿ ಗೋವಿಂದ ವಿಠಲ, ಶಾಮಸುಂದರ ವಿಠಲ" [೧]

ಹೀಗೆ ಹರಿದಾಸ ಪರಂಪರೆಯ ಕಾಲಘಟ್ಟವನ್ನು ವಿಭಾಗಿಸಿ ನೋಡಿದಾಗ ಶ್ರೀ ತುಳಸಿರಾಮದಾಸರು ಕ್ರಿ, ಶ, ೧೮೪೭–೧೯೦೩ ಅಥವಾ ೧೯ನೇ ಶತಮಾನದಲ್ಲಿ ಕಂಡುಬರುತ್ತಾರೆಂಬುದು ಸ್ಪಷ್ಟವಾಗುತ್ತದೆ.

ವೈದಿಕ ಪರಂಪರೆಯು ವೈದಿಕ ಧರ್ಮದ ಮೂರು ತತ್ವಗಳಲ್ಲಿ ಹರಿದಾಸ ಸಾಹಿತ್ಯ ಪ್ರವಹಿಸಿದ್ದ ಸಮೃದ್ಧತೆಯನ್ನು ಕಾಣಬಹುದಾಗಿದೆ. "ಕನ್ನಡ ಸಾಹಿತ್ಯದಲ್ಲಿ ದ್ವೈತ ಅದ್ವೈತದಂತೆ ವಿಶಿಷ್ಟಾದ್ವೈತ ಸಾಹಿತ್ಯ ಸೃಷ್ಟಿಯಾಗಲೇ ಇಲ್ಲ. ಎಂಬ ಒಂದು ಸಾಮಾನ್ಯ ಅಭಿಪ್ರಾಯ ೯೦ರ ದಶಕದವರಗೆ ಸಾಹಿತ್ಯ ವಲಯದಲ್ಲಿತ್ತು. ಆದರೆ ಆ ದಶಕದಲ್ಲಿ ಆದ ಸಂಶೋಧನೆಯಿಂದ ಆ ಅಭಿಪ್ರಾಯ ಬದಲಾಗಿದೆ. ವಿಶಿಷ್ಟಾದ್ವೈತದಲ್ಲೂ ಸಾಹಿತ್ಯವೂ ಸತ್ವಯುತವಾಗಿಯೇ ಕನ್ನಡ ಸಾಹಿತ್ಯದಲ್ಲಿದೆ ಎಂಬುದು ನಿರ್ಧಾರವಾಗಿದೆ."[೨] ಈ ನಿಟ್ಟಿನಲ್ಲಿ ಯೋಚಿಸುವುದಾದರೆ ದ್ವೈತ ಅದ್ವೈತಗಳ ಸುಂದರ ಸಮ್ಮಿಳನದಿಂದ ವಿಶಿಷ್ಟಾದ್ವೈತದ ವಿಶಿಷ್ಟತೆ ಕಂಡು ಬರುವುದು ಹರಿಏಕನಿಷ್ಠೆಯ ಮೂಲಕ.

ಶ್ರೀ ತುಳಸಿರಾಮದಾಸರು ವಿಶಿಷ್ಟಾದ್ವೈತದ ಹರಿಏಕನಿಷ್ಠೆಯನ್ನು ಹೊಂದಿದವರಾಗಿ ೧೯ನೇ ಶತಮಾನದ ಶ್ರೀ ವೈಷ್ಣವ ಹರಿದಾಸರಾಗಿ ದಕ್ಷಿಣ ಕರ್ನಾಟಕದಾದ್ಯಂತ ಮನೆಮಾತಾಗಿದ್ದ ಮಹಾಮಹಿಮರೆನಿಸಿದ್ದವರು.

"ಕ್ರಿ.ಶ, ೧೮೪೭–೧೯೦೩ ರವರೆಗೆ ಜೀವಿಸಿದ್ದರೆಂದು" ಹರಿದಾಸ ಕೃತಿಯಲ್ಲಿ ಮತ್ತು ಚೌಡಯ್ಯನವರ ಪುಸ್ತಕದಲ್ಲಿ ದೊರಕುತ್ತದೆ.

ಜೀವನ ವಿವರ:–

ಶ್ರೀ ತುಳಸಿರಾಮದಾಸರು "ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ಸಿದ್ದವಟಂ ಎಂಬ ಗ್ರಾಮದಲ್ಲಿ ವಡಗಲೆ ಸಂಪ್ರದಾಯವನ್ನು ಅವಲಂಬಿಸಿ ಪ್ರಸನ್ನ ವೈಷ್ಣವ ಕುಲದಲ್ಲಿ ಕೊಂಡಯ್ಯ ಮತ್ತುಯ ವೆಂಕಟಲಕ್ಷ್ಮಮ್ಮ ಎಂಬ ಸಾತ್ವಿಕ ದಂಪತಿಗಳಿಗೆ ಪ್ಲವಂಗಾಷಾಢ ಬಹುಳ ದಶಮಿ ಶುಕ್ರವಾರ ಚಂದ್ರಾದಿತ್ಯ ಮೃಗಶಿರ ಪ್ರಥಮ ಚರಣ ಧನುರ್ಲಗ್ನದ ಶುಭ ವೇಳೆಯಲ್ಲಿ (ತಾ. ೧೩.೦೭.೧೮೪೭) ರಲ್ಲಿ ಇವರು ಪೂರ್ವ ಋಷಿಗಳ ಅವತಾರವಾಗಿ ಜನ್ಮವೆತ್ತಿದರು."[೩] ಎಂದು ಹೇಳಲಾಗಿದೆ.

ಶ್ರೀ ತುಳಸಿರಾಮದಾಸರ ಹುಟ್ಟು ಪೂರ್ವ ಋಷಿಗಳ ನಿರ್ಧಾರದಂತಿದೆ. ಅತೀ ಸಂಪದ್ಯುಕ್ತವಾದ ಶ್ರೀ ತಿರುಮಲಾಧೀಶನಾದ ಶ್ರೀ ಶ್ರೀನಿವಾಸನೇ ತುಳಸಿರಾಮದಾಸನೆಂಬ ಹೆಸರಿನಿಂದ ಅವತಾರ ಪುರುಷನಾಗಿ ಭೂಮಿಯಲ್ಲಿ ಹುಟ್ಟಿದನೆಂದು ತಿಳಿಯುತ್ತದೆ. ಮತ್ತು "ಜನನ ಮರಣಗಳೆಂಬ ಸಮುದ್ರದ ಅಲೆಗಳಿಗೆ ಸಿಲುಕಿರುವ ಜೀವಿಗಳಿಗೆ ಮುಕ್ತಿಯನ್ನುಂಟು ಮಾಡಲು" ಸಕಲ ಚೇತನರಿಗೂ ಸನ್ಮಾರ್ಗದ ಕಡೆ ದಾರಿ ತೋರಿಸಲು ದೈವಾಂಶ ಸಂಭೂತನಾಗಿ ತುಳಸಿರಾಮದಾಸರು ಭರತ ಖಂಡದಲ್ಲಿ ಹುಟ್ಟಿದ್ದಾರೆ.

ಶ್ರೀ ತುಳಸಿರಾಮದಾಸರ ತಂದೆಯರಾದ ಕೊಂಡಪ್ಪನವರು ವೈಷ್ಣವ ಸಂಪ್ರದಾಯವನ್ನು ಅನುಸರಿಸಿ ನಡೆದವರು ಮತ್ತು ಪರಮ ಭಾಗವತ್ತೋತ್ತಮವರಾಗಿದ್ದರು. ತಾಯಿ ವೆಂಕಟಲಕ್ಷ್ಮಮ್ಮನವರು ದೈವ ನಿಷ್ಠೆಯನ್ನು ಹೊಂದಿದ್ದರು. ಪರಮ ಸಾಧ್ವಿಯಾಗಿದ್ದರು. ಭಾಗವತ ಶಿರೋಮಣಿಯೆನಿಸಿದ್ದರು.

ಮಗನಿಗೆ ಜಾತಾಕಾದಿ ಕ್ರಿಯಗಳನ್ನು ಮಾಡಿ ಕೆಲವು ಕಾಲ ತಾಡಪರ್ತಿಯಲ್ಲಿನ ಭಾಸ್ಕರಚಾರ್ಯರಲ್ಲಿ ವಿಧ್ಯಾಭ್ಯಾಸದ ಸಲುವಾಗಿ ಶ್ರೀ ತುಳಸಿರಾಮದಾಸರನ್ನು ಬಿಟ್ಟರೆಂದು, ನೆಪ ಮಾತ್ರವಾಗಿ ಗುರುಗಳ ಸನ್ನಿಧಿಯಲ್ಲಿ ಇದ್ದುಕೊಂಡು ವಿಧ್ಯಾಭ್ಯಾಸವನ್ನು ಪೂರೈಸಿದ್ದಾರೆ. ವೇದಾಂತಗಳಲ್ಲಿ ತಾರಕ ವಿಷಯಗಳಲ್ಲಿ ನಿಷ್ಠೆಯಿದ್ದು ಮತ್ತು ಆಧಾರಭೂತವಾದ ವಿಶಿಷ್ಟಾದ್ವೈತವನ್ನು ತಿಳಿದುಕೊಂಡಿದ್ದರು.

ಶ್ರೀ ತುಳಸಿರಾಮದಾಸರು ವಿಶ್ವಕ್ಸೇನ ಮತ್ತು ಶಠಗೋಪ ಅಂಶವೆಂದು ನಂಬಲಾಗಿದೆ. ಸಂಪ್ರದಾಯ ಬದ್ಧವಾದ ಗುರು ಪರಂಪರೆಯಲ್ಲಿ ಬಹುಕಾಲವಿದ್ದ ದಾಸರು ಎಂದಿಗೂ ಮರೆಯಲಾಗದ ಪವಿತ್ರವಾದ ಧರ್ಮ ಸೂತ್ರಗಳನ್ನು ತಿಳಿದುಕೊಂಡಿದ್ದರು. ಇವರು ತಮ್ಮ ೨೦ ನೇ ವಯಸ್ಸಿನ ಹೊತ್ತಿಗೆ ಕಾವ್ಯ, ಸಂಗೀತ, ಸಾಹಿತ್ಯ, ವ್ಯಾಕರಣ ಜ್ಯೋತಿಷ್ಯ ಹೀಗೆ ಹಲವು ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿದ್ದರು. ಹಲವು ಭಾಷೆಗಳಲ್ಲಿಯೂ ಪ್ರಾವೀಣ್ಯತೆಯನ್ನು ಪಡೆದಿದ್ದರು.

ಇವರು ಅಹೋಬಲವೆಂಬ ಪರ್ವದಲ್ಲಿನ ಪಂಜಲಗವಿಯಲ್ಲಿ ಶಠಗೋಪಯತೀಶ್ವರರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದರೆಂದು ಸಕ್ರಮವಾಗಿ ಪಂಚ ಸಂಸ್ಕಾರಗಳನ್ನು ಪಡೆದು ಪ್ರಪತ್ತಿ ಮಾಡುತ್ತಿದ್ದರು.

ಗುರು ಪರಂಪರೆಯಲ್ಲಿದ್ದ ಇವರಿಗೆ ಗುರುವು "ನನ್ನ ಉದ್ದೇಶವು ನಿನ್ನ ಉದ್ದೇಶವೂ ಒಂದೇ ಆಗಿದ್ದರೆ ಓ ಪ್ರಿಯ ಶಿಷ್ಯ ಈ ಆಶೀರ್ವಾದ ವಿಶೇಷದಿಂದ ನೀ ಮಹಾದಾಂಶ ಮಹಾಮಹಿಮೆ ಶಾಶ್ವತವಾಗಿರುತ್ತದೆ." ಎಂದು ಹೇಳಿ ಆಶೀರ್ವದಿಸಿದ್ದರಂತೆ. ಗುರುವಿನ ಆಶೀರ್ವಾದದ ಜೊತೆಗೆ ಸಕಲ ವಿದ್ಯೆಗಳನ್ನು ಪಡೆದು (ಪ್ರಾವೀಣ್ಯತೆ ಹೊಂದಿ) ಮುಂದೆ ಅವರು ಮಹಾ ಮಹಿಮರಾಗಿ ಬೆಳೆದರು.

"ಶಾಲಿವಾಹನ ಶಕ ೧೭೭೫ ನೇ (ಕ್ರಿ.ಶ, ೧೮೭೩) ರಲ್ಲಿ ಅಕ್ಷಯ ಸಂವತ್ಸರದಲ್ಲಿ ತಂದೆತಾಯಿಗಳು ಗತಿಸಿದರು. ನಂತರ ಪೂರ್ವ ಸಂಕಲ್ಪದಂತೆ, ಲೌಕಿಕ ಆಸಕ್ತಿಯನ್ನು ತೊರೆದ ಶ್ರೀ ತುಳಸಿರಾಮದಾಸರಿಗೆ ಸಹಜವಾಗಿಯೇ ಹರಿಭಕ್ತಿಯ ಅಂಕುರಾರ್ಪಣವಾಯಿತು.

ಶಾಲಿವಾಹನ ಶಕ ೧೭೭೫ನೇ ಸಂವತ್ಸರದಲ್ಲಿ ನರ ನಾರಾಯಣ ತಪಸ್ಥಾನವಾದ ಬದರಿಕಾಶ್ರಮದಲ್ಲಿ ನೆಲೆಸಿರುವ ಆದಿನಾರಾಯಣಮೂರ್ತಿ ಇವರ ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ "ಕರ್ನಾಟಕದಲ್ಲಿ ಆಂಗ್ಲೇಯರ ಪ್ರವೇಶದಿಂದ ಹಿಂಧೂ ಧರ್ಮ ನಾಶವಾಗುತ್ತಿದ್ದು ನೀನು ನನ್ನ ಅವತಾರ ರೂಪದಲ್ಲಿ ಉದ್ದರಿಸು ಎಂದು ಸಂದೇಶವಿತ್ತರಂತೆ" ಈ ಸಂದರ್ಭದಲ್ಲಿ ರಾಮಾನುಜಾಚಾರ್ಯರು ಮತ್ತು ವೇದಾಂತದೇಶಿಕರು ತಾವು ರೂಪಿಸಿದ ಸಿದ್ಧಂತಗಳನ್ನು ಅನುಷ್ಠಾನ ಮಾಡಬೇಕೆಂದು ಅಂದುಕೊಳ್ಳುವಷ್ಟರಲ್ಲಿ ಕರ್ನಾಟಕಕ್ಕೆ ಆಂಗ್ಲರು ಹೆಚ್ಚು ಹೆಚ್ಚು ಬರಲಾರಂಭಿಸಿದ್ದರು. ಇವರ ದಬ್ಬಾಳಿಕೆ ಕೇವಲ ಜನ ಸಾಮಾನ್ಯರ, ಅಧಿಕಾರದ ಮೇಲೆ ಮಾತ್ರವಾಗಿರಲಿಲ್ಲ. ವೈದಿಕ ಧರ್ಮದ ವ್ರತ, ಆಚರಣೆ, ಧ್ಯಾನ, ಪೂಜೆಗಳಿಂದ ಕೂಡಿದ ಹಿಂಧೂ ಧರ್ಮದ ಮೇಲೆ ತೀವ್ರತರವಾದ ಪರಿಣಾಮ ಉಂಟಾಗಿತ್ತು. ಅಧಿದೇವನ ಉದ್ದೇಶವೂ ಹಿಂದೂ ಮತದ ಉದ್ಧಾರವು

ಆಗಬೇಕೆಂಬ ಆಶಯವಿತ್ತು. ಅಧಿದೇವನ ಅಣತಿಯಂತೆ ಶ್ರೀ ತುಳಸಿರಾಮದಾಸರು ಬೆಂಗಳೂರಿನ ಹತ್ತಿರವಿರುವ ಕರಣ್ಣೆ ಪಾಳ್ಯದಲ್ಲಿ ಬಂದು ನೆಲೆಸಿದರು. ಅಲ್ಲಿ ನೆಲೆಯಾಗಿ ನಿಂತು ಹಲವಾರು ಮಂದಿ ಭಕ್ತಾದಿಗಳನ್ನು ಒಂದು ಕಡೆ ಸೇರುವಂತೆ ಮಾಡಲು ಧರ್ಮ ಜಾಗೃತಿ ಮೂಡಿಸಿ, ಹಲವಾರು ರಾಮೋತ್ಸವಗಳನ್ನು, ಕೃಷ್ಣೋತ್ಸಗಳನ್ನು ಮಾಡಿ ಜನ ಸಾಮಾನ್ಯರ ಮನಸ್ಸನ್ನು ಭಕ್ತಿಯ ಮಾರ್ಗದ ಕಡೆ ಗಮನ ಸೆಳೆದರು. ಅನೇಕ ಭಜನೆ ಮಂದಿರಗಳನ್ನು ನಿರ್ಮಾಣ ಮಾಡಿಸಿದರು. ಅನೇಕ ಸಂಕೀರ್ತನೆಗಳನ್ನು ಮಾಡಿದರು. ಎಂಬ ವಿಷಯಗಳು ಹರಿಕಥಾ ಕೃತಿಯು ದಾಖಲಿಸುತ್ತದೆ. ಈ ವೇಳೆಗಾಗಲೇ ಶ್ರೀ ತುಳಸಿರಾಮದಾಸರಿಗೆ ೨೬ ವರ್ಷಗಳು ತುಂಬಿದ್ದವು. ಹೋದ ಕಡೆಯಲ್ಲೆಲ್ಲ ಮಠ ಮಾನ್ಯರು, ಮಹಾರಾಜರು, ಜನ ಸಾಮಾನ್ಯರು ಇವರನ್ನು ಗೌರವಿಸಿ ಸಂಕೀರ್ತನೆಗಳನ್ನು ಹಾಡಿಸಿ ಹರಿಕಥೆಗಳನ್ನು ಮಾಡಿಸಿ ಸತ್ಕರಿಸಿ ಬಿರುದುಗಳನ್ನು ನೀಡಿ ಗೌರವಿಸುತ್ತಿದ್ದರು. ಹಲವಾರು ಶಿಷ್ಯರು ಶ್ರೀ ತುಳಸಿರಾಮದಾಸರ ಶಿಷ್ಯರಾದರು. ದೀಕ್ಷೆ ಪಡೆದರು. ತಮ್ಮ ಗುರುವೇ ಸರ್ವಸ್ವವೆಂದು ಭಾವಿಸಿದ್ದರು.

ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರುಗಳನ್ನು ಕೇಂದ್ರವಾಗಿಸಿಕೊಂಡು ಮತ್ತು ತಾಲ್ಲೋಕಿನ ಕೇಂದ್ರಗಳಾದ ಕೋಲಾರದ ಮುಳುಬಾಗಿಲು, ಹ್ಲೋಸ್‌ಪೇಟೆ, ಶ್ರೀರಂಗಪಟ್ಟಣದ ದರಿಶಕುಪ್ಪದಲ್ಲಿ ಮೂರು ಕಡೆಯಲ್ಲಿ ಮಠಗಳನ್ನು ನಿರ್ಮಿಸಿದರು.

ಸಂಚಾರ ಮಾಡಿದ ಕಡೆಯೆಲ್ಲೆಲ್ಲಾ 'ಭಾರ್ಗವರಾಮ ಭಜನ ಮಂದಿರ'ಗಳನ್ನು ನಿರ್ಮಸಿ ಎಲ್ಲಾ ವರ್ಗದ ಭಕ್ತ ಜನರನ್ನು ಪ್ರತಿನಿಧಿಗಳನ್ನಾಗಿ ಮಾಡಿಕೊಂಡು ಭಜನೆಗಳನ್ನು ನಡೆಸಿ ಈಗಲೂ ಕೆಲವು ಭಜನಾ ಮಂದಿರಗಳು ಅಸ್ಥಿತ್ವದಲ್ಲಿದ್ದು ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವುದು ಸಾಕ್ಷಿಯಾಗಿದೆ.

ದಾಸರ ಕುರುಹುಗಳನ್ನು ಭಜನಾ ಮಂದಿರಗಳಲ್ಲಿ ಇಂದಿಗೂ ಕಾಣಬಹುದು. ದಾಸರು ಕೀರೀಟಧಾರಿಯಾಗಿ ನಿಂತಿರುವ, ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಭಾವಚಿತ್ರಗಳು ಕಂಡುಬರುತ್ತವೆ. ಪ್ರತ್ಯಕ್ಷ ಸಾಕ್ಷಿಯನ್ನು ಭಜನಾ ಮಂದಿರಗಳು ಒದಗಿಸುತ್ತವೆ.

"ಹರಿಕಥಾ ಸಂಗ್ರಹದಲ್ಲಿ ಇವರು ಪ್ರವಾಸ ಮಾಡಿರುವ ಸ್ಥಳಗಳು, ಸಹಾಯ ಪಡೆದಿರುವ ಅಥವಾ ಇವರನ್ನೂ ಕರೆಸಿ ವ್ಯವಸ್ಥೆ ಮಾಡಿರುವ ಸೇವಾಕರ್ತರ ಭಕ್ತರ, ಶಿಷ್ಯರ ಪಟ್ಟಿಯಿಂದ ಅವರ ಸಂಖ್ಯೆ ನೂರನ್ನು ದಾಟುವಷ್ಟಿದೆ. ಇವರ ಶಿಷ್ಯರೇ ೩೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತಿದ್ದು, ಕೀರ್ತನೆಗಳನ್ನು ದಾಸರನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ." [೪]

ಇದರಿಂದ ದಾಸರು ಒಂದು ಸಾಮಾಜಿಕವಾಗಿಯೇ ಜನರಲ್ಲಿ ತೊಡಗಿಸಿಕೊಂಡಿದ್ದು ಯೋಗಿಯಾಗಿ ಸಮಾಜದೊಂದಿಗೆ ಬೆರೆತು ಹೋಗಿದ್ದರು. ಲೋಕಕಲ್ಯಾಣವನ್ನು ಗುರಿಯಾಸಿಕೊಂಡು ತಮ್ಮ ಗುರುವಿನ ಅಣತಿಯಂತೆ ಬಾಳಿದರು. ಎಂಬುದು ಅವರು ಮಾಡಿರುವ ಸೇವಾಕಾರ್ಯಗಳಿಂದ ಸ್ಪಷ್ಟವಾಗುತ್ತದೆ.

ಶ್ರೀ ಮುಖವನ್ನು ನೀಡಿ ಮಂಗಳ ಶಾಸನ ಮಾಡಿ ಸ್ತುತಿಸಿರುವ ಮೈಸೂರಿನ ಪರಕಾಲ ಮಠವು ಶ್ರೀ ತುಳಸಿರಾಮದಾಸರ ಬಗ್ಗೆ ಅಂದು ಅವರು ಹೊಂದಿದ್ದ ಪ್ರಖ್ಯಾತಿಯನ್ನು ಗುರುತಿಸಬಹುದಾಗಿದೆ. ಶ್ರೀ ವೈಷ್ಣವದ ಪ್ರಚಾರ ಆ ಸಂದರ್ಭದಲ್ಲಿಯೂ ಆಳವಾಗಿ ಇತ್ತು ಎಂಬುದು ತಿಳಿಯುತ್ತದೆ.

ಬೆಂಗಳೂರಿನ ತೊಪ್ಪಲ್ ವೆಂಕಟಚಾರ್ಯರುಗಳು ಇವರನ್ನು ಅನೇಕ ವಿಧದಲ್ಲಿ ಸ್ತುತಿಸಿರುವ ಕೀರ್ತನೆಗಳು

'ಶ್ರೀ ಶಾಯ ವಾಸಿನ್ಯೈ ಚಮೂಭರ್ತ್ರೇಶಠಾರಿಣೇ
ನಾಥಾಯ ಪದ್ಮನೇತ್ರಯ ಶ್ರೀ ರಾಮಾಯಸ್ತು ಮಂಗಳಂ' ೨

'ಯಮುನಾರಾಯಣರ್ಯಾಯಚ ಮಹಾಪೂರ್ಣಯ ಗುಣಸಿಂಧುವೇ
ಶ್ರೀ ರಾಮಾನುಜ ಯೋಗೀಂದ್ರ ಗುರುವೇ ನಿತ್ಯಮಂಗಳಂ' ೩

'ಅಹೋಬಿಲ ಶ್ರೀ ನೃಸಿಂಹ ಕೃಪಾತ್ರಯ ಧೀಮತೇ
ಆದಿವಾಣ್ ಶಠಕೋಪಾಖ್ಯ ಯತೀಂದ್ರಾಯಾಸ್ತೂ ಮಂಗಳಂ' ೫

'ಯಸ್ಯಶ್ರೀ ರಂಗನಾಥರ್ಯ ಪರಕಾಲ ಗುರೂತ್ತಮಾಃ
ದತ್ತವಂತೋ ಹರಿಕಥಾ ಕಿರೀಟಂ ತಸ್ಯ ಮಂಗಳಂ' ೧೪

'ಸ್ವಾನಿಷ್ಠಿತ ರಘೋತ್ತಂಸ ಯದುನಾಥ ಮಹೋತ್ಸವ
ನವ ಸಪ್ತಾಹ ಅವರ್ತ್ವೇರ್ನಿತ್ಯತೃಪ್ತಾಯ ಮಂಗಳಂ' ೧೫

ಗುರುವನ್ನು ದೈವವಾಗಿಸಿ ಅದಮ್ಯ ಭಕ್ತಿಯ ತೀವ್ರ ಮನೋಭಾವ ಇವರಲ್ಲಿ ಕಂಡು ಬಂದು, ನಾನಾ ವಿಧದಲ್ಲಿ ಶಿಷ್ಯನಾಗಿ ತನ್ನ ಗುರುವನ್ನು ಕಂಡಿರುವ ಪರಿಯನ್ನು, ವೆಂಕಟಾಚಾರ್ಯರಲ್ಲಿ ಕಾಣುತ್ತೇವೆ. ತುಳಸಿರಾಮದಾಸರು ತಮ್ಮ ಜೀವಿತದ ದಿನಗಳಲ್ಲಿ ಶಿಷ್ಯ ಪರಂಪರೆಗಳಲ್ಲಿ ಶಿಷ್ಯರಲ್ಲಿ ಎಂತಹ ಭಕ್ತಿಭಾವವನ್ನು ಬೆಳೆಸಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. ಶ್ರೀ ತುಳಸಿರಾಮದಾಸರು ತಮ್ಮ ಗುರುವಿನ ಬಗ್ಗೆ ಹೊಂದಿದ್ದ ಅನನ್ಯ ಭಕ್ತಿ, ಪ್ರೀತಿಯನ್ನು ಅನೇಕ ಶಿಷ್ಯರನ್ನು ಹುಟ್ಟುಹಾಕಿ ಅವರಲ್ಲಿ ಗುರುವಾಗಿ ದೈವವಾಗಿ ನಿಂತಿರುವುದು ಕಾಣಬಹುದು.

"ಶ್ರೀ ವಾಣೀವಿಭವ ಪ್ರಭಾವ ವಿಲಸತ್ಸಮ್ರಾಟ್ಕಿರೀಟೋಲ್ಲ

ಸನ್ನಾನಾರತ್ನ ಮರೀಚಿ ದೀಪಕಲಿಕಾ ನೀರಾಜಿತಾಂಘ್ರಿದ್ವಯಃ
ಮಲಸ್ವಸ್ವಾಂತ ಪುಷ್ಪಂಧಯೋಸೀತಾನಾಥ ಪದಾಬ್ಜಲೀನದಿ
ಜಿಯೋತ್ಸಧೃದಯ್ಯಕ್ ತುಲಸೀರಾಮಾಖ್ಯ ಯೋಗೀಶ್ವರ" ೫

ಈ ಸ್ತುತಿಯನ್ನು ಅದ್ವೈತ ಗುರುವಾದ 'ಶಂಕರದಾಸ' ಅಂಕಿತದ ಕವಿ ಕೀರ್ತನಾಕಾರನೂ ಆದ ಮೈಸೂರಿನ ಶಿವರಾಮಶಾಸ್ತ್ರಿಗಳು ಶ್ರೀ ತುಳಸಿರಾಮದಾಸರನ್ನು ಕುರಿತು ಸಂಸ್ಕೃತ ಶ್ಲೋಕದಲ್ಲಿ ಈ ಮೇಲಿನ ಮಂಗಳ ಸ್ತುತಿಯನ್ನು ರಚಿಸಿರುವುದನ್ನು ಗಮನಿಸಬಹುದು.

ಜನರು ತುಳಸಿರಾಮದಾಸರನ್ನು ಎರಡನೇ ರಾಮನೆಂದು ಅವತರಿಸಿ ಬಂದಿರುವುದೆಂದು ನಂಬಿದ್ದರು.

"ಆ ಮಹಾರಘುಪತಿಯೇ ಭಕ್ತರ
ಕಾಮಿತಾರ್ಥವ ಕೊಡಲು ತುಲಸೀ
ರಾಮ ಸಹಿತತವರಿಸಿ ನಿಜ ಚರಿತೆಯನ್ನು ಪಸರಿಸುತ
ನಾಮದಿಂದಾರಾಮ ತುಲಸೀ
ರಾಮನೆನಿಸುವ ಜಗದೊಳಾತನ
ಪ್ರೇಮ ದಾಸರ ಪೆಸರು ತುಲಸೀ ರಾಮದಾಸಾರ್‍ಗಾ.........೬

ಹರಿಯ ಅವತಾರದ ರೂಪ ಶ್ರೀ ತುಳಸಿರಾಮದಾಸನೆಂದು ಭಾವಿಸಿದವರಿಗೆ ಬೇರೆಯಲ್ಲ ಎಂಬ ಭಾವನೆ ಹೊಂದಿದ್ದರು.

ಚನ್ನಪಟ್ಟಣದ ಆಹೋಬಲ ದಾಸರು ಶ್ರೀ ತುಳಸಿರಾಮದಾಸರ ಶಿಷ್ಯರಾಗಿ, ತುಳಸಿರಾಮದಾಸರಲ್ಲಿ ಅನನ್ಯ ಭಕ್ತಿಯುಳ್ಳವರಾಗಿ ಗುರುಭಕ್ತಿಯ ಅಮಲಿನಲ್ಲೇ ತೇಲಿದ್ದರು. ಇವರ ದಾಸರ ಕುರಿತ ಸ್ತುತಿ:

'ಧರಣಿ ಮದ್ಗುರು ತುಲಸೀರಾಮರ
ದಾಸರಪ್ಪಣೆಗುಳುಹಲಾತನ
ಚರಣ ಸೇವೆಯೊಳಿರುತಿಹುದೆ ನಿಜ
ಪರಮ ಪದವಿದು ಸತ್ಯ ನಿತ್ಯವು'

ಗುರುವಿನ ಬಗ್ಗೆ ಅತ್ಯಂತ ಆತ್ಮೀಯ ಮನೋಭಾವ ತಳೆದು ಅವರಿಗೆ ಸಮೀಪವೆನಿಸಿದ್ದಾರೆ.

ಶ್ರೀ ತುಳಸಿರಾಮದಾಸರು ಜನ ಸಾಮಾನ್ಯರಿಗಲ್ಲದೆ ದಾಸ ಪರಂಪರೆಯಲ್ಲಿ ಅನೇಕರಿಗೆ ಗುರುವಾಗಿ ಆಪ್ತರಾಗಿದ್ದಾರೆ. ಪ್ರಿಯ ಶಿಷ್ಯರೆಲ್ಲರೂ ಒಂದಲ್ಲ ಒಂದು ವಿಧದಲ್ಲಿ ಮೆಚ್ಚಿ ಕರೆದಿದ್ದಾರೆ. "ಪತ್ರತ್ಯಾಗ, ಸಾತ್ವಿಕ ಯೋಗ ಜಿತೇಂದ್ರಿಯ, ದಾಸಗ್ರೇಸರ, ಅಸ್ಖಲಿತ, ಬ್ರಹ್ಮಚಾರಿ, ನಿಷ್ಠಗರಿಷ್ಠ, ಪುಣ್ಯ ಶರೀರ, ತತ್ವಜ್ಞಾನ ಸುಧಾಮಣಿ ಯೋಗೀಶ್ವರ, ಸತ್ಯಸ್ವರೂಪ, ದೀನಜನ ಮನೋಹರ, ಸುಜ್ಞಾನಿ, ಆಧ್ಯಾತ್ಮ, ರಾಮಾವತಾರ, ಕೈವಲ್ಯ ಮೂರ್ತಿ, ಸತ್ಕವಿದಾ ನಿಪುಣ, ಅಷ್ಟಾಕ್ಷರಿ, ಜಪನಿಷ್ಟ ಭಾರ್ಗವಸಾರ, ಭಜನೋನೋಲ್ಲಾಸ, ಭಕ್ತಿ ಪ್ರಿಯ" [೬] ಎಂದೆಲ್ಲ ಕರೆದು ತಮ್ಮ ದಾಸರನ್ನು ಮೆಚ್ಚಿ ಗೌರವಿಸಿದ್ದಾರೆ. ಹೋದ ಕಡೆಯೆಲ್ಲೆಲ್ಲಾ ಹರಿಕಥೆಯನ್ನು ಮಾಡಿ 'ಶ್ರೀ ರಾಮಾಕಥಾ'ವನ್ನು ಸಾರಿದ್ದಕ್ಕಾಗಿ ಮಹಾಜನತೆಯು ಇವರಿಗೆ ಚಿನ್ನದ ಕಿರೀಟವನ್ನು ತೊಡಿಸಿದ್ದರಂತೆ.

"ಶ್ರೀ ಚಾಮರಾಟ್ಪಾಲಿತ ಸತ್ಸಂಪ್ರದಾಯ ಸುಜ್ಞಾನ ಬೋಧಿನೀ ಸಮಾಜೋದ್ಧಾರಕಾ" [೭] ಎಂಬ ಬಿರುದನ್ನು ಮೈಸೂರಿನ ಮಹರಾಜರು ನೀಡಿ ದಾಸರಿಗೆ ಚಿನ್ನದ ಕಡಗವನ್ನು ತೊಡಿಸಿ ಸತ್ಕರಿಸಿದ್ದರು ಶ್ರೀ ತುಳಸಿರಾಮದಾಸರು, ಮಹಾರಾಜರು ತೊಡಿಸಿದ ಚಿನ್ನದ ಕಡಗದ ಚಿನ್ನದಿಂದಲೇ ದೇವರ ಪಟದ ಮೇಲೆ ಚಿನ್ನದ ಗೆರೆಗಳನ್ನು ಎಳೆದು ಪವಾಡವನ್ನು ತೋರಿಸಿದ್ದಾರೆ.

ಯುದ್ಧ ಭೀತಿಗಳಿಂದ ಅಸ್ಥಿರತೆಯಿಂದ ನಲುಗಿದ್ದ ಸಾಮಾನ್ಯ ಜನರಿಗೆ ಆಸರೆಯಾಗಿ ನಿಂತು ಭಕ್ತಿಯನ್ನು, ನೈತಿಕತೆಯನ್ನು ಸಾಮಾಜಿಕ ಸೌಹಾರ್ದತೆಯನ್ನು ತುಂಬಿದ್ದಾರೆ. ಜನಾನುರಾಗಿಯಾಗಿದ್ದ ತುಳಸಿರಾಮದಾಸರು ೧೯ ನೇ ಶತಮಾನದ ಮಾನವತಾವಾದಿಯೆನಿಸಿದ್ದರು.

ಮಹಾಯೋಗಿಗಳಂತೆ ಬದುಕಿದ್ದ 'ದಾಸರು' ಕಲಿಯುಗ ೫೦೦೪ರ ಶೋಭಕೃತು ಸಂವತ್ಸರ ಮಾಘ ಬಹುಳ ೨ ಬುಧವಾರ ಮಧ್ಯಾಹ್ನ ಕರ್ಕಾಟಕ ಲಗ್ನದಲ್ಲಿ ಶ್ರೀರಂಗಪಟ್ಟಣದ 'ದರಿಶಕುಪ್ಪ'ದಲ್ಲಿ ಭಾಗವತರು ಶಿಷ್ಯರು, ಸಾಹಿತ್ಯ, ಸಂಗೀತ, ಪಂಡಿತಜ್ಞರ ಸಭೆಯಲ್ಲಿ 'ಪರಕಾಲ ಮಠದ ಶ್ರೀ ಪಾದ ತೀರ್ಥವನ್ನು ಸೇವಿಸಿ ಶ್ರೀ ರಾಮ ಪೂಜಾ ಕೈಂಕರ್ಯದ ನಡುವೆಯೇ ಪದ್ಮಾಸನ ಸ್ಥಿತಿಯಲ್ಲಿ ಧ್ಯಾನಸ್ಥರಾಗಿರುವಾಗಲೇ ಪರಮಪಾದ ಸೇರಿದರು. ಎಂದು ಹರಿಕಥಾ ಕೃತಿ ಹೇಳುತ್ತದೆ. ಸು ೫೭ ವರ್ಷ ಬದುಕಿದ್ದರೆಂಬ, ಜೀವಿತಾವಧಿ ದಾಸರಿಂದಲೇ ಸ್ಥಾಪಿತಗೊಂಡು, ಸಂಪ್ರದಾಯದಲ್ಲಿ ರೂಢಿಯಾಗಿರುವುದರಿಂದ ಇದೇ ಪ್ರಮಾಣವಾಗಿರುತ್ತದೆ." [೮]

ಅಂತಿಮ ದಿನಗಳಲ್ಲಿ ಶ್ರೀ ತುಳಸಿರಾಮದಾಸರು ಶ್ರೀ ಹರಿಯನ್ನು ಭಿನ್ನವಿಸಿಕೊಂಡಿದ್ದಾರೆ. ೫೭ ವರ್ಷ ಜೀವಿಸಿದ್ದು ಬಿಡುವಿಲ್ಲದ ಓಡಾಟ ಸಂಕೀರ್ತನೆ ಇವುಗಳಿಂದ ಸಹಜವಾಗಿ ದೇಹಾಲಸ್ಯವಾಗಿದ್ದರೂ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳ ಕಂಡು ದಾಸರ ಮನಸ್ಸು ನೋವನ್ನು ಅನುಭವಿಸಿರುವುದು ಕಂಡು ಬರುತ್ತದೆ. ಎಂಬುದನ್ನು ಅವರ ಶಿಷ್ಯರಾದ ಚೌಡಯ್ಯನವರು. ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅವರೇ ನುಡಿದಂತೆ "ಶ್ರೀ ಕೃಷ್ಣ ಪರಾಂಬರಿಸು ಇನ್ನು ಉತ್ಸವ – ಕಥೆಗಳನ್ನು ಈ ದಾಸ ಮಾಡಲಾರ,

ಕಲಿಯ ಕೋಲಾಹಲ ಜಾಸ್ತಿಯಾಗಿದೆ ಧರ್ಮ ಲೋಪವಾಗಿದೆ. ಶರೀರವೂ ಶಕ್ತಿಹೀನವಾಗಿದೆ. ೩೧ ವರ್ಷಕಾಲ ರಾಮ, ಕೃಷ್ಣೋತ್ಸವಗಳನ್ನು ಮಾಡಿಸಿಕೊಂಡ ನನ್ನ ಮೇಲೆ ಕೃಪೆ ಹರಿಸು ಸ್ವಾಮಿ ಎಂದು ದಾಸರೇ ಭಿನ್ನವಿಸಿಕೊಂಡಿದ್ದಾರೆ."[೯] ಯೋಗಿ ಸಾವನ್ನೇ ಹೊಂದಿದ ಇವರ ಪವಿತ್ರ ಕಳೆಬರವನ್ನು ಪರಕಾಲ ಮಠದ ಸೂಚನೆಯಂತೆ "ಶ್ರೀರಂಗಪಟ್ಟಣದ ಮಕಾವೇರಿ ತೀರದ 'ಸಿದ್ದಂಬೈಲು'ವರೆಗೆ ಭಜನೆ, ಮೆರವಣಿಗೆಯಲ್ಲಿ ಕೊಂಡೊಯ್ದು ಮಠವೇ ದಾಸರ ಅಂತ್ಯ ಸಂಸ್ಕಾರವನ್ನು ಎಲ್ಲಾ ಕಾರ್ಯಗಳನ್ನು ಪೂರೈಸಿತೆಂದು ಹರಿಕಥಾ ಕೃತಿ ದಾಖಲಿಸುತ್ತದೆ."[೧೦]

ವೈದಿಕ ವೈದಿಕೇತರರರಲ್ಲಿಯೂ, ಧರ್ಮ ಜಾಗೃತಿ ಮೂಡಿಸಿ, ಸಮಾಜವನ್ನು ಒಂದು ಗೂಡಿಸುವ ಕೆಲಸ ಮಾಡಿ, ಅಂತಿಮ ದಿನಗಳವರೆಗೂ ಕಾರ್ಯ ಚಟುವಟಿಕೆಗಳಲ್ಲಿ ನಿರತರಾಗಿ ಯೋಗಿ ಸಾವನ್ನೇ ಪಡೆದು ೧೯ನೇ ಶತಮಾನದದ ಪ್ರಭಾವಿ ಪುರುಷನಾಗಿ, ಪವಾಡ ಪುರುಷನಾಗಿ ದಕ್ಷಿಣ ಕರ್ನಾಟಕದ ಜನರ ಮನಸ್ಸಿನಲ್ಲಿ ಇಂದಿಗೂ ಉಳಿದು ಜೀವಂತವಾಗಿದ್ದಾರೆ.

ಅ) ದಂತ ಕಥೆಗಳು :-

ಶ್ರೀ ತುಳಸಿರಾಮದಾಸರ ಬಗ್ಗೆ ಅನೇಕ ದಂತಕಥೆಗಳು ಹುಟ್ಟಿಕೊಂಡಿದ್ದವೆಂಬುದನ್ನು ಬಲ್ಲವರು ಹಿರಿಯ ಜೀವಿಗಳು, ಅವರ ಶಿಷ್ಯ ಪರಂಪರೆಯ ಪ್ರಶಿಷ್ಯರು ಅವರ ಬಗ್ಗೆ ಹರಡಿಕೊಂಡಿದ್ದ ಮಾಹಿತಿಗಳನ್ನು ಒದಗಿಸುತ್ತಾರೆ. ಮೈಸೂರು ಪ್ರಾಂತ್ಯದಲ್ಲಿ ಇಂದಿಗೂ ಪ್ರಚಲಿತವಿರುವ ದಂತಕಥೆಗಳನ್ನು ನೆನಪಿಸಿಕೊಳ್ಳುತ್ತಾರೆ. ತುಳಸಿರಾಮದಾಸರನ್ನು ದಕ್ಷಿಣ ಕರ್ನಾಟಕ ಭಾಗದಲ್ಲಿ ಕೆಲವು ಕಡೆ ಇಂದಿಗೂ ಪ್ರಚಲಿತವಿರುವುದನ್ನು ಜನರು ಕಾಣಬಹುದು. ಅವುಗಳಲ್ಲಿ ಮುಖ್ಯವಾದವು.

೧. ಗರುಡ ದರ್ಶನ :-

ಶ್ರೀ ಮಾನ್ಮಹಾರಾಜ ಚಾಮರಾಜ ಒಡೆಯರ್‌ರವರು ದಾಸರ ಬಗ್ಗೆ ಇದ್ದಂತಹ ವಿಚಾರಗಳನ್ನು ಮಧ್ಯವರ್ತಿಗಳಿಂದ ಕೇಳಿ ತಿಳಿದುಕೊಂಡಿದ್ದರೆಂದು, ಅವರು ತಮ್ಮ ಅರಮನೆಯಲ್ಲಿ ಪುರಂದರದಾಸರ ಕಥೆಯನ್ನು ಮಾಡಲು ಶ್ರೀ ತುಳಸಿರಾಮದಾಸರಿಗೆ ಹೇಳಿದರಂತೆ, ಅದೇ ಪ್ರಕಾರ ದಾಸರು ಕಥೆಯನ್ನು ಮಾಡುತ್ತಿರುವಾಗ ರಾತ್ರಿ ೩ ಗಂಟೆಯ ಸುಮಾರಿಗೆ ಕಥೆಯನ್ನು ನಿಲ್ಲಿಸಬೇಕೆಂದು ಆಜ್ಞಾಪಿಸಿದರಂತೆ. ಕಥೆಯ ನಿಲ್ಲಿಸುವ ಸಂದರ್ಭಕ್ಕೆ ಸರಿಯಾಗಿ ಗರುಡ ಪಕ್ಷಿಯು ಎದುರಿಗಿರುವ ದೇವರ ಪಟದ ಮೇಲೆ ಬಂದು ಕುಳಿತಾಗಲೇ ಕಥೆ ನಿಲ್ಲಿಸುವ ಪದ್ಧತಿ. ಶ್ರೀ ತುಳಸಿರಾಮದಾಸರು ಕಥಯನ್ನು ನಿಲ್ಲಿಸಲು ಮಂಗಳ ಹಾಡುವುದಕ್ಕೆ ಪ್ರಾರಂಭಿಸಿದ ತಕ್ಷಣವೇ ಅರಮನೆಯ ಕಿಟಕಿ ಗಾಜನ್ನು ಒಡೆದುಕೊಂಡು ಬಂದು ಗರುಡ ಪಕ್ಷಿಯು ದೇವರ ಪಟದ ಮೇಲೆ ಕುಳಿತುಕೊಂಡಿತೆಂದು, ಇದನ್ನು ಕಂಡು ರಾಜನು ತುಳಸಿರಾಮದಾಸರನ್ನು

ಭಕ್ತಿ ಪೂರ್ವಕವಾಗಿ ತಾಂಬೂಲಗಳನ್ನಿತ್ತು ಗೌರವಿಸಿದರಂತೆ. ಇದು ಒಂದು ಪವಾಡದಂತೆ ಕಂಡು ಬಂದು ಮಹಾರಾಜರು ಶ್ರೀ ತುಳಸಿರಾಮದಾಸರನ್ನು ಪವಾಡ ಪುರುಷ, ಮಹಾಮಹಿಮನೆಂದೇ ನಂಬಿದ್ದರು.

೨. ಗಾಳಿಯಲ್ಲಿ ತೇಲುವುದು :-

ಶ್ರೀ ತುಳಸಿರಾಮದಾಸರು ಧ್ಯಾನಕ್ಕೆ ಕುಳಿತ ಸಂದರ್ಭದಲ್ಲಿ ಧ್ಯಾನವನ್ನು ಮಾಡುತ್ತಲೇ ಗಾಳಿಯಲ್ಲಿ ತೇಲುವ ಪವಾಡವನ್ನು ಮಾಡುತ್ತಿದ್ದರೆಂದು ಅವರ ಅಂತಿಮ ಯಾತ್ರೆಯಲ್ಲಿಯೂ ಪದ್ಮಾಸನ ಹಾಕಿದ ಭಂಗಿಯಲ್ಲಿಯೇ ಶಿಷ್ಯರ, ಭಕ್ತಾಧಿಗಳ ಸಮ್ಮುಖದಲ್ಲೇ ಇದೇ ರೀತಿ ಧ್ಯಾನಾಸಕ್ತರಾಗಿರುವಾಗಲೇ ಪರಮಪದ ಸೇರಿದ್ದು ಗಾಳಿಯಲ್ಲಿ ತೇಲುವ ಕಲೆಯ ಸಿದ್ಧಿಯ ಪ್ರಭಾವವೆಂದು ತೋರುತ್ತದೆ.

೩. ಕೈಯಲ್ಲಿ ಬೆಂಕಿ ಆರಿಸುವುದು :-

ಒಮ್ಮೆ ತಿರುಪತಿಯ ಶ್ರೀನಿವಾಸ ಕಲ್ಯಾಣದಲ್ಲಿ ಹರಿಕಥೆಯನ್ನು ಮಾಡುವ ಸಂದರ್ಭದಲ್ಲಿ ಮಂಗಳಾರತಿ ಮಾಡುತ್ತಿರುವಾಗ, ಅಮ್ಮನವರ ವಸ್ತ್ರಕ್ಕೆ ಬೆಂಕಿ ಬಿದ್ದಿತೆಂದು, ಉರಿಯುತ್ತಿರುವ ಬೆಂಕಿಯನ್ನು ತುಳಸಿರಾಮದಾಸರು ತಮ್ಮ ಕೈಗಳಿಂದಲೇ ಆರಿಸಿದರೆಂಬ ದಂತಕಥೆ ಜನಪ್ರಿಯಗೊಂಡಿದೆ.

೪. ಅಡ್ಡಿ ಪಡಿಸಿದರೆ ತೊಂದರೆ :-

ದಾಸರು ನಡೆಸುತ್ತಿದ್ದ ಹರಿ ಕೀರ್ತನೆಗಳಿಗೆ, ರಾಮೋತ್ಸವ, ಕೃಷ್ಣೋತ್ಸವಗಳನ್ನು ಆಚರಿಸುವ ಸಂದರ್ಭದಲ್ಲಿ ಯಾರಾದರೂ ಅಡ್ಡಿ ಪಡಿಸಿದರೆ ಅವರಿಗೆ ತೊಂದರೆ ಆಗುತ್ತಿತ್ತು. ಎಂಬುವುಗಳ ದಂತಕಥೆಗಳಾಗಿ ನಿಂತ್ತಿವೆ. ಹಾಗೆ ಆಗುತ್ತಿದ್ದ ತೊಂದರೆಗಳ ಬಗ್ಗೆ ಹರಿಕಥಾ ಕೃತಿಯಲ್ಲಿ ಒಂದೆರಡು ಪ್ರಸಂಗಗಳನ್ನು ಕುರಿತು ಪ್ರಸಾಪ ಬರುತ್ತದೆಂದು ಹೇಳಲಾಗಿದೆ. ಶಿರಸ್ತೆದಾರ ಮಾರಪ್ಪ, ಮುದ್ದಪ್ಪರು ನೀಡುತ್ತಿದ್ದ ಕಿರುಕುಳಕ್ಕೆ ರಾಜರಿಂದ ಶಿಕ್ಷೆ. ಅಲಂಗೂರಿನಲ್ಲಿ ಅಪವಾದ ಎದುರಾದಾಗ ಬಂದ ಅಪವಾದ ನಿವಾರಣೆಯಾಗುವುದು. ಮೈಸೂರಿನಲ್ಲಿ ದೊರೆತ ಮಠದ ಬೆಂಬಲ ಎಲ್ಲವು ಜನರ ಮನಸ್ಸಿನಲ್ಲಿ ನಿಂತ್ತಿವೆ.

೫. ಬ್ರಹ್ಮಚರ್ಯೆ ಪರೀಕ್ಷೆ :-

ಒಮ್ಮೆ ದಾಸರನ್ನು ಪರೀಕ್ಷಿಸಲು, ದಾಸರ ಬ್ರಹ್ಮಚರ್ಯೆಯನ್ನು ಪರೀಕ್ಷಿಸಲು ಮುಳಬಾಗಿಲಿನ ಗುಂಡ ಗುಂಟಿ ಪಾಳ್ಯದವರು ದಾಸರನ್ನು ಕರೆತಂದು ರಾಮೋತ್ಸವವನ್ನು ವೈಭವದಿಂದ ಆಚರಣೆ ಮಾಡುವಾಗ

ದಾಸರು ಮಲಗುವ ಕೋಣೆಗೆ, ಒಬ್ಬ ಹುಡುಗನಿಗೆ ಹೆಣ್ಣಿನ ವೇಷವನ್ನು ಹಾಕಿ ಕಳುಹಿಸಿದರಂತೆ, ಆಗ ದಾಸರು ಆ ಹೆಣ್ಣು ಮಗಳನ್ನು ಕುಳ್ಳಿರಿಸಿ, ಯಾವುದೇ ರೀತಿಯಲ್ಲೂ ವಿಚಲಿತರಾಗದೇ, ಚಪ್ಪರದ ಉತ್ಸವದ ಮೂರ್ತಿಯ ಮುಂದೆ ಕುಳಿತ ಆ ಹೆಣ್ಣು ಮಗಳಿಗೆ ಅರಿಶಿಣ ಕುಂಕುಮ ಹೂವನ್ನು ಕೊಟ್ಟು ಸಂಕೀರ್ತನೆ ಹಾಡಲು ಪ್ರಾರಂಭಿಸಿದರಂತೆ

ಸಂಕೀರ್ತನೆಯನ್ನು ಹಾಡಿದ್ದು ಅವರು ಪಡೆದುಕೊಂಡ ಗಳಿಸಿದ ಸಿದ್ಧಿ ಮತ್ತು ಒಬ್ಬ ಯೋಗಿಗೆ ಇರಬೇಕಾದ ನೈತಿಕ ಮೌಲ್ಯವು ಪ್ರತಿಬಿಂಬಿತಾವಾಗುತ್ತದೆ. ದೇವರ ಅನುಗ್ರಹದಿಂದ ಪಾರಾಗಿ ರಾಮೋತ್ಸವವನ್ನು ಪೂರ್ತಿಗೊಳಿಸಿದರೆಂಬ ಕಥೆಯು ಇದೆ.

೬. ಚಿತ್ರ ಪಟಕ್ಕೆ ಚಿನ್ನದ ರೇಖೆ :–

ಶ್ರೀ ತುಳಸಿರಾಮದಾಸರಿಗೆ ಮೈಸೂರಿನ ಮಹಾರಾಜರು ಶ್ರೀ ರಾಮಕಥಾ ನಿಪುಣರಾದ ದಾಸರು ಹರಿಕಥೆಯನ್ನು ಮಾಡಿದ್ದಕ್ಕಾಗಿ ಮೆಚ್ಚಿ ಚಿನ್ನದ ಕಡಗವನ್ನು ತೊಡಿಸಿದರಂತೆ. ತೊಡಿಸಿದ ಚಿನ್ನದ ಕಡಗದ ಚಿನ್ನದಿಂದಲೇ, ಶ್ರೀ ತುಳಸಿರಾಮದಾಸರೇ ಸ್ವತಃ ಶ್ರೀರಾಮನ ಪಟ್ಟಾಭಿಷೇಕದ ಚಿತ್ರ ಪಟಕ್ಕೆ ಚಿನ್ನದ ರೇಖೆಗಳನ್ನು ಬಿಡಿಸಿದ್ದರೆಂದು ಬೆಂಗಳೂರಿನ ಮಠದ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ಇಷ್ಟೇ ಅಲ್ಲದೆ ಇನ್ನೂ ಮೊದಲಾದ ದಂತಕಥೆಗಳು ಇರಬಹುದು. ಸಿಕ್ಕಿರುವ ಮಾಹಿತಿಗಳಿಂದ ಕೆಲವನ್ನು ಮಾತ್ರವೇ ಇಲ್ಲಿ ತಿಳಿಸಲಾಗಿದೆ. ಪವಾಡಗಳು ದಂತಕಥೆಗಳಾಗಿ ಬೆಳೆದದ್ದನ್ನು ಸ್ಮರಿಸಿ ಶ್ರೀ ತುಳಸಿರಾಮದಾಸರ ಬಗೆಗಿನ ದಂತಕಥೆಗಳಿಂದ ಅವರು ಒಬ್ಬ ಪವಾಡ ಪುರುಷನಾಗಿರುವುದು ಈ ೨೧ನೇ ಶತಮಾನದಲ್ಲೂ ಜನಸಾಮಾನ್ಯರ ಮನಸ್ಸಿನಲ್ಲಿ ಉಳಿದಿರುವುದರಿಂದ ತಿಳಿಯುತ್ತದೆ.

ಆ) ಗುರು ಪರಂಪರೆ:–

ಶ್ರೀ ತುಳಸಿರಾಮದಾಸರಿಗೂ ಒಂದು ಗುರು ಪರಂಪರೆ ಇತ್ತು ಎಂಬುದನ್ನು ತಿಳಿಯಬೇಕಾಗಿದೆ. ಧಾರ್ಮಿಕ ಪುರುಷರೆಲ್ಲರೂ ಒಬ್ಬ ಗುರುವಿನ ಸನ್ಮಾರ್ಗದ ಮೂಲಕವೇ ಬಂದಿರುತ್ತಾರೆ, ಮಹಿಮಾ ಪುರುಷರಾಗಿ, ಪವಾಡ ಪುರುಷರಾಗಿ, ವಿಶಿಷ್ಟಾದ್ವೈತದ ಪ್ರವರ್ತಕರಾಗಿ ಕೀರ್ತನಕಾರರಾಗಿ ಜನಪ್ರಿಯಗಳಿಸಿದ ಶ್ರೀ ತುಳಸಿರಾಮದಾಸರನ್ನು ಗುರುವಿನ ಶಕ್ತಿಯಾಗಿ ಪ್ರೇರೆಪಿಸಿದ ಶಕ್ತಿ ಇದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ತುಳಸಿರಾಮದಾಸರ ತಂದೆ ಕೊಂಡಪ್ಪನವರು ಮಗನಿಗೆ ಜಾತಕದ ಪ್ರಕಾರ ಕ್ರಿಯೆಗಳನ್ನು ಮಾಡಿ ವಿಧ್ಯಾಭ್ಯಾಸದ ಸಲುವಾಗಿ ಕೆಲವು ಕಾಲ ತಾಡಪರ್ತಿಯಲ್ಲಿ ಇದ್ದಂತಹ ಭಾಸ್ಕರಾಚಾರ್ಯರ ಬಳಿ ಬಾಲಕನನ್ನು

ಬಿಟ್ಟರೆಂದು ಶ್ರೀತುಳಸಿರಾಮದಾಸರು ನೆಪಮಾತ್ರವಾಗಿ ಗುರುವಿನ ಬಳಿಯಲ್ಲಿ ಇದ್ದುಕೊಂಡು ವೇದಗಳನ್ನು ಅರ್ಥಗಳನ್ನು ತಿಳಿದು ತಾರಕ ವಿಷಯಕ್ಕೆ ಆಧಾರಭೂತವಾದ ವಿಶಿಷ್ಟಾದ್ವೈತವನ್ನು ತಿಳಿದುಕೊಂಡರೆಂದು ಶ್ರೀ ತುಳಸಿರಾಮದಾಸರ ಸಂಕ್ಷಿಪ್ತ ಜೀವನ ವಿವರದ ಕೃತಿಯಿಂದ ತಿಳಿಯುತ್ತದೆ.

ಶ್ರೀನಿವಾಸದಾಸರ ಕೀರ್ತನೆಯೊಂದು ಶ್ರೀ ತುಳಸಿರಾಮದಾಸರ ಗುರುವನ್ನು ಸ್ತುತಿಸಿರುವದರಿಂದ ಈ ಸ್ತುತಿಯು ದಾಸರ ಗುರು ಪರಂಪರೆಯು ಇತ್ತು ಎಂಬುದನ್ನು ಗುರುತಿಸಬಹುದು.

'ಶ್ರೀ ತುಳಸೀರಾಮ ಸದ್ಗುರುವರ್ಯಾ । ಪಾತಕದೂರ ಕೃಪಾಂಕಧಿದುರ್ಯಾ॥
ಶ್ರೀ ಶೇಷಗಿರೀಶಾಂಶ ಸಂಭೂತ । ಶ್ರೀ ಶಠಕೋಪಯತೀಂದ್ರ ಕೃಪಾಶಿತ' ॥೧॥

ಈ ಮೇಲಿನ ಕೀರ್ತನೆಯ ಸಾಲಿನಿಂದ ಶ್ರೀ ಶಠಕೋಪಯತೀಂದ್ರ ಕೃಪೆಗೆ ಪಾತ್ರರಾಗಿದ್ದರೆಂದು ಮಾಹಿತಿಯನ್ನು ನೀಡುತ್ತದೆ. ಅಹೋಬಲವೆಂಬ ಪರ್ವತದಲ್ಲಿನ ಪೆಂಜಲಗವಿಯಲ್ಲಿ ಶಠಕೋಪಯತೀಶ್ವರರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದರು. ಗುರುವಿನ ಉಪದೇಶದಂತೆ ನಡೆದು ಸಕ್ರಮವಾಗಿ ಪಂಚ ಸಂಸ್ಕಾರಗಳನ್ನು ಪಡೆದು ಪ್ರಪತ್ತಿ ಮಾಡುತ್ತಿದ್ದರು.

ಶ್ರೀತುಳಸಿರಾಮದಾಸರು ಸಂಪ್ರದಾಯ ಬದ್ಧವಾದ "ಗುರು ಪರಂಪರೆಯಲ್ಲಿ ಬಹುಕಾಲವಿದ್ದು, ಸಂಪ್ರದಾಯ ಬದ್ಧವಾಗಿಯೇ ಅಲ್ಲಿ ಶೇಷಿ ಶೇಷತ್ವವನ್ನು, ಜ್ಞಾನಶಕ್ತಿ ವೈರಾಗ್ಯ ಪ್ರಪತ್ತಿಗಳನ್ನು, ಪಾರತಂತ್ರ ಸ್ವಭಾವವನ್ನು, ಅವ್ಯಭಿಚಾರಿಯಾದ ಭಕ್ತಿಯನ್ನು, ಪಾರಮಾರ್ಥ ತಾರತಮ್ಯವನ್ನು ಎಂದಿಗೂ ಮರೆಯದಂತೆ ಧರ್ಮ ಸೂತ್ರಗಳು ಇವು ಅತ್ಯಂತ ಪವಿತ್ರವಾದವು. ನನ್ನ ಉದ್ದೇಶವೂ ನಿನ್ನ ಉದ್ದೇಶವೂ ಒಂದೇ ಆಗಿದ್ದರೆ ಓ ಪ್ರಿಯಶಿಷ್ಯ ಈ ಆಶೀರ್ವಾದ ವಿಶೇಷದಿಂದ ನೀ ಮಹದಾಂಶ ಮಹಾಮಹಿಮೆ ಶಾಶ್ವತವಾಗಿರುತ್ತದೆ. ಎಂದು ಗುರುಗಳು ಹೇಳಿದರು." [೧೦]

ನಂತರ ಗುರುಗಳ ಆಶೀರ್ವಾದ ಹೊಂದಿದ ಶ್ರೀ ತುಳಸಿರಾಮದಾಸರು ತಮಗೆ ೨೦ನೆ ವಯಸ್ಸಿನ ಹೊತ್ತಿಗೆ ಮತ್ತೊಬ್ಬರಿಗೆ ಸರಿಸಾಟಿ ಇರುವಂತೆ ಸಂಗೀತ, ಸಾಹಿತ್ಯಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡರು.

ದಾಸರ ತಂದೆ ತಾಯಿಗಳು ಅಕ್ಷಯ ಸಂವತ್ಸರದಲ್ಲಿ ನಿಧನರಾದರು. ಬಳಿಕ ಪೂರ್ವ ಸಂಕಲ್ಪದಂತೆ ಸಹಜವಾಗಿಯೇ ಇವರಲ್ಲಿ ಪಕ್ವವಾಗಿ ಹರಿಭಕ್ತಿಯ ಅಂಕುರಾರ್ಪಣವಾಗಿ ಮೊಳೆಯಿತೆಂದು ಮೂಲ ಕೃತಿಯಿಂದ ಶ್ರೀತುಳಸಿರಾಮದಾಸರಿಗೆ ಒಂದು ಗುರು ಪರಂಪರೆಯು ಹಿನ್ನಲೆಯಾಗಿ ಇತ್ತು ಎಂಬುದು ತಿಳಿಯುತ್ತದೆ. ಮುಂದೆ ದಾಸರು ಜನರಂಜಕವಾಗಿರುವ ಲೋಕ ರೀತಿಗೆ ಯಾವುದೇ ವ್ಯತಿರಿಕ್ತವಾಗಿರಬಾರದೆ ತರ್ಕ, ವ್ಯಾಕರಣ ಛಂದಸ್ಸು, ಕಾವ್ಯ, ನಾಟಕ, ಸಂಗೀತ, ಸಾಹಿತ್ಯ ಎಲ್ಲಾ ವಿಷಯಗಳಲ್ಲಿ ಪರಿಣಿತಿಯನ್ನು ಪಡೆದು ಹಲವು ಭಾಷೆಗಳಲ್ಲೂ ಜ್ಞಾನ ಹೊಂದಿದ್ದರು.

ತಂದೆ ತಾಯಿಗಳ ನಿಧನದ ನಂತರ ಲೌಕಿಕ ಆಸಕ್ತಿಯನ್ನು ತೊರೆದು, ನಾರಯಣರ ತಪಸ್ಥಾವಾದ ಹಿಮಾಲಯದ ಬದರಿ ಕ್ಷೇತ್ರದಲ್ಲಿ ಬದರಿ ನಾರಾಯಣನು ಸ್ವಪ್ನದರ್ಶನನಾಗಿ ಕಂಡನು. ಕರ್ನಾಟಕದಲ್ಲಿ

ಪರಕೀಯರ ಪ್ರವೇಶದಿಂದ ನಾಸವಾಗುತ್ತಿರುವ ಹಿಂಧೂ ಧರ್ಮವನ್ನು ನನ್ನ ಅವತಾರವಾಗಿರುವ ನೀನು ಉದ್ಧರಿಸೆಂದು ಶ್ರೀ ತುಳಸಿರಾಮದಾಸರಿಗೆ ಸಂದೇಶವಿತ್ತನಂತೆ.

ರಾಮಾನುಜಾಚಾರ್ಯರು, ವೇದಾಂತದೇಶಿಕರು ತಮ್ಮ ಸಿದ್ಧಾಂತಗಳನ್ನು ಅನುಷ್ಠಾನಗೊಳಿಸಬೇಕೆಂದು ಸಿದ್ಧಪಡಿಸಿದ್ದರು. ಸಿಂಹಾಸನಾಧಿಪತ್ಯವಾದ ಕರ್ನಾಟಕಕ್ಕೆ ಆಂಗ್ಲರು ಹೆಚ್ಚು ಪ್ರಮಾಣದಲ್ಲಿ ಬರಲಾರಂಭಿಸಿದರು. ಪರಕೀಯವಾದ ಈ ಬಿಳಿಯ ಜನಗಳಿಗೆ ವೇದ ಸಂಬಂಧವಾದ ತಪಸ್ಸು, ಯಜ್ಞ ವ್ರತದ ಮೊದಲಾದ

ಕರ್ಮಗಳ (ಹಿಂಧೂ ಧರ್ಮದ) ಬಗ್ಗೆ ತಿರಸ್ಕಾರ ತಾತ್ಸಾರವಿದ್ದು ಹಿಂಧೂ ಧರ್ಮದ ಮೇಲೆ ಆಕ್ರಮಣ ತೀವ್ರಗತಿಯಲ್ಲಿ ನಡೆಯುತ್ತಿತ್ತು. ಅವತಾರ ಪುರುಷರಾದ ಅಧಿದೇವನು ಪ್ರತ್ಯಕ್ಷವಾಗಿ ನೀನು ನನ್ನ ಆಜ್ಞೆಯನ್ನು ಪಾಲಿಸಿ ಮತೋದ್ಧಾರ ಮಾಡಬೇಕೆಂದು, ಹಿಂಧು ಧರ್ಮವನ್ನು ಉಳಿಸಬೇಕೆಂದು ತುಳಸಿರಾಮದಾಸರಿಗೆ ಆಜ್ಞೆಮಾಡಿದನೆಂದು, ಮಹಾಪುರುಷನ ಅಣತಿಯೇ ಮಹಾ ಪ್ರಸಾದವೆಂದು ತಿಳಿದು, ತುಳಸಿರಾಮದಾಸರು ಬೀಳ್ಕೊಂಡು ದೈವ ಭಕ್ತಿಯ ಮೂಲಕ ಹಲವಾರು ಧರ್ಮಕಾರ್ಯಗಳಲ್ಲಿ ತೊಡಗಿಸಿಕೊಂಡು, ವೈದಿಕ ಧರ್ಮದವರಿಗಲ್ಲದೆ ವೈದಿಕೇತರರಿಗೂ ಭಕ್ತಿ, 'ಹರಿಏಕನಿಷ್ಠೆ'ಯನ್ನು ಮೂಡಿಸಿ ರಾಮೋತ್ಸವಗಳನ್ನು ಮಾಡುವ ಮುಖೇನ ಕರ್ನಾಟಕದಾದ್ಯಂತ ಸಂಚರಿಸಿ ಖ್ಯಾತಿಯನ್ನು ಪಡೆದುಕೊಂಡರು. ದಾಸರು ಸಂಪ್ರದಾಯಬದ್ಧವಾದ ಗುರುಪರಂಪರೆಯಿಂದ ಬಂದು ಭಾಗವತ ಧರ್ಮದ ಜೊತೆಗೆ, ಗುರು-ದೈವನಲ್ಲಿ ಸಮನ್ವಯವನ್ನು ಸಾಧಿಸಿ ಅನೇಕ ಶಿಷ್ಯವರ್ಗಕ್ಕೆ ಮಾದರಿಯೆನಿಸಿದ್ದರು.

ದಾಸರ ಕ್ಷೇತ್ರ ಸ್ತುತಿಗಳಲ್ಲಿಯೂ ಸಹ ಗುರುವನ್ನು, ದೈವವನ್ನು ಕಂಡಿರುವ ಪರಿಭಾಷೆಗಳಲ್ಲಿ ಬಳಸಿ ರಚಿಸಿರುವ ಕೀರ್ತನೆಯೊಂದು

'ಶರಣು ವಕುಳಾಭರಣ ಪೋಷಿತ
ಶರಣು ಯಮುನ ಪೂಜಿತ ಪ

ಶರಣು ಯತಿಪತಿ ನಿತ್ಯವಂದಿತ
ಶರಣು ಕ್ಷಮಾಭರಿತಾ ಅ, ಪ
ಶರಣು ದೇಶಿಕ ಹೃದಯ ಸದನಾ
ಶರಣು ಪರಿಪೂರ್ಣೆಂದು ವದನಾ
ಶರಣು ಸುಂದರ ಕೋಟಿ ಮದನಾ
ಶರಣು ಹಯವದನಾ ೧

ಶರಣು ಭಕ್ತಫಲಪ್ರದಾಯಕ
ಶರಣು ತಿರುಮಲ ನಾಯಕಾ

ಶರಣು ಅಸ್ಮತ್ಪರಮ ದೇಶಿಕ
ಶರಣು ಅಸ್ಮಾದ್ದೇಶಿಕ ೨

ಶ್ರೀ ತುಳಸಿರಾಮದಾಸರೇ ರಚಿಸಿರುವ ಈ ಕ್ಷೇತ್ರ ಸ್ತುತಿಯಲ್ಲಿ ತನ್ನ ಗುರುವಿನ ಬಗ್ಗೆ ಹೊಂದಿದ ಭಾವನೆ, ಹಲವಾರು ವಿಧದಲ್ಲಿ ಗುರುವಿಗೆ ನಮಿಸಿದ ಭಾವ, ಅಂದರೆ ಶರಣಾದ ಭಾವ, ಎಲ್ಲಾರಿಂದಲೂ

ಹೇಗೆ ಸ್ತುತಿಸಲ್ಪಟ್ಟಿದ್ದಾನೆಂಬ ವೈಷ್ಣವ ಪರಂಪರೆಯಲ್ಲಿ ದೇವರನ್ನು ಗುರುಗಳನ್ನು ಕರೆಯುವ ಪರಿಭಾಷೆಗಳು ಎಲ್ಲವೂ ವ್ಯಕ್ತವಾಗಿದೆ.

ಮೈಸೂರಿನಲ್ಲಿ ಹರಿಕಥೆ ಮಾಡುವಾಗ ಪರಕಾಲ ಮಠದ ಸ್ವಾಮಿಗಳಿಗೆ ಶ್ರೀನಿವಾಸ ದೇವರು ಕನಸ್ಸಿನಲ್ಲಿ ಬಂದು ಶ್ರೀ ತುಳಸಿರಾಮದಾಸರನ್ನು ಸತ್ಕರಿಸಲು ಸೂಚಿಸಿದ್ದಂತೆ, ಪರಕಾಲ ಮಠದಿಂದ ಶ್ರೀಮುಖವನ್ನು ಪಡೆದಿದ್ದರಿಂದ ಸಂಪ್ರದಾಯ ದೇಶಿಕರ ಸಂಪ್ರದಾಯಕ್ಕೆ ಸೇರಿರುವುದು ವೇದಾಂತ ದೇಶಿಕರ ಗುರುಪರಂಪರಾ ಸ್ತುತಿಯೊಂದಿಗೆ, ಗ್ರಂಥವನ್ನು ಆರಂಭಿಸಿರುವುದು ಸಮರ್ಥಿಸುತ್ತದೆ. ಕೊನೆಗಳಿಗೆಯಲ್ಲೂ ಮೈಸೂರಿನ ಪರಕಾಲ ಮಠದಲ್ಲಿದ್ದು, ಮಹಾಯಾತ್ರೆಗೆ ಅನುಜ್ಞೆ ಪಡೆದು ದರಿಶಕುಪ್ಪೆಗೆ ಬಂದು ಭಾಗವತ ಸಮಾರಾಧನೆ ನಡೆಸುತ್ತಾರೆ. ತಾವು ತಮ್ಮ ಸಂಕಲ್ಪದಂತೆ ಮಹಾಯಾತ್ರೆ ಕೈಗೊಳ್ಳುತ್ತಾರೆ. ಮಠವು ದಾಸರ ಅಂತ್ಯ ಸಂಸ್ಕಾರವನ್ನು ಎಲ್ಲಾ ಕಾರ್ಯಗಳನ್ನು ಪೂರೈಸಿತು ಎಂದು ಹರಿಕಥಾ ಕೃತಿ ದಾಖಲಿಸುತ್ತದೆಂದು ಸಂಪಾದನಾ ಕೃತಿಯಿಂದ ತಿಳಿಯುತ್ತದೆ.

ಶ್ರೀ ತುಳಸಿರಾಮದಾಸರಿಗೆ ಹೇಗೆ ಗುರುಪರಂಪರೆಯೆಂಬುದು ಗಾಢವಾಗಿ ಇದ್ದು ಅದರಂತೆ ಗುರುವಿನ ಉಪದೇಶದಂತೆ ಸನ್ಮಾರ್ಗದಲ್ಲಿ ನಡೆದು ಗುರುವಿಗೆ ತಕ್ಕ ಶಿಷ್ಯರಾಗಿ, ಬದರಿನಾರಾಯಣನ ಅನುಜ್ಞೆಯ ಮೇರೆಗೆ ತಮ್ಮ ಜೀವನ ಮಾರ್ಗದಲ್ಲಿ ಸಾಗಿ, ಗುರುವಿನಲ್ಲಿಯೇ ದೈವವನ್ನು ಕಂಡು 'ಹರಿಏಕನಿಷ್ಠೆ'ಯ ತತ್ವವನ್ನು ಹೊಂದಿದ್ದರು. ಇದರಂತೆಯೇ ದಾಸರು ಕೂಡ ಗುರುವಾಗಿ, ಅನೇಕ ದಾಸರಿಗೆ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದರು. ಅವರೂ ಕೂಡ ತಮ್ಮ ಗುರುವಿನಂತೆಯೇ ನಡೆಯುತ್ತಾ ಶಿಷ್ಯ ಪರಂಪರೆಯನ್ನು ಉಳಿಸಿಕೊಂಡು ಗುರು ತುಳಸಿರಾಮದಾಸರು ಹಾಕಿಕೊಟ್ಟ ಬುನಾದಿಯನ್ನು ಭದ್ರಪಡಿಸಲು ಪ್ರಯತ್ನಿಸಿದ್ದಾರೆ. ಅದಕ್ಕಾಗಿ ಎರಡು ರೀತಿಯಲ್ಲಿ ಶಿಷ್ಯ ಪರಂಪರೆ ಮತ್ತು ಪ್ರಶಿಷ್ಯ ಪರಂಪರೆಯೆಂದು ವಿಂಗಡಿಸಿ ನೋಡುವುದು ವಿವರ ತಿಳಿಯುವುದು ಗುರುಪರಂಪರೆಯಲ್ಲಿ ಸೂಕ್ತವೆನಿಸುತ್ತದೆ.

೧. ಶಿಷ್ಯ ಪರಂಪರೆಯಲ್ಲಿ ಗುರುವಾಗಿ

೨. ಪ್ರಶಿಷ್ಯ ಪರಂಪರೆಯಲ್ಲಿ ಗುರುವಾಗಿ

ಎರಡು ವರ್ಗದಲ್ಲಿಯೂ ಶ್ರೀ ತುಳಸಿರಾಮದಾಸರ ಶಿಷ್ಯರಾಗಿ, ಮುಖ್ಯ ಶಿಷ್ಯರಾಗಿ ಕಂಡು ಬಂದು ಶಿಷ್ಯರ ಶಿಷ್ಯರಾಗಿ, ಪ್ರಶಿಷ್ಯರಾಗಿ ಇಂದಿಗೂ ಮುಂದುವರೆದಿರುವುದು ಶ್ರೀ ತುಳಸಿರಾಮದಾಸರನ್ನು ಗುರುವೆಂದು ಗುರುತಿಸಿ, ದೀಕ್ಷೆ ಪಡೆದು ಶ್ರೀ ಗುರುತುಳಸಿರಾಮದಾಸರ ಗುರು ಪರಂಪರೆ ಈ ರೀತಿಯಲ್ಲಿ ಇಂದಿಗೂ ಮುಂದುವರೆಯುತ್ತಿರುವುದು ಕಂಡು ಆಶ್ಚರ್ಯವೆನಿಸುತ್ತದೆ. ೧೯ನೇ ಶತಮಾನದಲ್ಲಿ ಇದ್ದಂತಹ ತುಳಸಿರಾಮದಾಸರು ಶತಮಾನಗಳ ನಂತರ ೨೧ನೇ ಶತಮಾನದಲ್ಲಿ ಬೆಳಕಿಗೆ ಬರುತ್ತಿರುವುದು ಒಂದು ದಾಸ ಪರಂಪರೆಯ ಆರೋಗ್ಯಕರ ಬೆಳವಣಿಗೆಯೆನ್ನಬಹುದು ಶಿಷ್ಯ ಪರಂಪರೆಯಲ್ಲಿ ಹಲವಾರು ದಾಸರಿದ್ದು

ಅವರಲ್ಲಿ ಮುಖ್ಯವಾಗಿ ಗುರುತಿಸಲಾದ ಸಮೀಪದವರೆನಿಸಿದ್ದ ಶಿಷ್ಯರನ್ನು ಮತ್ತು ಪ್ರಶಿಷ್ಯರನ್ನು, ಅಧ್ಯಯನ ಮತ್ತು ಪರಿಚಯಿಸುವ ದೃಷ್ಟಿಯಿಂದ ಗುರುಪರಂಪರೆಯಡಿಯಲ್ಲಿ ತಂದು ಕೆಲವರನ್ನು ಮಾತ್ರ ಹೆಸರಿಸುತ್ತಾ ತಿಳಿದ ವಿವರ ಮತ್ತು ನಾ. ಗೀತಾಚಾರ್ಯರ ಸಂಪಾದನಾ ಕೃತಿಯಿಂದ ಪಡೆದ ಮಾಹಿತಿಯ ಮೇರೆಗೆ ತಿಳಿಯಪಡಿಸುತ್ತೇನೆ.

೧. ಶಿಷ್ಯ ಪರಂಪರೆಯಲ್ಲಿ ಗುರುವಾಗಿ :-

ಮುಖ್ಯವಾಗಿ ನಮಗೆ 'ಹರಿಕಥಾ ಕೃತಿ'ಯಲ್ಲಿ ದಾಖಲಾದ ಸ್ತುತಿಗಳ ಮೇರೆಗೆ, ಹೆಸರುಗಳ ದಾಖಲಿಸಿದ ಶಿಷ್ಯರುಗಳು ಪರಂಪರೆಯಲ್ಲಿ ಗುರುತಿಸಲಾದ ಶಿಷ್ಯರುಗಳು ಚನ್ನಪಟ್ಟಣದ ಅಹೋಬಲ ದಾಸರು, ಮಳಿಗೆ ರಂಗಸ್ವಾಮಿದಾಸರು ಮತ್ತು ತೊಪ್ಪಲ್ ವೆಂಕಟಾಚಾರ್ಯಾರು ಮುಖ್ಯರಾಗಿರುತ್ತಾರೆ.

ಶ್ರೀ ತುಳಸಿರಾಮದಾಸರು ಒಂದು ಗುರುವಿನ ಪರಂಪರೆಯೊಂದಿಗೆ 'ಹರಿಏಕನಿಷ್ಠೆ'ಯನ್ನು ಸಾರಿದರು. ಅವರಂತೆ ಶ್ರೀ ತುಳಸಿರಾಮದಾಸರು ಶಿಷ್ಯ ಪರಂಪರೆಯನ್ನು ಹೊಂದಿದ್ದರು. ಎಂಬುದು ತಿಳಿದು ಬರುತ್ತದೆ. ಅನೇಕ ಶಿಷ್ಯರಿಗೆ ಗುರುವಾಗಿ, ಶ್ರೀ ಗುರು ತುಳಸಿರಾಮದಾಸರೆಂದೇ ಇವರು ಶಿಷ್ಯ ಪರಂಪರೆಯಲ್ಲಿ ಗುರುತಿಕೊಂಡಿರುವುದು ಒಂದು ಆಶ್ಚರ್ಯಕರವಾದ ಸಂಗತಿಯೇ ಸರಿಯೆನ್ನಬಹುದು. ದಾಸರು ರಾಮೋತ್ಸವ, ಕೃಷ್ಣೋತ್ಸವಗಳನ್ನು ನಡೆಸಿದ ಸಂದರ್ಭದಲ್ಲಿ ಹಲವಾರು ನೆರವಾದ ಭಕ್ತಾದಿಗಳನ್ನು ಸೇವಾಕರ್ತರನ್ನು, ಶಿಷ್ಯರ ಹೆಸರುಗಳು ಎಲ್ಲವೂ ಅದರಲ್ಲಿ ಕೆಲವು ಹರಿಕಥಾ ಕೃತಿಯಲ್ಲಿಯೂ ಮತ್ತು ತಮ್ಮ ತಮ್ಮ ಕೀರ್ತನೆಗಳನ್ನು ವೇದಾಂತದೇಶಿಕರ ಗುರುಪರಂಪರಾ ಸ್ತುತಿಯೊಂದಿಗೆ ಆರಂಭಿಸಿರುವುದು ಸಮರ್ಥಿಸುತ್ತದೆ.

ಶ್ರೀ ತುಳಸಿರಾಮದಾಸರನ್ನು ಅನೇಕ ಶಿಷ್ಯರು ಹಲವಾರು ಬಗೆಯಲ್ಲಿ ಸ್ತುತಿಸಿರುವುದು, ಅವರ ಶಿಷ್ಯರು ಕೀರ್ತನೆಗಳನ್ನು ರಚಿಸಿ ಅದರಲ್ಲಿಯೂ ಶ್ರೀ ಗುರುತುಳಸಿರಾಮದಾಸರನ್ನು ಸ್ತುತಿಸಿ, ಬಿರುದಾವಳಿಗಳಿಂದ ಹೊಗಳಿ ಸ್ಮರಿಸಿರುವುದನ್ನು ಕಾಣುತ್ತೇವೆ.

ಹರಿದಾಸ ಸಾಹಿತ್ಯ ತಜ್ಞರಾದ ವಿದ್ವಾಂಸರಾದ ಮೈಸೂರಿನ ಡಾ॥ ನಿ, ಕೃ ರಾಮಶೇಷನ್‌ರವರು "ತುಳಸಿರಾಮದಾಸರ ಶತಮಾನೋತ್ಸವ ಸಂದರ್ಭದಲ್ಲಿ 'ತುಳಸಿರಾಮದಾಸರ ಶಿಷ್ಯರ ಪರಂಪರೆ'[೧೧]ಯನ್ನು

ಕುರಿತು 'ಕನ್ನಡ ಹರಿದಾಸ ಸಾಹಿತ್ಯದಲ್ಲಿ ತುಳಸಿರಾಮದಾಸರ ಪರಂಪರೆ' ವಿಚಾರಗೋಷ್ಠಿಯಲ್ಲಿ ಉಪನ್ಯಾಸ ನೀಡುತ್ತಾ ೨೦ ಜನಕ್ಕೂ ಹೆಚ್ಚು ಜನ ಶಿಷ್ಯರಿದ್ದು, ಹರಿಕಥಾ ಕೃತಿಯಲ್ಲಿ ದೊರಕುವ ಒಂದೊಂದು ಕೀರ್ತನೆಯ ಹಾಡುಗಳಿಂದ ತಿಳಿದು ಬರುತ್ತದೆಯೆಂದು ಸ್ಪಷ್ಟಪಡಿಸಿದ್ದಾರೆ. ಆದರೆ ಆ ಶಿಷ್ಯರುಗಳ ಬಗ್ಗೆ ಬೇರೆ ಯಾವ ವಿವರಗಳ ಮಾಹಿತಿಯು ದೊರಕಿಲ್ಲವೆಂದು ಅವರೇ ನುಡಿದಿದ್ದಾರೆ, ಆದರೆ ಇಂದು ಅಂತಹ ಶಿಷ್ಯರ ಬಗ್ಗೆ ಮಾಹಿತಿ ಹುಡುಕಿ, ಸಂಶೋಧನೆಯನ್ನು ನಡೆಸಿ, ವಿಚಾರವನ್ನು ಗ್ರಹಿಸಿ ದಾಸ ಸಾಹಿತ್ಯಕ್ಕೆ ಬೆಳವಣಿಗೆಯನ್ನು ತಂದುಕೊಡುವುದು ಇಂದು ಅಗತ್ಯವಾಗಿದೆ.

ದಾಸರಿಗೆ ಎಲ್ಲಾ ವರ್ಗದ ಜನಗಳು, ಭಕ್ತರಿದ್ದರು. ಹಾಗೆಯೇ ಎಲ್ಲ ಮತದ ಶಿಷ್ಯರುಗಳು ಇದ್ದರು. ಇಂದಿಗೂ ಅವರ ಪ್ರಶಿಷ್ಯರ ಮನೆಗಳಲ್ಲಿ, ಭಜನೆ ಮಂದಿರಗಳಲ್ಲಿ ದಾಸರ ಪೋಟೋಗಳು ಪೂಜೆಗೆ ಸಲ್ಲುತ್ತಿರುವುದು, ಶಿಷ್ಯ ಪರಂಪರೆ ಮುಂದುವರೆಯುತ್ತಿರುವುದಕ್ಕೆ ಸಾಕ್ಷಿಯಂತಿದೆ.

ಹರಿಕಥಾ ಕೃತಿಯಲ್ಲಿ ದೊರೆತಿರುವ ಮಾಹಿತಿಯ ಮೇರೆಗೆ ಸುಮಾರು ೨೦-೩೦ ಮಂದಿ ಶಿಷ್ಯರ ಕೀರ್ತನೆಗಳು ಇವೆ ಎಂಬುದು ತಿಳಿದು ಬಂದರೂ ಅಷ್ಟೊಂದು ಶಿಷ್ಯರ ಮಾಹಿತಿ ದೊರಕದೆ ಇರುವುದು ಚನ್ನಪಟ್ಟಣದ ಅಹೋಬಲದಾಸರು ಮತ್ತು ರಂಗಸ್ವಾಮಿದಾಸರ ಕೀರ್ತನೆಗಳು ಮಾತ್ರ ದೊರಕಿರುವ ಕಾರಣವಾಗಿ, ಉಳಿದ ಶಿಷ್ಯರು ರಚಿಸಿರುವ ಕೀರ್ತನೆಗಳು ಮತ್ತು ಅವರ ವಿವರಗಳು ದೊರೆತರೆ ಕನ್ನಡ ಹರಿದಾಸ ಸಾಹಿತ್ಯಕ್ಕೆ ಮತ್ತಷ್ಟು ದಾಸ ಸಾಹಿತ್ಯದ ಭಂಡಾರ ದೊರಕುತ್ತದೆ.

೧೯ನೇ ಶತಮಾನದ ಮುಖ್ಯ ಹರಿಕಾರನಾಗಿ ಹರಿದಾಸ ಸಾಹಿತ್ಯದಲ್ಲಿ ಉಳಿಯುವ ಶ್ರೀ ತುಳಸಿರಾಮದಾಸರ ಕೆಲಸ ಮಹತ್ತರವಾದುದು, ಹೋದ ಕಡೆಯೆಲ್ಲೆಲ್ಲಾ ಧರ್ಮ ಜಾಗೃತಿ ಮೂಡಿಸಿದ ಮಹಾಮಹಿಮರಾಗಿ ದಕ್ಷಿಣ ಭಾಗದ ಜನಗಳಿಗೆ ಕಂಡುಬರುತ್ತಾರೆ. ಮತ್ತು ಅವರು ಶಿಷ್ಯ ಪರಂಪರೆಯನ್ನು ಮುಂದುವರಿಸಿ ಬೆಳೆಸಿದ್ದು ಕೂಡ ಅದೇ ಹೋಲಿಕೆಯನ್ನು ನೀಡುತ್ತದೆ. ಹಾಗೂ ೨೧ನೇ ಶತಮಾನದಲ್ಲೂ ಶಿಷ್ಯ-ಪ್ರಶಿಷ್ಯರ ಮೂಲಕ ಹರಿದಾಸ ಸಾಹಿತ್ಯದ ಬೆಳವಣಿಗೆಗೆ ಕಾರಣವಾದರಲ್ಲದೆ ಶಿಷ್ಯರಲ್ಲಿ ಶಿಷ್ಯರ ಗುರುಪರಂಪರೆಯನ್ನು ಹುಟ್ಟು ಹಾಕಲು ಪ್ರೇರಣೆಯಾದವರು. ವಿಶಿಷ್ಟಾದ್ವೈತದ ಮುಖ್ಯವಾಹಿನಿಯಾಗಿಯೇ ಹರಿದು ಈ ಶತಮಾನಕ್ಕೂ ಉಳಿದು, ಬೆಳೆಸಿದ ಶ್ರೀ ತುಳಸಿರಾಮದಾಸರು ದಾಸ ಪರಂಪರೆಗೆ ನೀಡಿದ ಕೊಡುಗೆಯಾಗಿದೆ.

ಸು.೫೦೦ ವರ್ಷಗಳ ಹರಿದಾಸ ಸಾಹಿತ್ಯದಲ್ಲಿ ಯಾರು ಮಾಡಲಾಗದಂತಹ ಸಮಾಜದ ಉನ್ನತಿಗಾಗಿ ದುಡಿದು, ಧರ್ಮ ಜಾಗೃತಿ ಮೂಡಿಸಿ ಒಂದು ಆಂದೋಲನದಂತೆ ಮಾಡಿದ್ದಾರೆಂಬುದು ಇಲ್ಲಿ ಗಮನಾರ್ಹವಾಗಿದೆ. ಯಾವುದೇ ಜಾತಿ, ಪಂಥ, ವರ್ಗ ಎಂದು ಭೇದವೆಣಿಸದೆ ಶ್ರೀ ತುಳಸಿರಾಮದಾಸರನ್ನು

ಅವರ ತತ್ವಗಳನ್ನು ಒಪ್ಪಿ ಬಂದು ಶಿಷ್ಯರನ್ನಾಗಿ ತನ್ನನ್ನು ಸ್ವೀಕರಿಸಿರೆಂದು ಬೇಡಿಕೊಂಡ, ಬ್ರಾಹ್ಮಣರಿಂದ ಅಂತ್ಯಜರವರೆಗೂ ದಾಸರ ಶಿಷ್ಯರಾಗಿರುವುದು ಒಂದು ವಿಶೇಷವಾದ ಸಂಗತಿಯಾಗಿದೆ.

ಚನ್ನಪಟ್ಟಣದ ಅಹೋಬಲ ದಾಸರು :-

ಅಹೋಬಲದಾಸರು ಶ್ರೀ ತುಳಸಿರಾಮದಾಸರು ತೋರಿಸಿಕೊಟ್ಟ ಮಾರ್ಗದಲ್ಲೇ ನಡೆದು ಆಧ್ಯಾತ್ಮ, ಭಕ್ತಿನಿಷ್ಠೆಯನ್ನು 'ವೇದಾಂತ ಸಿದ್ದಾಂತ' ಎಂಬ ಕೃತಿಯನ್ನು ಗುರುವಿನ ಉಪದೇಶದಂತೆ ಬರೆದರು ಮತ್ತು ನೂರಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆನ್ನವುದು ತಿಳಿಸಲಾಗಿದೆ. ಅಹೋಬಲದಾಸರು ರಚಿಸಿರುವ ತತ್ವ ಪದಗಳನ್ನು ಶಿಶುನಾಳ ಶರೀಫರು ರಚಿಸಿರುವ ತತ್ವ ಪದಗಳಿಗೆ ಹತ್ತಿರವಾಗಿರುವುದನ್ನು ಕಾಣಬಹುದು. ಶ್ರೀ ಗುರು ತುಳಸಿರಾಮದಾಸರ ಶಿಷ್ಯರಾಗಿದ್ದರು. ದಾಸರನ್ನು ಸ್ಮರಿಸಿ ಸ್ತುತಿಸಿರುವ ಕೀರ್ತನೆಯು ಈ ರೀತಿ ಇದೆ.

ದಯಾಮಾಡಬಾರದೇಕೋ ದಾಸನೊಳೆ ನೀ　　　ಪ

ಭಯ ವೇನಿಹುದೋ ನಿನ್ನ ಭಜಕನಾದ ಮ್ಯಾಲೆ
ದಯ ಸಾಕ್ಷಿಯೊಳು ಜಗತ್ರಯ ಪೂಜ್ಯವಂತ　　　೧

ಸಾಧು ಶಿಖರನೆ ಬಾರೊ ಸಕಲಾಂತರವತೋರೋ
ಪಾದ ಸೇವಕನು ನಾನಾದ ನೀನೆ ಮೇಲೆ ನಿಂತು ನೀ　　　೨

ನಿತ್ಯೋತ್ಸವನೇ ದೇವಾ ನೀನೆ ಮಹಾನುಭಾವ
ಪ್ರತ್ಯಕ್ಷಮಾದ ಮದ್ಗುರುವೇ ತುಲಸೀರಾಮಾ　　　೩

ಎಂದು ದಾಸರನ್ನು ಗುರುವೆಂದು ಒಪ್ಪಿ ನೀನೆ ದೇವ ಗುರು-ದೈವದ ನಡುವೆ ಅಂತರವನ್ನು ಹುಡುಕದೇ ನೀನೆ ದೈವ ಎಂಬುದರಲ್ಲಿ ಶಿಷ್ಯನ ಅಂತರಾತ್ಮವನ್ನು ಸಾಕ್ಷಾತ್ಕರಿಸಿಕೊಂಡ ಭಕ್ತನ ಮೊರೆ ಇದೆ. ಗುರುವನ್ನು ಅನ್ಯವೆಂದು ಭಾವಿಸದೇ, ಪ್ರತ್ಯಕ್ಷವಾಗಿ ಕಾಣುವ ದೈವವೆಂದು, ಮಹಾನುಭಾವವೆಂದು, ಮದ್ಗುರುವೆ ಎಂದು ಹೇಳುವ ಮುಖೇನ ಅಹೋಬಲ ದಾಸರು ತುಳಸಿರಾಮದಾಸರನ್ನು ಗುರುವೆಂದು ದೃಢವಾಗಿ ಒಪ್ಪಿದ್ದರು. ಎಂಬ ಸಂಗತಿ ತಿಳಿಯುತ್ತದೆ.

"ಧೀರ ಭವದೂರಾಸುಕುಮಾರಾ ಮುಖದೋರೋ ಜೀಯಾ　　　ಪ

ನಾರಾಯಣ ಕೇಶವ ಹರೀ ರಂಗ ನರರೂಪನೆ ಕರುಣಾಕರ ಅ. ಪ

ಶರಣಾಗತ ಪರಿಪಾಲಿತ ಶರಣೆಂದೆನೋ ಸುರಮುನಿ ಹಿತ
ಉರಗಾಸನ ಓಂಕಾರನೆ ನರಸಿಂಹನೆ ಪರಬ್ರಹ್ಮನೆ ೧

ಕಾಮಾದಿಗಳ ಸಮರ ಸಹಿ ಪ್ರೇಮಾತಿಶಯ ಕೃಪಾಳೊ
ನಾಮಾಮೃತ ಮಾಲಪಾಲನೆ ಮಹರಾಯನೆ ಮದವಾರಣ ೨

ಅಟಂಗಜಹತನಾಶಿವನುತ ಮಂಗಳ ಜಯ ತುಲಸೀರಾಮಾ

ತಿಂಗಳಧರ ವಿನತಾಗುರಿ ಮಂಗಳ ಪುರಿ ಜಂಗಮಮ ೩

ಮಾನವ ಶರೀರವನ್ನು ಧರಿಸಿ, ಗುರುವಿನ ರೂಪವಾದ ದೈವಾಂಶ ಸಂಭೂತರೆಂದು ಅಹೋಬಲದಾಸರು ಶ್ರೀ ತುಳಸಿರಾಮದಾಸರನ್ನು ನಂಬಿದ್ದನ್ನು ಈ ಮೇಲಿನ ಕೀರ್ತನೆಯ ಮೂಲಕ ಹೇಳುತ್ತಾ ಗುರುವನ್ನು ದೇವನೆಂದೆ ಭಾವಿಸಿ ನಾರಾಯಣ, ಕೇಶವ, ಹರಿ, ನರರೂಪನಾದ ಕರುಣಾಕರ, ಓಂಕಾರ ನರಸಿಂಹ, ಪರಬ್ರಹ್ಮ, ಎನೆಲ್ಲವಾಗಿ ತಮ್ಮ ಗುರುವನ್ನು ಕಂಡಿರುವುದನ್ನು ಗುರುತಿಸಬಹುದು.

ಅಹೋಬಲದಾಸರು ತುಳಸಿರಾಮದಾಸರ ಹೆಸರನ್ನೇ ತನ್ನ ಅಂಕಿತವಾಗಿಸಿಕೊಂಡಿದ್ದಾರೆ. ಇವರು ನೇರವಾಗಿಯೇ ದಾಸರ ಬಗ್ಗೆ ೧೪ ಕೀರ್ತನೆಗಳನ್ನು ರಚಿಸಿದ್ದಾರೆ. ಅಲ್ಲದೆ ಪರೋಕ್ಷವಾಗಿಯೇ ದಾಸರ ಬಗ್ಗೆ ೧೪ ಕೀರ್ತನೆಗಳನ್ನು ರಚಿಸಿದ್ದಾರೆ. ಅಲ್ಲದೆ ಪರೋಕ್ಷವಾಗಿಯೇ ಗುರು ಸ್ತುತಿಯನ್ನು ಅನೇಕ ಕೀರ್ತನೆಗಳಲ್ಲಿ ಮಾಡಿದ್ದಾರೆ. ಗುರು ಉಪದೇಶದಂತೆ 'ವೇದಾಂತ ಸಿದ್ಧಾಂತ'ವು ಇವರ ಗ್ರಂಥವಾಗಿದೆ.

ಗುರು ಮೆಚ್ಚಿದ ಶಿಷ್ಯನಾಗಿ ನಡೆದು ಗುರು ತೋರಿದ ದಾರಿಯಲ್ಲಿ ಸಾಗಿ ಸನ್ಮಾರ್ಗದ ಮೂಲಕ ಗುರು ಸೇವೆಯನ್ನು ಮಾಡಿ ದೈವ ಸಾಕ್ಷಾತ್ಕಾರವನ್ನು ಪಡೆದ ಸಾಧಕರಾಗಿ ಪರಮ ಭಕ್ತರೆನಿಸಿದ್ದರು.

'ಓಡಿ ತೆನ್ನಯ ಭವಗಳೆಲ್ಲವೂ ಕಂಡೆನಾ ನಿಜಗಂಡನಾ'
'ದೇಶಿಕೋತ್ತಮನಾದ ನಿಜಗುರುದಾಸ ತುಳಸೀರಾಮನ'

'ನಮಃ ಓ ನಮಃ ಮಮದೇಶಿಕ'

'ಭುವನದೊಳಗೊಬ್ಬ ಶಿವಯೋಗಿ ಕಂಡೆ'

'ವೇದಾಂತ ಗುರು ಸಾರ್ವಭೌಮ'
'ನಿನ್ನೊಳಗಿರಿಸೆನ್ನ ಚಿತ್ತ'
'ಧ್ಯಾನಧರಣನಾಗಬೇಕಂತೆ'

ಗುರು ಒಲಿದರೆ ಭವಗಳೆಲ್ಲವೂ ಕಳೆದು, ಧ್ಯಾನಾಧಾರಣನಾಗಿ ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುವರೆಗೆ ಇವರಲ್ಲಿ ಗುರುವಿನ ಭಾವವನ್ನು ಗುರುತಿಸಬಹುದು.

'ಸಮಾಧಿಯೊಳು ನೋಡು ನಮ್ಮ
ರಮಾಪತಿ ನಿನ್ನೊಳಗಿರುತಿವನೂ ಪ

ನಮಾಮಿ ನಾರಾಯಣ ಬಿಡದೆ
ಮಮೇಕ ಶರಣೆಂಬೆನ್ನುತಲೀ
ಉಮಾಪತಿ ಗುಣ ನೀನಹುದೇನುತ ೧

ಪರಂಧಾಮನೊಳು ಬೆರೆದಿರು ಕಂಡ್ಯಾ
ನಿರಂತರಮಭ್ಯಾಸದೊಳು
ಗುರುಂದೇಹಿಯೆಂದೆನ್ನುತ ಅನುದಿನ
೨

ವಾಣಿಯ ಪತಿ ಗುಣಹಾರಾತ್ರಿ
ಗುಣಕಾರಾ ಅಸ್ಮದ್ದೇಶಿಕನೂ
ಕಾಣಿರಿ ತುಳಸಿರಾಮನೆ ನಿರ್ಗುಣ ೩

ಏಕಭಕ್ತಿಯ ಏಕಮನಸ್ಸಿನ ದೈವೀ ಭಾವವು ಹಲವಾರು ಕೀರ್ತನೆಗಳಲ್ಲಿ ಗುರುವೇ ಸರ್ವಸ್ವವೆಂಬುದು ವ್ಯಕ್ತವಾಗುತ್ತದೆ.

ಹರಿಕಥಾ ಕೃತಿಯಲ್ಲಿ "ಶ್ರೀರಂಗಪಟ್ಟಣದ ಕಾವೇರಿ ತೀರದ ಕಿರಂಗೂರು ಸಮೀಪ ದಾಸರ ಸಂಸ್ಕಾರದಲ್ಲಿ ಪ್ರಾತಃ ಸಮಯದ ಭಜನೆಗಾಗಿ ಅನೇಕ ಭಜನಾವಳಿ ಕೀರ್ತನೆಗಳನ್ನು ರಚಿಸಿದ್ದಾರೆ. ಅವರು ತುಳಸಿರಾಮದಾಸ ಮೇಲಿನ ಭಕ್ತಿಯ ಅಮಲಿನಲ್ಲಿಯೇ ತೇಲಿ ಆಸ್ಥಳದಲ್ಲಿಯೇ ಉಳಿದು ಗುರು ಸಿದ್ಧಾಂತ

ಉಪದೇಶ ಪಡೆದುಕೊಂಡು ಅನೇಕ ತತ್ವಪದಗಳನ್ನು ದಾಸರು ರಚಿಸಿದ್ದಾರೆಂದು" ಸಂಪಾದನ ಕೃತಿಯಿಂದ ಟಿಪ್ಪಣಿಯ ಮೂಲಕ ತಿಳಿದು ಬರುತ್ತದೆ. ಗುರುವು ಸಮಾಧಿಯೊಳಗೂ ಹೇಗೆ ಉಮಾಪತಿಯ ಗುಣವೂ ಗುರುವಿಲ್ಲಿರುತ್ತದೆ, ಎಂದು ಸಮಾಧಿಯಲ್ಲಿರಲಿ ಬೇರೆ ಎಲ್ಲಿಯೇ ಇರಲಿ ಗುರುವಿನ ಗುಣಗಳು ಉನ್ನತವಾಗಿಯೇ ಇರುವವೆಂದು, ಜಗತ್ತು-ಸಮಾಧಿಯಲ್ಲಿ ಸಮನ್ವಯವನ್ನು ಗುರುತಿಸಬಹುದಾಗಿದೆ. ವಿಶಿಷ್ಟಾದ್ವೈತದ ಭಕ್ತಿಭಾವವು ಮುಖ್ಯವಾಗಿ ಕಂಡು ಬರುತ್ತದೆ. ಹರಿನಿಷ್ಠೆ ಏಕತೆಯಾಗಿರುವುದು, ವಿಶಿಷ್ಟಾದ್ವೈತ ಲಕ್ಷಣವೂ ಗುರುವಿನಲ್ಲೂ ಭಕ್ತಿಯಲ್ಲೂ ಗುರುವನ್ನು ಶಿಷ್ಯರು ಅರ್ಥೈಸಿಕೊಳ್ಳುವ ರೀತಿಯಲ್ಲೂ 'ಏಕನಿಷ್ಠೆ'ಯನ್ನು ಕಾಣಬಹುದು.

ಮಳಿಗೆ ರಂಗಸ್ವಾಮಿದಾಸರು :-

ಮಳಿಗೆ ರಂಗಸ್ವಾಮಿದಾಸರು ಮುಳುಬಾಗಿಲಿನವರು ಇವರು ತುಳಸಿರಾಮದಾಸರ 'ತಿರು ನಕ್ಷತ್ರ' ಆಚರಿಸಿದ್ದ ಉಲ್ಲೇಖವು ಮುಳುಬಾಗಿಲಿನ ಭಾರ್ಗವರಾಮ ಭಜನಾ ಮಂದಿರದಲ್ಲಿ ಕಂಡು ಬರುತ್ತದೆ. ಶ್ರೀ ತುಳಸಿರಾಮದಾಸರ ಶಿಷ್ಯ ವರ್ಗದಲ್ಲಿ ಪ್ರಮುಖವಾದ ಮತ್ತು ಪ್ರಭಾವ ಬೀರುವಂತಹ ಶಿಷ್ಯರೆಂದು ಮಳಿಗೆ ರಂಗಸ್ವಾಮಿಯವರನ್ನು ಗುರುತಿಸಿಲಾಗಿದೆ. ಶ್ರೀ ತುಳಸಿರಾಮದಾಸರ ನಂತರ ಅವರ ಪರಂಪರೆಯನ್ನು ಮುಂದುವರೆಸಿದ್ದಾರೆ. ಮುಳುಬಾಗಿಲಿನ ಭಜನಾ ಮಂದಿರ ಸ್ವತಃ ಇವರ ಆಸ್ತಿಯಾಗಿದ್ದು ಆನಂತರ ತುಳಸಿರಾಮದಾಸ ಗುರುಗಳ ಸ್ಮರಣೆಯಲ್ಲಿ ದೇವಾಲಯವಾಗಿಸಿದ್ದಾರೆ. ರಾಮಕೋಟಿ ಭಜನೆಯನ್ನು ಆಚರಣೆಗೆ ತಂದಿದ್ದಾರೆ. ಇವರು ಗಾಣಿಗ ವರ್ಗಕ್ಕೆ ಸೇರಿದವರಾಗಿದ್ದೂ ಸು. ಕೀರ್ತನೆಗಳನ್ನು ರಚಿಸಿದ್ದಾರೆ. ಶಿಷ್ಯ ಪರಂಪರೆಯನ್ನು ಇವರೂ ಹೊಂದಿದ್ದಾರೆ.

"ಹರಿಕಥಾ" ಕೃತಿಯಲ್ಲಿ ರಂಗಸ್ವಾಮಿ ದಾಸರ ಹದಿನೈದು ಕೀರ್ತನೆಗಳು ಕನ್ನಡದಲ್ಲಿವೆ. ಇವರು ಗುರುವಾದ ತಮ್ಮ ಶ್ರೀ ತುಳಸಿರಾಮದಾಸರನ್ನು ಕುರಿತು ಸ್ತುತಿಸಿರುವ ನಾಲ್ಕು ಕೃತಿಗಳಿವೆಯೆಂದು ತಿಳಿದಿದೆ. "ಶ್ರೀ ಶಠಗೋಪದಯಾಕೆಪಾತ್ರಂ ಶ್ರೀ ಪದಯಾಪಾತ್ರಂನ ಶ್ರೀಮದ್ಗುರು ತುಳಸಿರಾಮರ್ಯಂ" ಎಂಬುದು ರಂಗಸ್ವಾಮಿದಾಸರ ಕೃತಿ ಇವರು ರಚಿಸಿರುವ ನಾಲ್ಕು ಕೃತಿಗಳು ಬಿಟ್ಟರೆ ಉಳಿದೆಲ್ಲವು ತೆಲುಗಿನಲ್ಲಿವೆ. ತೆಲುಗಿನಲ್ಲಿರುವ ಕೀರ್ತಯ ಮೊದಲ ಸಾಲು ಈ ರೀತಿ ಇದೆ.

'ವಂದನ ಮುಲುಚೇತು ಮೀಪಿದ'
'ಶ್ರೀ ತುಳಸಿರಾಮದಾಸ ಸದ್ಗುರುವರ್ಯಂ'

'ಆನಂದನಿಲಯ್ಯಾನುನೆಂದು ಗಂದು ನೀ'

'ಬೆಂಗಳೂರಿನ ಮಂಡಿಮೇಕಲ ಮಲ್ಲಯ್ಯನ ಛತ್ರದಲ್ಲಿ ತುಳಸಿರಾಮದಾಸರು ಇದ್ದಾಗ, ರಂಗಸ್ವಾಮಿದಾಸರು ಬಂದು ಸೇವಿಸಿ ಅನುಗ್ರಹ ಪಡೆದು ಅವರನ್ನು ಸ್ತುತಿಸಿದ ಕೀರ್ತನೆಗಳೆಂದು ಇದಕ್ಕೆ ಟಿಪ್ಪಣಿಯಿದೆಯೆಂದು ನಾ ಗೀತಾಚಾರ್ಯ್ಯರ ಸಂಪಾದನಾ ಕೃತಿಯು ಮಾಹಿತಿ ಒದಗಿಸುತ್ತದೆ.

ಪರಮವೈಷ್ಣವ, ರಹಸ್ಯಾರ್ಥ ಶಠಗೋಪ ಎಂದು ಪರಿಭಾಷೆಯನ್ನು ಬಳಸಿಕೊಂಡು ಶ್ರೀ ತುಳಸಿರಾಮದಾಸರ ಸಾಧನೆ ಸಿದ್ದಿಗಳನ್ನು ಮನೋಹರವಾಗಿ ಸ್ತುತಿಸಿ "ಭಕ್ತಿ ಪ್ರಿಯ ನಿಜದಾಸ ಶ್ರೇಷ್ಠ"ರೆಂದು ತುಳಸಿರಾಮದಾಸರನ್ನು ಗೌರವಿಸಲಾಗಿದೆ. ಇನ್ನೂ ಕನ್ನಡದಲ್ಲಿಯೂ ಸಹ ರಂಗಸ್ವಾಮಿದಾಸರು:

"ಗುರುವರ ತುಳಸಿರಾಮಯ್ಯ ಪೂರ್ವಾದ್ವಾರ

'ಗುರುಸ್ತುತಿ ಮಾಂ ಪಾಲಯಾ ವಿಜಿತೇಂದ್ರಿಯಾ'

'ಜಯ ತುಳಸಿರಾಮಾ ಜಗದಭಿರಾಮಾ
ಭಯನಗಸುತ್ರಾಮ ಭರತ ಪುರೀಧಾಮ' ಪ

ಜೊಜೊ ತುಳಸಿರಾಮಾ ಜೊಜೊ ಶ್ರೀರಾಮ
ಜೊಜೊ ಸುಗುಣಸ್ತೋಮ ಜೊಜೊಯಭಿರಾಮಾ

ಸ್ವಾಮೀ ಲಾಲೀ ತುಲಸಿರಾಮ ಲಾಲೀ
ಪ್ರೇಮ ತುಳಸಿ ನಳಿನಾಕ್ಷಿದಾಮ ಲಾಲೀ'

ಎಂಬ ಈ ಮೇಲಿನ ಕೀರ್ತನೆಗಳ ಸಾಲುಗಳಲ್ಲಿ ತಮ್ಮ ಗುರುವನ್ನು ಗುರುವಾಗಿಯೇ ನೋಡುವ ಕ್ರಮ ಎಲ್ಲವನ್ನು ಜಯಿಸಿ ನಿಂತ ಗುರುವನ್ನು ಜೊಜೊ ತುಳಸಿರಾಮ ಎಂದು ಹೇಳುವ ಬಗೆ, ಶಿಷ್ಯನು ತಾಯಿಯಾಗಿ ವಾತ್ಸಲ್ಯಮಯವಾದ ಸ್ಥಾನದಲ್ಲಿ ನಿಂತು ಗುರುವನ್ನು ಮಗುವಿನಂತೆ ಭಾವಿಸಿ ಹಾರೈಸಿ ಲಾಲೀ ಹಾಡುವ ದೃಷ್ಟಿ, ಶಿಷ್ಯ ಗುರುವಿನ ವಾತ್ಸಲ್ಯಮಯ ಸಂಬಂಧ ರಂಗಸ್ವಾಮಿದಾಸರ ಕೀರ್ತನೆಯ ಸಾಲುಗಳಲ್ಲಿಯೇ (ಪ್ರಾರಂಭದ) ಗುರುತಿಸಬಹಬುದಾಗಿದೆ. ಮತ್ತು ಕನ್ನಡ, ತೆಲುಗು, ಹಾಘೂ ಸಂಸ್ಕೃತ ಭಾಷೆಯಲ್ಲಿ ತಮ್ಮ ಕೀರ್ತನೆಗಳನ್ನು ರಚಿಸಿ ಸ್ತುತಿಸಿರುವುದು ವಿಶೇಷವೆನ್ನಬಹುದು

ದರಿಶಕುಪ್ಪದ ವೆಂಕಟದಾಸರು :-

ಇವರು ಮಳಿಗೆ ರಂಗಸ್ವಾಮಿದಾಸರ ಶಿಷ್ಯರಾಗಿದ್ದಾರೆ. ಇವರು ತಮ್ಮ ನಾಲ್ಕು ಸ್ತುತಿಗಳನ್ನು ರಚಿಸಿದ್ದಾರೆ. ತಮ್ಮ ಗುರುವಿನ ಗುರುವನ್ನು ತಮ್ಮ ಕೀರ್ತನೆಗಳಲ್ಲಿ ಸ್ತುತಿಸಿರುವುದನ್ನು ಗುರುತಿಸಬಹುದಾಗಿದೆ.

'ಗುರುವೆ ತುಳಸಿರಾಮ ಕರುಣಿಸು ನೀ ಎನ್ನ
ಚರಣ ಸೇವೆಯ ತೋರೋ ರಾಂ ರಾಂ ರಾಂ'

'ಮೋಸ ಹೋದೆ ತುಳಸಿರಾಮ
ಮೋಸ ಹೋದೆ ಸುಗುಣಧಾಮ'

ಎಂದು ತನ್ನ ಭವ ಬಂಧನಗಳ ವ್ಯಾಮೋಹದಿಂದ ನಾನು ಮೋಸ ಹೋಗಿರವೆ ಗುರುವಾಗಿಸನ್ಮಾರ್ಗ ತೋರು ಎಂದು ಸ್ತುತಿಸಿರುವುದನ್ನು ತಮ್ಮ ಕೀರ್ತನೆಗಳಲ್ಲಿ ಗಮನಿಸಬಹುದು.

ಕಹಾಳ ಭೈರವ ಕವೀಶ್ವರ :-

ಇವರು ತುಳಸಿರಾಮದಾಸರನ್ನು ಕುರಿತು ತೆಲುಗಿನಲ್ಲಿ 'ತುಳಸಿರಾಮದಾಸಲು ಚರಿತಮು' ಎಂಬ ಹೆಇಕಥೆಯನ್ನು ಬರೆದಿರುವ ಶಿಷ್ಯ ಮತ್ತು ಕೀರ್ತನಕಾರನೆಂದು ಗುರುತಿಸಲಾಗಿದೆ.

(ಹರಿಕಥಾ ಕೃತಿಯಲ್ಲಿ ಒಂದು ಉಲ್ಲೇಖವು ಈ ರೀತಿಯಲ್ಲಿ ದೊರೆಯುತ್ತದೆ. ತುಳಸಿರಾಮದಾಸರು ಚಿಂತಾಮಣಿ ತಾಲ್ಲೋಕು ವಡ್ಡಪಲ್ಲವಿಯಲ್ಲಿ ಕೃಷ್ಣೋತ್ಸವವನ್ನು ಆಚರಿಸುತ್ತಿರುವಾಗ ಹೇಳಿದ ಮಾತುಗಳ ಉಲ್ಲೇಖವು ಈ ವಿಷಯವನ್ನು ಒಳಗೊಳ್ಳುತ್ತದೆ. "ವಡ್ಡಪಲ್ಲಿಯೆ ಶ್ರೀನಿವಾಸದಾಸ ಹನುಮಂತಯ್ಯನೆಂದು, ಬೆಂಗಳೂರಿನ ಗಿರಪ್ಪಯ್ಯ ಶಕ್ತಿಯ ಆದಿಶೇಷನೆಂದು ನೀವೆ ಶ್ರೀರಾಮನೆಂದು, ವಡ್ಡಪಲ್ಲಯೇ ಅಯೋಧ್ಯೆಯೆಂದು ನಿಷ್ಠರಾದ ಬ್ರಾಹ್ಮಣರೇ ವಸಿಷ್ಠರುರೆಂದು, ಶ್ರಾವಣ ಮಾಸದಲ್ಲಿ ಜರುಗಿದ ಕೃಷ್ಣೋತ್ಸವವೇ ಶ್ರೀರಾಮರ ಅಶ್ವಮೇಧಯಾಗ) ದೊರಕುತ್ತದೆ. ಎಂದು ತಿಳಿಸಿದ್ದಾರೆ.

ತೊಪ್ಪಲ್ ವೆಂಕಟಾಚಾರ್ಯಾರು :-

ಇವರು ತುಳಸಿರಾಮದಾಸರ ಕಾಲದಲ್ಲಿ ಮುಜರಾಯಿ ಇಲಾಖೆಯಲ್ಲಿ ಆಗಮ ಪಂಡಿತರಾಗಿದ್ದಂತೆ ತಿಳಿದುಬರುತ್ತದೆ. ಇವರು ಪ್ರಮುಖವಾಗಿ ವಿಶಿಷ್ಟಾದ್ವೈತದ ಸಿದ್ಧಾಂತಿಗಳೆಂದು ತಿಳಿಯಲಾಗುತ್ತವೆ. ಅನೇಕ

ಗ್ರಂಥಗಳನ್ನು ಬರೆದಿದ್ದಾರೆ, ಯದುಗಿರಿಯಮ್ಮನವರ ಕೀರ್ತನೆಗಳನ್ನು ಇವರು ಪ್ರಕಟಿಸಿದ್ದಾರೆ. ಸಂಸ್ಕೃತದಲ್ಲಿ ರಚಿಸಿರುವ ಮಂಗಳ ಶಾಸನ ಸ್ತುತಿಯಲ್ಲಿ ಗುರುವನ್ನು ಕುರಿತಾಗಿದ್ದು, ಈ ರೀತಿಯಲ್ಲಿ ಕಂಡುಬರುತ್ತದೆ.

'ಯಮುನಾರ್ಯಾಯಚ ಮಹಾಪೂರ್ಣಾಯ ಗುಣಸಿಂಧುವೇ
ಶ್ರೀರಾಮಾನುಜ ಯೋಗೀಂದ್ರ ಗುರುವೇ ನಿತ್ಯ ಮಂಗಳ' ೨

- - - - - - - - - - - - - - - - - -

- - - - - - - - - - - - - - - - - - -

ಮಂಗಳಂ ತುಳಸಿರಾಮದಾಸವರ್ಯ ಕೃನಿದೇ
ಮಂಗಳಂ ರಾಮಭದ್ರಾಂಘ್ರಿ ಪದ್ಮಭೃಂಗ ಮಹಾ ಮಾತೇ ೨೫

ವಧಾತಂ ತುಳಸಿರಾಮ ವಾಕ್ಸಧಾ ಲಹರೀ ಮುಹಃ
ವದಿತ ತಾಂ ಕಸ್ಯರುಚಿರ ರಾಮಕೃಷ್ಣ ಮಹೋತ್ಸವಾ ಮಂಗಳಾಚರಣಂ ೨೬

ಶ್ಲೋ॥ ಮಂಗಳಂ ತುಲಸೀರಾಮ ಮಂಗಳಂ ವಿಜೆತೇಂದ್ರಿಯ
ಮಂಗಳಂ ತ್ರಿಗುಣಾತೀತ ಮಂಗಳಂಚ ಭವಂತುತೇ
ಮಂಗಳಂ ಚೇತನೋದ್ಧಾರ ಕಲ್ಯಾಣ ವಪ್ರಷೇಸದಾ
ಬುಧಾರಾಧನಾ ವಿಖ್ಯಾತ ಸಂತತಂ ತವ ಮಂಗಳಂ

ಹೀಗೆ ದಾಸರನ್ನು ಬಹು ವಿಧವಾಗಿ ಸ್ತುತಿಸಿ ರಚಿಸಿರುವುದು ಗಮನಾರ್ಹ. ವಿಜಿತೇಂದ್ರಿಯ, ತ್ರಿಗುಣಾತೀತ, ಚೇತನೋದ್ಧಾರ ಮುಂತಾದ ನಾಮಗಳಿಂದ ಗುರುವನ್ನು ಹೊಗಳಿ, ಗುರುವಿಗೆ ಶರಣಾಗಿದ್ದಾರೆ.

ವೇದಾಂತ ಶಿವರಾಮ ಶಾಸ್ತ್ರಿಗಳು :-

'ಶಂಕರ ದಾಸ' ಎಂಬ ಹೆಸರಿನಿಂದ ಹಲವು ಕೀರ್ತನೆಗಳನ್ನು ಅದ್ವೈತ ಪರವಾದ ಹಾಡುಗಳನ್ನು ರಚಿಸಿ ದಾಸರಾಗಿದ್ದಾರೆ. ಇವರ ಸ್ತುತಿಗಳಲ್ಲಿ ಮುಖ್ಯವಾಗಿ ತಿಳಿದು ಬರುವುದೇನೆಂದರೆ ತುಳಸಿರಾಮದಾಸರಲ್ಲಿ ವೇದಾಂತ ತತ್ವಗಳನ್ನು ಕಲಿತಿರುವಂತೆ ತಿಳಿಯುತ್ತದೆ. ಸಂಸ್ಕೃತದಲ್ಲಿ ರಚಿಸಿರುವ ಇವರ ಮಂಗಳ ಸ್ತುತಿಯು

ಶ್ರೀ ವಾಣೀ ವಿಭವ ಪ್ರಭಾವ ವಿಲಸತ್ಸಮ್ರಾಟ್ಕಿರಿಟೋಲ್ಲ
ಸನ್ನಾನಾರತ್ನ ಮರಿಚೀ ದೀಪಕಲಿಕಾ ನೀರಾಜಿತಾಂಘ್ರಿದ್ವಯಃ

ಮಲಸ್ವಸ್ವಾಂತ ಪುಷ್ಪಂಧಯೋಸೀತಾನಾಥ ಪದಾಬ್ಜಲೀನವಿ
ಜೀಯತ್ಸದ್ಧೃದಯೈಕ್ ತುಲಸೀರಾಮಾಖ್ಯ ಯೋಗೀಶ್ವರಃ ೧

ಮತ್ತು ಇನ್ನೊಂದು ಸ್ತುತಿಯಲ್ಲಿ

'ಯಾಕೆ ಜಪತಪ ಯಾಗಯೋಗ
ಗಳ್ಯಾಕೆ ಯಾತಾ ಯಾತಾ ಯಾತ್ರೆಗ
ಳ್ಯಾಕೆ ವ್ರತ ನಿತ್ಯೋಪಾಸವು ಬರಿದೆ ದುಃಖವಿಮಾ
ಲೋಕ ಪಾವನ ಮೂರ್ತಿ ನೀ ಪರ
ಲೋಕ ಬಾಂದವನಿರಲು ಮುಕ್ತಿಗೆ
ಸಾಕು ನಿಮ್ಮ ಕಟಾಕ್ಷ ತುಳಸಿರಾಮದಾಸಾರ್ಯಾ' ೫

ಮೋಕ್ಷ ಸಿದ್ಧಿಯ ಸಾಧನೆಗೆ ಯಾವುದೂ ಬೇಕಿಲ್ಲ. ಲೋಕವನ್ನೆಲ್ಲಾ ಪಾವನಗೊಳಿಸುವ ಮೂರ್ತಿ ನೀನು. ನಿನ್ನ ಕೃಪಾಕಟಾಕ್ಷ ಮೇಲಿದ್ದರೆ ಸಾಕು, ಮುಕ್ತಿ ದೊರಕುತ್ತವೆ. ಎಂದು ತುಳಸಿರಾಮದಾಸರನ್ನು ಗುರುವಾಗಿ ಸ್ತುತಿಸಿದ್ದಾರೆ.

ಗುರು ಪರಂಪರೆ ಮತ್ತು ಶಿಷ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದಕ್ಕೆ ಸಾಕ್ಷಿಯಂತಿರುವ ಪ್ರಶಿಷ್ಯ ಪರಂಪರೆಯೂ ಕೂಡ ಅತ್ಯಂತ ಮುಖ್ಯವಾಗಿ ಗುರುತಿಸಬೇಕಾಗಿದೆ. ಅವರಲ್ಲಿ ಕೆಲವನ್ನಾದರೂ ಪ್ರಸ್ತಾಪಿಸುವುದು ಈ ಸಂದರ್ಭಕ್ಕೆ ಸೂಕ್ತವೆನ್ನಿಸುತ್ತದೆ.

ಶ್ರೀ ಗುರು ತುಳಸಿರಾಮದಾಸರು ಕೃತಿಯ ಸಂಪಾದಕರಾದ ನಾ. ಗೀತಾಚಾರ್ಯರವರು ಶಿಷ್ಯ ಪ್ರಶಿಷ್ಯ ಪರಂಪರೆಯ ಬಗ್ಗೆ, ತುಳಸಿರಾಮದಾಸರ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ, 'ಶಿಷ್ಯ ಪರಂಪರೆ'ಯ ಸಮಾವೇಷದಲ್ಲಿ ಶಿಷ್ಯ ಪ್ರಶಿಷ್ಯರನ್ನೆಲ್ಲರನ್ನೂ ಪಾಲ್ಗೊಳ್ಳುವಂತೆ ಮಾಡಿರುವುದನ್ನು ಸ್ಮರಿಸುತ್ತಾ ಆ ಮಾಲಿಕೆಯಲ್ಲಿ ಮೂಡಿದ ಮಾಹಿತಿಗಳನ್ನು ಪ್ರಶಿಷ್ಯ ಪರಂಪರೆಯಲ್ಲಿ ಸ್ಮರಿಸುತ್ತಾ ಗುರುತಿಸಲು ಮುಖ್ಯವೆನಿಸುತ್ತದೆ.

ಚೌಡಯ್ಯ ದಾಸರು :–

ಇವರು ಬೆಂಗಳೂರಿನಲ್ಲಿದ್ದು ನೇಯ್ಗೆಯ ಮತಸ್ಥವರಾಗಿದ್ದು, ದಾಸ ದೀಕ್ಷೆಯನ್ನು ಪಡೆದುಕೊಂಡು ಆನಂತರ ಅದಕ್ಕಾಗಿಯೇ ಅಂದರೆ ಮತಧರ್ಮ ಪ್ರಚಾರಕ್ಕಾಗಿಯೇ ಉದ್ಯೋಗವನ್ನೇ ತ್ಯಜಿಸಿ ದಾಸರ ಸಂದೇಶಗಳ ಮೂಲಕ ಧರ್ಮ ಪ್ರಚಾರದಲ್ಲಿ ನಿರತರಾಗಿರುವುದನ್ನು ಕಾಣುತ್ತೇವೆ. ಇವರು ಶಡಗೋಪದಾಸರ

ಶಿಷ್ಯರಾಗಿ ಇದ್ದಾರೆ. ಶಡಗೋಪದಾಸರು ತುಳಸಿರಾಮದಾಸರ ಶಿಷ್ಯರಾದ ರಂಗಸ್ವಾಮಿದಾಸರ ಶಿಷ್ಯರು. ಶಡಗೋಪದಾಸರು ಬೆಂಗಳೂರಿನಲ್ಲಿದ್ದು ಮುಕ್ತಿಯ ಮಾರ್ಗಗಳಾದ ಹರಿಕಥೆ, ಭಜನೆ, ರಾಮಕೋಟಿ ನಾಮಗಳ ಮೂಲಕ ದೈವಾನುಸಂಧಾನ ಮಾಡಿದವರಾಗಿದ್ದಾರೆಂದು ಹೇಳಿದ್ದಾರೆ. ಈ ಶಡಗೋಪದಾಸರಲ್ಲಿ ಶ್ರೀ ತುಳಸಿರಾಮದಾಸರು ಮತ್ತು ರಂಗಸ್ವಾಮಿದಾಸರ ಮಾಹಿತಿಗಳು ಲಭ್ಯವಿದೆಯೆಂಬುದು ತಿಳಿದು ಬರುತ್ತದೆ.

ತುಳಸಿರಾಮಮುನಿದಾಸರು :–

ಇವರು ರಂಗಸ್ವಾಮಿದಾಸರ ಶಿಷ್ಯರ ಶಿಷ್ಯರಾಗಿ ನಮಗೆ ಕಂಡು ಬರುತ್ತಾರೆ. ಇವರೂ ಕೂಡ ಒಕ್ಕಲಿಗ ಮತಕ್ಕೆ ಸೇರಿದವರು. ೩೨ ವರ್ಷಗಳಿಂದಲೂ ಹರಿಕಥೆ, ಭಜನೆ, ರಾಮಕೋಟಿ ನಾಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ, ಕೋಲಾರದ ಹಳ್ಳಿಗಳಾದ ಮಾಂಡಿಹಳ್ಳಿ, ಮಾವಿನಹಳ್ಳಿಗಳಲ್ಲಿ ಇವರು ತಮ್ಮ ಕಾರ್ಯಕ್ರಮಗಳನ್ನು ಮಾಡಿ ಹೆಚ್ಚು ತೊಡಗಿಸಿಕೊಂಡಿದ್ದಾರೆಂದು ಇವರ ಮಗನಾದ ಚಲುವರಂಗಯ್ಯನೆಂದು ಈತನ ಹೆಂಡತಿ ಶ್ರೀಮತಿ ಭಾಗವತಾರಣಿ, ಈಕೆಯೂ ಕೂಡ ಹರಿಕಥಾ ವಿದುಷಿ ಎಂಬುದು ಸಂತೋಷದ ಸಂಗತಿಯಾಗಿದೆ.

ಕೋಗಿಲೆ ಅಪ್ಪಯ್ಯ :–

ತುಳಸಿರಾಮದಾಸರ ಶಿಷ್ಯ ಪರಂಪರೆ ಉಳ್ಳವರಾಗಿ, ಆ ನಿಟ್ಟಿನಲ್ಲಿ ಹಲವಾರು ರಾಮೋತ್ಸವಗಳನ್ನು, ತಿರುನಕ್ಷತ್ರ ಮತ್ತು ರಾಮಕೋಟಿಗಳನ್ನು ಮೊದಲಾದ ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ, ಸಂದರ್ಭದಲ್ಲಿ (೫೦೦೦೦ ರೂ)ಗೋಪುರ ಸೇವೆಗಳಿಗಾಗಿ ಹಣವನ್ನು ನೀಡಿ ಧಾರ್ಮಿಕವಾಗಿ ತೊಡಗಿಸಿಕೊಂಡಿದ್ದಾರೆ.

ಸುಬ್ಬಣ್ಣ ದಾಸರು :–

ಇವರು ಮುಳುಬಾಗಿಲನವರೇ ಆಗಿದ್ದಾರೆ. ರಂಗಸ್ವಾಮಿಯವರ ಬಂಧುವಾಗಿದ್ದಾರೆ. ಇವತ್ತಿನವರೆಗೂ ಹರಿದಾಸರಾಗಿಯೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಗಾಣಿಗ ಮತಸ್ಥರಾಗಿದ್ದು ಇವರ ತಂದೆ, ತಾಯಿ, ಅಕ್ಕಂದಿರೂ ಸಹ ತುಳಸಿರಾಮದಾಸರ ಶಿಷ್ಯರಾಗಿ ಇರುವುದು ಶಿಷ್ಯ ಪರಂಪರೆಯು ಮುಂದುವರೆಯುತ್ತಿರುವುದನ್ನು ಗುರುತಿಸಬಹುದಾಗಿದೆ.

ಸು. ರ. ರಾಮಚಂದ್ರಮಾಸ್ತರ :–

ಸು. ರ. ರಾಮಚಂದ್ರಮಾಸ್ತರು ಒರಪ್ಪಲ್ಲಿ ಅಪ್ಪಾಜಿದಾಸರ ಶಿಷ್ಯರಾಗಿ ಬರುತ್ತಾರೆ. ಇವರು ಕೋಲಾರದಲ್ಲಿ ಚುಂಚದಾಸರನ್ನು ಕುರಿತು ಹಾಡುಗಳನ್ನು ಹಾಡುತ್ತಾರೆ. ಇವರೂ ಸಹ ಹರಿದಾಸರರಾಗಿರುವ ಕಾರಣ ಇವರಲ್ಲಿ ಶ್ರೀ ತುಳಸಿರಾಮದಾಸರನ್ನು ಕುರಿತಾದ ಮಾಹಿತಿ ದೊರಕುತ್ತದೆ. ಒಮ್ಮೆ ಕೋಲಾರದಲ್ಲಿ ಶ್ರೀ

ತುಳಸಿರಾಮದಾಸರು ಹರಿಕಥೆಯನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಗಾರ್ಡ್ ಕೆಲಸಕ್ಕೆಂದು ಹೋಗುತ್ತಿದ್ದ ಚುಂಚದಾಸರು ಆಕರ್ಷಿತರಾಗಿ ತದೇಕ ಚಿತ್ತದಿಂದ ಇಡೀ ಹರಿಕಥೆಯನ್ನು ಕೇಳಿ, ಕಥೆ ಮುಗಿದ ಬಳಿಕ ಶ್ರೀ ತುಳಸಿರಾಮದಾಸರಿಗೆ ನಮಸ್ಕರಿಸಿ ನನ್ನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಿರೆಂದು ಬೇಡಿಕೊಂಡರಂತೆ. ಕೂಡಲೇ ದಾಸರು ಶಿಷ್ಯನನ್ನಾಗಿ ಸ್ವೀಕರಿಸಿದರು. ದಾಸರ ಶಿಷ್ಯರಾಗಿ ಹರಿಕಥೆ, ಭಜನೆ. ಧ್ಯಾನ ಮಾಡಿಕೊಂಡರೆಂದು ಹೇಳಿದ್ದಾರೆ.

ರಾಮಚಂದ್ರಯ್ಯನವರು :-

ಇವರು ಮೂಲತಃ ಕೋಲಾರದವರಾಗಿದ್ದಾರೆ. ಶ್ರೀ ತುಳಸಿರಾಮದಾಸರ ಶಿಷ್ಯರಾಗಿರುವಂತಹ ಚುಂಚದಾಸರ ಶಿಷ್ಯರ ಶಿಷ್ಯರಾಗಿದ್ದಾರೆಂದು ತಿಳಿದು ಬಂದಿದೆ. ಈ ರಾಮಚಂದ್ರಯ್ಯನವರು ಚುಂಚದಾಸರ ಬಗ್ಗೆ ಹೆಚ್ಚು ಮಾಹಿತಿಯನ್ನು ಹೊಂದಿದ್ದಾರೆ. ಹಾಗೂ ಅವರಿಗೆ ಸಂಬಂಧಿಸಿದ ಕೀರ್ತನೆಗಳನ್ನು ಸರಾಗವಾಗಿ ಹಾಡುತ್ತಾರೆ.

ಯುವರಾಣಿ ಭಾಗವತಾರಿಣಿ :-

ಶ್ರೀ ತುಳಸಿರಾಮದಾಸ ಶಿಷ್ಯರಾದ ರಂಗಸ್ವಾಮಿದಾಸರ ಶಿಷ್ಯರಾದ ತುಳಸೀಮುನಿ (ಅಪ್ಪಯ್ಯ) ಎಂಬ ದಾಸರ ಸೊಸೆಯಾಗಿ ಶಿಷ್ಯೆಯಾಗಿದ್ದಾರೆ. ಶ್ರೀ ತುಳಸಿರಾಮದಾಸರ ಮತ್ತು ರಂಗಸ್ವಾಮಿದಾಸರ ಹಾಡುಗಳನ್ನು ಹರಿಕಥೆಗಳಲ್ಲಿ ವಿಶೇಷವಾಗಿ ಬಳಸುತ್ತಾರೆ. ಶ್ರೀ ತುಳಸಿರಾಮದಾಸರನ್ನು ಕುರಿತು ಶತಮಾನೋತ್ಸವದಲ್ಲಿ ನಡೆದ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹರಿಕಥೆಯನ್ನು ಮಾಡಿದ್ದಾರೆ.

ಮಾಹಿತಿ ಲಭ್ಯವಿದ್ದ ಮೇರೆಗೆ ಪ್ರಶಿಷ್ಯ ಪರಂಪರೆಯಲ್ಲಿ ಮತ್ತು ಶಿಷ್ಯ ಪರಂಪರೆಯಲ್ಲಿ ಬಂದ ಶಿಷ್ಯರಗಳನ್ನು ಮತ್ತು ಅವರ ಬಗ್ಗೆ ಕೆಲವೇ ವಿವರಗಳನ್ನು ನೀಡಿದೆ. ಆದರೆ ಇನ್ನು ಶಿಷ್ಯರುಗಳ ಮಾಹಿತಿ ದೊರಕಬೇಕಾಗಿರುವುದು. ಸಂಪದನಾ ಕೃತಿಯಲ್ಲಿ ಗುರುತಿಸಿರುವಂತೆ, ಹರಿಕಥಾ ಕೃತಿಯಲ್ಲಿ ದೊರೆತಿರುವ ಹೆಸರುಗಳು ಮತ್ತು ಅವರು ಸ್ತುತಿಸಿರುವ ಸಾಲುಗಳ ಮೇರೆಗೆ ಶ್ರೀ ತುಳಸಿರಾಮದಾಸರನ್ನು ಸ್ತುತಿಸಿರುವ ಕಾರಣವಾಗಿ ಉಲ್ಲೇಖ 'ಹರಿಕಥಾ' ಗ್ರಂಥದಲ್ಲಿ ಕೆಲವು ಶಿಷ್ಯರ, ಸ್ತುತಿಕಾರರ ಹೆಸರುಗಳನ್ನು ನೀಡುವುದು ಇಲ್ಲಿ ಸೂಕ್ತ.

ಪರಾವಸ್ತು ಜೀಯರ್ ಸೂರಿದಾಸ್, ದರಿಶ ಕುಪ್ಪದ ಕೃಷ್ಣದಾಸ, ಯಲದೂರು ಕೊಡದವಾಡಿ ರಂಗದಾಸ, ಅಣ್ಣಾಜಿದಾಸ, ಅಗರದ ಸಂಜೀವ ನಾರಾಯಣದಾಸ, ಮುಳುಬಾಗಿಲು ವಿಠಲ ಮುನಿಸ್ವಾಮಿಚಾರ್ಯ, ಆಲಂಗೂರು ಸುಬ್ಬಾಚಾರ್ಯ, ಚನ್ನಪಟ್ಟಣದ ವೆಂಕಟಗಿರಿದಾಸ, ಪುರಿಗಂ ತಿಮ್ಮರಾಯಶೆಟ್ಟಿ, ಯಲದೂರು ಶಾಮದಾಸ, ಮುಳುಬಾಗಿಲು ಪಾಂಚಾನನಂ(ಕುದುರೆ) ಗುರ್ರಾಲರಾಯಪ್ಪಚಾರ್ಯ, ಮದರಾಸು ಕವಿವಿವರ ಪಂಡಿತ ಸಿಂಗಾರಾಚಾರ್ಯ, ಕೋಲಾರದ ಚೆಂಚುದಾಸ, ಚವುಡನ ಪಲ್ಲೆ ಶ್ರೀನಿವಾಸದಾಸ,

ಬಾರಾಮಾರ್ಗ ಶ್ರೀನಿವಾಸದಾಸ ಈ ಹರಿದಾಸರ ಕೀರ್ತನೆಗಳು 'ಹರಿಕಥಾ ಕೃತಿಯಲ್ಲಿ' ಲಭ್ಯವಿದ್ದು, ಇವು ದಾಸರನ್ನು ಸ್ತುತಿಸಿರುವ ಪ್ರಮುಖರಾದ್ದಾರೆಂಬ ಉಲ್ಲೇಖವು ಸಿಗುತ್ತದೆ.

ಹೆಸರಿನ ಉಲ್ಲೇಖವಿರುವ ಸ್ತುತಿಕಾರರುಗಳನ್ನು ಕೂಡ 'ಹರಿಕಥಾ ಕೃತಿ' ದಾಖಲೆ ನೀಡುತ್ತದೆ. ಅವರುಗಳ ಪಟ್ಟಿ ಈ ರೀತಿ ಇದೆ. ಮೈಸೂರು ಪರಕಾಲ ಮಠದ ಶ್ರೀ ಪರಕಾಲ ಬ್ರಹ್ಮತಂತ್ರ ಕೃಷ್ಣ ದೇಶಿಕರಿಂದ ಶ್ರೀಮುಖ(ಮಂಗಳಶಾಸನ), ಅಹೋಬಲ ಮಠದ ದೀಕ್ಷಿತರು, ಕಾಹಾಳ ಭೈರವ ಕವೀಶ್ವರ, ನರಸಿಂಹದಾಸ, ಜಗನ್ನಾಥ ಸಾಧು(ಬೆಂಗಳೂರು), ಮುಳುಬಾಗಿಲು ರಾಮಯ್ಯ, ವಡ್ಡಪಲ್ಲಿ ಶ್ರೀನಿವಾಸದಾಸ ಉಪ್ಪರಂ ಶ್ರೀನಿವಾಸದಾಸ.

ಇವರಲ್ಲಿ ಅನೇಕ ಹರಿಕಾರರು ವೈದಿಕೇತರರಾಗಿಯೂ ಕಂಡು ಬರುತ್ತಾರೆ. ಹಾಗೆಯೇ ಅನೇಕರು ಶ್ರೀ ವೈಷ್ಣವ ಹರಿದಾಸರ ಪಟ್ಟಿಗೆ ಸೇರುತ್ತಾರೆ. ಶ್ರೀ ತುಳಸಿರಾಮದಾಸರನ್ನು ಗುರುಸ್ಥಾನ ಮತ್ತು ದೈವಸ್ಥಾನದಲ್ಲಿರಿಸಿ ಗುರುವಿನಲ್ಲಿ ದೈವವನ್ನು ಕಾಣುವ ಹಂಬಲ, ಗುರುವಿನ ಉಪದೇಶ ಮೇರೆಗೆ ಸಿದ್ದಿ ಪಡೆಯುವ ಮಾರ್ಗವನ್ನು, ಹರಿದಾಸರು ನಂಬಿ ನಡೆಯುವುದು ಮುಖ್ಯವೆನಿಸುತ್ತದೆ.

ಶ್ರೀ ಗುರು ತುಳಸಿರಾಮದಾಸ ಗುರು ಪರಂಪರೆಯಷ್ಟೇ ಮುಖ್ಯವಾಗಿ ಅವರ ಶಿಷ್ಯ ಪರಂಪರೆಯು ಮತ್ತು ಪ್ರಶಿಷ್ಯ ಪರಂಪರೆಯೂ ಬಹು ವಿಸ್ತಾರವಾಗಿ ಬೆಳೆದು ೨೧ನೇಶತಮಾನದಲ್ಲೂ ತನ್ನದೇ ಆದ ಛಾಪನ್ನು ಮೂಡಿಸಿದೆ. ಎಂಬುದು ಗಮನಾರ್ಹವಾದುದು.

ಗುರುವೇ ಸರ್ವಸ್ವ, ಗುರುವೇ ದೈವ, ಗುರುವಿನ ಉಪದೇಶವಿಲ್ಲದೇ ಅನ್ಯ ಮಾರ್ಗವಿಲ್ಲ ಎಂಬ ವೈಷ್ಣವ ತತ್ವಕ್ಕೆ ಶಿಷ್ಯರೂ ಕೂಡ ಹೊಂದಿಕೊಂಡು ಬಂದಿರುವುದು, ಮುಂದುವರಿಯುತ್ತಿರುವುದು ವಿಶೇಷವಾಗಿದೆ.

ಅಡಿ ಟಿಪ್ಪಣಿ:

೧. ಕೊಲ್ಹಾರ ಕುಲಕರ್ಣಿ : ಮನುಕುಲಕ್ಕೆ ಹರಿದಾಸರ ಕೊಡುಗೆ ಲೇಖನ ಕರ್ಮವೀರ ದೀಪಾವಳಿ ವಿಶೇಷಾಂಕ ಸಂಚಿಕೆ೨೦೦೧ ಪು ೩೨

೨. ನಾ. ಗೀತಾಚಾರ್ಯರು (ಸಂ) : ವೆಂಕಟದಾಸರು ಮತ್ತು ಇವರ ಇತರ ಅದ್ವೈತದಾಸರ ಕೀರ್ತನೆ ಪ್ರಸ್ತಾವನೆ ೨೦೦೭ ಪುxxiii

೩. ನಾ. ಗೀತಾಚಾರ್ಯರು (ಸಂ) : ಶ್ರೀ ಗುರು ಗುರು ತುಳಸಿರಾಮದಾಸರು ಪುF

೪. ಅದೇ ; ಪು ೭೨

೫. ಅದೇ ; ಪು ೧೧

೬. ಅದೇ ; ಪು ೧೧

೭. ಅದೇ ; ಪು ೧೦

೮. ಅದೇ ; ಪು ೧೪

೯. ಅದೇ ; ಪು ೧೫

೧೦. ನಿರೂಪಣೆ : ವಂಶಿ ಎಂ ಚೌಡಯ್ಯ ತುಳಸಿರಾಮದಾಸರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ಲಕ್ಷ್ಮೀ ಶತಕ : ಪು ೩

೧೧. ನಾ. ಗೀತಾಚಾರ್ಯರು (ಸಂ) : ಶ್ರೀ ಗುರು ಗುರು ತುಳಸಿರಾಮದಾಸರು ಅದೇ : ಪು ೩

೧೨. ಜಾನಪದ ಸ್ವರೂಪ : ಸಂಧ್ಯಾರೆಡ್ಡಿ ಮತ್ತು ಡಿ, ಲಿಂಗಯ್ಯ ಪು

(ಇ) ಪವಾಡಗಳು :-

ಧಾರ್ಮಿಕ ಪುರುಷರ ಬಗ್ಗೆ ಮಾತ್ರ ಪವಾಡಗಳು ಕಂಡು ಬರುತ್ತವೆ. ಇಂದಿಗೂ ಹಲವಾರು ಕಡೆ ಧಾರ್ಮಿಕ ವ್ಯಕ್ತಿಗಳ ಬಗ್ಗೆ ಇರುವ ಅಥವಾ ಇದ್ದ ನಂಬಿಕೆಗಳು ಕ್ರಮೇಣವಾಗಿ ಪವಾಡಗಳ ರೂಪ ಧರಿಸಿವೆ.

ಒಂದು ಕಾಲಕ್ಕೆ ತುಳಸಿರಾಮದಾಸರು ಧಾರ್ಮಿಕ ಪುರುಷನಾಗಿದ್ದಾರೆ ವ್ರತ, ಆಚರಣೆ ನಿಷ್ಠೆಯುಳ್ಳವರಾಗಿ ಆಗಿಹೋದ ವ್ಯಕ್ತಿಗಳ ಬಗ್ಗೆ ನಂಬಿಕೆಗಳನ್ನು ಉಳಿಸಿ ಅದನ್ನು ಬೆಳೆಸಿ ಜನರ ಬಾಯಲ್ಲಿ ಪವಾಡಗಳ ರೂಪ ತಳೆದು ನಂತರ ದಂತಕಥೆಗಳಾಗಿ ನಿಲ್ಲುತ್ತವೆ. ಜನಸಾಮಾನ್ಯರ ಮನಸ್ಸಿನಲ್ಲಿ ಉಳಿಯುತ್ತವೆ. ಹೀಗೆ ತುಳಸಿರಾಮದಾಸರು ೧೯ನೇ ಶತಮಾನದಲ್ಲಿ ಇದ್ದು ಪವಾಡ ಮಹಿಮೆಗಳಿಂದ, ಮಹಾಪುರುಷರಾಗಿ ದೈವಸಂಭೂತರಾಗಿ ಇಂದಿಗೂ ಪೂಜಿಸಲ್ಪಡುತ್ತಿರುವುದು ದಕ್ಷಿಣ ಭಾಗದಲ್ಲಿ ಒಂದು ಪವಾಡವೇ ಸರಿ.

ಧಾರ್ಮಿಕ ಪುರುಷರು ಯಾವಾಗಲೂ ಅಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿರುತ್ತಾರೆಂದು ಪವಾಡದ ಹಿನ್ನಲೆಯಲ್ಲಿ ಗುರುತಿಸುತ್ತೇವೆ. ಶ್ರೀ ತುಳಸಿರಾಮದಾಸರೂ ಕೂಡ ಅಂತಹ ಅಸಾಮಾನ್ಯರೆನಿಸಿದ್ದರು. ಸಮಾಜದವನ್ನು ಉದ್ಧರಿಸಲೆಂದು ಬಂದಂತಹರೆಂಬ ದೃಷ್ಟಿಕೋನ ಧಾರ್ಮಿಕ ಮಹಾಪುರುಷರ ಬಗ್ಗೆ ಜನಸಾಮನ್ಯರಿಂದಲೇ ಬೆಳೆಯುತ್ತದೆ. ಹಾಗೇ ಉಳಿಯುತ್ತದೆ. ಇಂತಹ ದೃಷ್ಟಿಯನ್ನು ಜನಮಾನಸದಲ್ಲಿ ಬೆಳೆಸಿ ಸಮಾಜದಲ್ಲಿನ ಹಿತವನ್ನು ಸ್ವಾಸ್ಥ್ಯವನ್ನು ಕಾಪಾಡಿ, ಅಸಾಮಾನ್ಯರೆನಿಸಿ ಉಳಿದವರಲ್ಲಿ ನಮ್ಮ ತುಳಸಿರಾಮದಾಸರೂ ಕೂಡ ಒಬ್ಬರಾಗಿದ್ದಾರೆ.

ಈ ದಾಸರು ಅಂತಹ ವಿಶಿಷ್ಟಾದ್ವೈತದ ಸಂದರ್ಭದಲ್ಲಿ ಪವಾಡ ಪುರುಷನಂತೆ, ದೈವಾಂಶ ಸಂಭೂತರಂತೆ, ರಾಮನ ಅವತಾರದಂತೆ ಕಂಡುಬಂದು ಹಲವಾರು ಸ್ಥಳಗಳಲ್ಲಿಯೂ ತನ್ನ ಸುತ್ತಲಿನ ಶಿಷ್ಯ ಮತ್ತು ಪ್ರಶಿಷ್ಯ ಪರಂಪರೆಯಲ್ಲಿಯೂ ಉಳಿದು ಇಂದು ಪ್ರಾಧಾನ್ಯ ಪಡೆದುಕೊಳ್ಳುತ್ತಿರುವುದು ಒಂದು ಪವಾಡವೆನ್ನಬಹುದಾಗಿದೆ.

ಜನರಲ್ಲಿ ಧರ್ಮ ಜಾಗೃತಿ ಉಂಟು ಮಾಡುವ ಸಂದರ್ಭದಲ್ಲಿ ರಾಮೋತ್ಸವ ಕೃಷ್ಣೋತ್ಸವಗಳನ್ನು ನಡೆಸುವ ಸಂದರ್ಭಗಳಲ್ಲೂ ಹಲವಾರು ನಡೆದ ಘಟನೆಗಳು ಪವಾಡವೆನಿಸಿವೆ. ದಂತಕಥೆಗಳಲ್ಲಿ ಬರುವ ಎಲ್ಲಾ ಕಥೆಗಳು ಕೂಡ ಪವಾಡದ ರೂಪಗಳಾಗಿವೆ. ಆದರೆ ಇಲ್ಲಿ ಅಷ್ಟೊಂದು ವಿವರವಾಗಿ ಹೇಳದೆ ಸರಳವಾಗಿ ಕೆಲವೇ ನುಡಿಗಳಲ್ಲಿ ಹೇಳ ಬಯಸುತ್ತೇನೆ.

ಒಮ್ಮೆ ದರ್ಶಿಕ ಕುಪ್ಪೆಯಲ್ಲಿ ಶ್ರೀ ತುಳಸಿರಾಮದಾಸರು ಸ್ನಾನಕ್ಕೆ ಹೋಗುತ್ತಿರುವ ಸಂದರ್ಭದಲ್ಲಿ ಮದದಿಂದ 'ಗೂಳಿ'ಯೊಂದು ದಾಸರ ಎದುರಿಗೆ ಬಂದಿತಂತೆ, ಹಾಗೇ ಬಂದ ಗೂಳಿಗೆ ಇವರು ತಮ್ಮ ಮಹಿಮಾಶಕ್ತಿಯಿಂದ 'ಚಕ್ರಾಂಕನ' ಮಾಡಿ ಸದ್ಗತಿ ಕಾಣಿಸಿದರಂತೆ ಎಂಬ ಪವಾಡದ ಕುರಿತು ಜನರು ನೆನಪಿಸಿಕೊಳ್ಳುತ್ತಾರೆ. ಇವರ ಅಂತಹ ಶಕ್ತಿಯಿಂದ ಶಮನ ಮಾಡಿರುವ ಸಂದರ್ಭಗಳು ಕಂಡುಬರುತ್ತವೆ.

ಇವರನ್ನು ಕರೆಸಿ, ಹರಿಕಥೆ ಮಾಡಿರುವ ಸಂದರ್ಭಗಳಲ್ಲಿ ಮುಖ್ಯವಾಗಿ ಮೈಸೂರಿನ ಮಹಾರಾಜರ ಅರಮನೆಯಲ್ಲಿ ನಡೆದ ಘಟನೆಯು ಗಮನಾರ್ಹವಾಗಿದೆ. ಮುಕ್ತಾಯದ ಸಂದರ್ಭದಲ್ಲಿ ಗರುಡ ಪಕ್ಷಿಯು ಗಾಜು ಒಡೆದು ಬಂದು ದರುಶನ ನೀಡುವುದು ಆನಂತರ ಕಥೆ ಮುಕ್ತಾಯವಾಗುವುದು ಒಂದು ಜನಜನಿತವಾದ ಪವಾಡವಾಗಿದೆ.

ಮೈಸೂರಿನ ಮಹಾರಾಜರು ಇವರಿಂದ ಹರಿಕಥೆ ಮಾಡಿಸಿ ಮೆಚ್ಚಿ, ತಲೆದೂಗಿ ಇವರಿಗೆ ಬಿರುದುಗಳನ್ನಿತ್ತು ಗೌರವಿಸಿ ಚಿನ್ನದ ಕಡಗಗಳನ್ನು ತೊಡಿಸಿದಾಗ, ಶ್ರೀ ತುಳಸಿರಾಮದಾಸರೇ ತಮಗೆ ತೊಡಿಸಿದ ಚಿನ್ನದಿಂದ ದೇವರ ಚಿತ್ರಪಟದ ಮೇಲೆ ಚಿನ್ನದ ಗೆರಗಳನ್ನು ಎಳೆದಿದ್ದು, ಮೈಸೂರು ಮಹಾರಾಜರಿಗೆ ಅದ್ಭುತ ಪವಾಡ ಪುರುಷರೆನಿಸಿ ಪಾತ್ರರಾಗಿದ್ದರು. ಇನ್ನೂ ಗಾಳಿಯಲ್ಲಿ ಧ್ಯಾನ ಮಾಡುತ್ತಲೇ ತೇಲುವ ಪವಾಡವನ್ನು ಮಾಡುತ್ತಿದ್ದರು.

ತಿರುಪತಿಯಲ್ಲಿ ಶ್ರೀನಿವಾಸ ಕಲ್ಯಾಣದ ಹರಿಕಥಾ ಸಂದರ್ಭದಲ್ಲಿ ಒಮ್ಮೆ ಮಂಗಳಾರತಿ ಮಾಡುತ್ತಿರುವಾಗ ಅಮ್ಮನವರ ವಸ್ತ್ರವು ಬೆಂಕಿಯಿಂದ ಹತ್ತಿಕೊಂಡಾಗ ದಾಸರು ತಮ್ಮ ಕೈಗಳಿಂದಲೇ ಬೆಂಕಿಯನ್ನು ಆರಿಸಿದ್ದು ಜನರ ಬಾಯಲ್ಲಿ ಇಂದಿಗೂ, ಸುಳಿದಾಡುವ ಪವಾಡವೆನಿಸಿದೆ.

ಹೀಗೆ ತುಳಸಿರಾಮದಾಸರು ಪವಾಡ ಪುರುಷರಾಗಿ ಮಹಿಮಾನ್ವಿತರಾಗಿ ಜನರ ಮನಸ್ಸಿನಲ್ಲಿ ಇಂದಿಗೂ ಉಳಿದಿರುವುದು ದಾಸರ ಸುತ್ತ ಇನ್ನೂ ಅನೇಕ ಹೆಣೆದುಕೊಂಡಿರುವ ಸಂಗತಿಗಳು ಶ್ರೀ ತುಳಸಿರಾಮದಾಸರು ಜನಪ್ರಿಯರಾಗಿದ್ದರೆಂಬುದಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ. ಇಂತಹ ಪವಾಡಗಳು ಮುಂದೆ ದಂತಕಥೆಗಳಾಗಿ ಉಳಿದಿವೆ.

(ಈ) ನಂಬಿಕೆಗಳು :-

ನಂಬಿಕೆಗಳು ಒಂದು ಅನುಭವದ ಆಧಾರದ ಮೇಲೆಯೇ ಹುಟ್ಟಿಕೊಂಡಿರುತ್ತವೆ. "ನಂಬಿಕೆಗಳು ಹುಟ್ಟುತ್ತಲೇ ಮೂಡಿ ಬಂದ ಜ್ಞಾನವೇ ಹೇಳಿಕೆಯ ರೂಪ ಪಡೆದುಕೊಂಡು, ಪರಂಪರೆಯಲ್ಲಿ ನಂಬಿಕೆಯಾಗಿ ರೂಪುಗೊಂಡಿರುತ್ತವೆ. ಸಾಮಾನ್ಯವಾಗಿ ಮನುಷ್ಯ ಯಾವ ವಿಷಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾನೋ ಅಂತಹ ವಿಷಯಗಳ ಬಗ್ಗೆಯೇ ಆತಂಕವೂ ಹೆಚ್ಚಾಗಿರುತ್ತದೆ. ಆದ್ದರಿಂದ ಅಂತಹ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ನಂಬಿಕೆಗಳು ರೂಪುಗೊಂಡಿರುತ್ತವೆ."[೧೨] ಎಂಬ ಹೇಳಿಕೆಯನ್ನು ಗಮನಿಸಿದರೆ ಹೇಗೆ ಒಂದು ವಿಷಯದ ಬಗ್ಗೆ ಅರಿವು ಜ್ಞಾನ ಮೂಡಿಸಿಕೊಳ್ಳುತ್ತವೋ ಹಾಗೇ ನಂಬಿಕೆ ರೂಪುಗೊಳ್ಳುತ್ತವೆ.

ಸಾಮಾನ್ಯವಾಗಿ ಜನ ಸಾಮಾನ್ಯರಲ್ಲಿ ಒಮ್ಮೆ ಮೂಡಿದ್ದ ನಂಬಿಕೆ ಬದಲಾಗುವುದಿಲ್ಲ. ಇರುವಂತಹ ನಂಬಿಕೆ ಮುಂದೆ ಪವಾಡಗಳಾಗಿ ರೂಪುಗೊಳ್ಳುತ್ತವೆ. ಹಾಗೆಯೇ ಶ್ರೀ ತುಳಸಿರಾಮದಾಸರನ್ನು ದೈವಾಂಶ ಸಂಭೂತವೆಂದು ದಕ್ಷಿಣ ಕರ್ನಾಟಕದ ಭಾಗದಲ್ಲಿ ಜನರು ನಂಬಿದ್ದಾರೆ.

ಅವರು ಸಂಚರಿಸಿದ್ದ ಕಡೆಯೆಲ್ಲೆಲ್ಲಾ ಧಾರ್ಮಿಕವಾಗಿ ತೊಡಗಿಸಿಕೊಂಡು ಜನರ ಮನಸ್ಸಿನಲ್ಲಿ ಬೇರೂರಿದ್ದಾರೆ. ದಾಸರು ಒಂದೆಡೆ ನಿಂತವಲ್ಲ, ಅವರು ಕಷ್ಟದಲ್ಲಿದ್ದ ಜನರಿಗೆ ಸ್ಪಂದಿಸಿದ್ದಾರೆ, ದೈವಾಂಶ ಸಂಭೂತರಾಗಿ ಅವರ ಪಾಲಿಗೆ ಕಂಡುಬರುತ್ತಾರೆ. ಬರಗಾಲ, ಕ್ಷಾಮ ಎದುರಾದಾಗ ಸಮಾಜದಲ್ಲಿ ಅಸ್ಥಿರತೆ ಅರಾಜಕತೆ, ಯುದ್ಧದ ಭೀತಿಗಳಿಂದ ತತ್ತರಿಸಿದ ಜನರಿಗೆ ಆತ್ಮಸ್ಥೈರ್ಯ ಮೂಡಿಸಿ, ಜನಾನುರಾಗಿಯಾದ ಇವರನ್ನು ಎಲ್ಲರೂ ಮಾನವತಾವಾದಿಯೆಂದು ನಂಬಿ ಗೌರವಿಸಿದ್ದಾರೆ.

ನಂಬಿಕೆಯು ಒಬ್ಬ ವ್ಯಕ್ತಿಯು ನಡೆದುಕೊಳ್ಳುವ ಮತ್ತು ಮಾಡುವ ಕೆಲಸವನ್ನು ಅವಲಂಬಿಸಿರುತ್ತದೆ. ಶ್ರೀ ತುಳಸಿರಾಮದಾಸರನ್ನು ಅವರ ಶಿಷ್ಯವರ್ಗದವರು, ಸಾಮಾನ್ಯ ಜನರು ಮಠಮಾನ್ಯದವರೂ ಮಹಾರಾಜರೂ ಕೂಡ 'ಶ್ರೀರಾಮನ ಅವತಾರ' ಎಂದು ನಂಬಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ೧೯ನೇ ಶತಮಾನದ ಎರಡನೇಯ ಅವತಾರ ರಾಮನೆಂದು ಗುರುತಿಸಿದ್ದರಂತೆ.

ಹರಿದಾಸ ಸಾಹಿತ್ಯ ಚರಿತ್ರೆಯಲ್ಲಿಯೇ ಶ್ರೀ ತುಳಸಿರಾಮದಾಸರಷ್ಟು ಸಾಮಾನ್ಯ ಜನರಿಗೂ ಸ್ಪಂದಿಸಿದ್ದು ಗಮನಾರ್ಹವಾಗಿದೆ. ಅಲ್ಲದೆ ದಾಸರು ನಡೆಸುತ್ತಿದ್ದ ರಾಮೋತ್ಸವ, ಕೃಷ್ಣೋತ್ಸವಗಳಿಗೆ ಶ್ರೀ ತುಳಸಿರಾಮನೇ ನಮ್ಮ ಉದ್ಧಾರಕ್ಕಾಗಿ ಅವತರಿಸಿದ್ದಾನೆಂಬ ಭಾವನೆಯಿಂದ ದವಸ, ಧಾನ್ಯಗಳನ್ನು ನೀಡಿ ಹರಕೆಗಳನ್ನು ಸಲ್ಲಿಸುತ್ತಿದ್ದರು. ಅಲ್ಲದೆ ಹಿಂದೂ ಧರ್ಮವನ್ನು ಉದ್ಧರಿಸಲು ಬಂದ ಕಾರಣಿಕ ಪುರುಷನೆಂದೇ ಭಾವಿಸಿದ್ದರು.

ಮತ್ತು ಇವರ ಜನ್ಮವು ಪೂರ್ವಋಷಿಗಳ ಅವತಾರವಾಗಿ ಜನ್ಮವೆತ್ತಿದ ಇವರನ್ನು ಸಂಪ್ರದಾಯ ವಿಶ್ವಕ್ಸೇನರ ಮತ್ತು ಶಠಗೋಪರ ಅಂಶವೆಂದೂ ನಂಬಿದೆ. ದಾಸ ವಂಶಾಭಿವೃದ್ಧಿಗಾಗಿ ಬಂದಿದ್ದ ಸಿದ್ಧ ಸಂಕಲ್ಪರು ಎಂದು 'ಹರಿಕಥಾ' ಗ್ರಂಥ ದಾಖಲಿಸಿದೆ.

ಮತ್ತು ಅವರ ಶಿಷ್ಯರುಗಳು ಹಲವಾರು ಹೆಸರುಗಳಿಂದ ಸ್ತುತಿಸಿರುವುದಲ್ಲಿ, ಶಿಷ್ಯರಲ್ಲಿ ಗುರುವಿನ ಬಗ್ಗೆ ಮೂಡಿದ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಚನ್ನಪಟ್ಟಣದ ಅಹೋಬಲದಾಸರು ಶ್ರೀತುಳಸಿರಾಮದಾಸರನ್ನು ಕುರಿತು,

"ನಮಃ ಓನಮಃ। ಮಮದೇಶಿಕ ತಿರುಪಲೆಪಡಿಗಳೆ ಶರಣಃ

ಅಹರಂಪರವನ್ನು ತೋರೆಲೋ
ಶ್ರೀ ಪರಮಾತ್ಮರನೆ (ಧಾಪದ ನಿಸರಿ)
ಕೋಪವ್ಯಾತಕೆ ಸಲಹೊ ಮುನಿಕುಲ
ದೀಪ ನೀಹುದಯಾ ಅಡಿಯೇನ್ ನಮಃ ೧

ಮಾನವನ ಗುಣ ಮಕುಟಮಹುದ್ಯೆ
ಓನ್ನಮೊ ನಾರಾಯಣನೆ
ಸಾನಿಧಾಪ ಮದಾದವಿ ಸರಿ
ಶ್ರೀನಿವಾಸ ದಯಾಳು ಅಡಿಯೇನ್ ನಮಃ ೨

ವಾಸವಾರ್ಚಿತ ಶ್ರೀ ಗುರು ಹರಿ
ದಾಸ ತುಲಸಿರಾಮ ನನ್ನಯ
ದೋಷಗಳೆದೀಗೆನ್ನ ಆನಿಜ
ಶೇಷಭೂತನ ಮಾಡೊ ಅಡಿಯೇನ್ ನಮಃ ೩

ಭಕ್ತರ ಪಾಲಿಗೆ ಎಲ್ಲವೂ ಆಗಿ, ಮುನಿಕುಲದ ದೀಪವೂ ಆಗಿ ಶ್ರೀನಿವಾಸನ ಅವತಾರವಾಗಿ ದಯಾಳು ಆಗಿ ಶ್ರೀ ಗುರು ಹರಿದಾಸ ತುಳಸಿರಾಮದಾಸನೇ ಆಗಿರುವುದು ಶಿಷ್ಯ ಪರಂಪರೆಯು ಯಾವ ರೀತಿ ನಂಬಿತ್ತು

ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪವಾಡಗಳು ದಂತಕಥೆಗಳಾದಂತೆ ಮೊದಲು ನಂಬಿಕೆಗಳೇ ಪರಿವರ್ತನೆಗೊಂಡು ರೂಪ ಪಡೆದಿರುವುದು ಎಂಬುದು ಪ್ರಚಲಿತ ನುಡಿಗಳಾಗಿವೆ.

ಬೆಂಗಳೂರಿನ ಪ್ರಸಿದ್ಧ ವಿದ್ವಾಂಸರಾದ ತೊಪ್ಪಲ್ ವೆಂಕಟಾಚಾರ್ಯರುಗಳನ್ನು ತುಳಸಿರಾಮದಾಸರನ್ನು ಅನೇಕ ಬಗೆಯಲ್ಲಿ ಸ್ತುತಿಸಿರುವುದು ಗಮನಾರ್ಹ.

ಶ್ರೀ ಶಾಯಃ ವಾಸಿನ್ಯೆ ಚಮೂಭರ್ತೇ ಶಠಾರಿಣೇ
ನಾತಾಯ ಪದ್ಮ ನೇತ್ರಯ ಶ್ರೀ ರಾಮಾಯಸ್ತು ಮಂಗಳಂ ೨

ಎಂಬ ಸ್ತುತಿಯಲ್ಲಿಯೂ ಕಾಣಬಹುದಾಗಿದೆ. ಹೀಗೆ ಸಾಗುವ ಸ್ತುತಿಯ ಪ್ರಾರಂಭದಿಂದಲು ತುಳಸಿರಾಮದಾಸರನ್ನು ಕೊನೆಯ ಭಾಗದವರೆಗೂ ಹಲವಾರು ಹೆಸರಿನಿಂದ ದಾಸರನ್ನು ಕುರಿತು ಶ್ರೀರಾಮನೇ ಶ್ರೀ ತುಳಸಿರಾಮದಾಸ ಎಂಬ ನಂಬಿಕೆಯು ಮೂಡುತ್ತದೆ.

ಇನ್ನೊಂದು ಸ್ತುತಿಯು ಇದೇ ಅಥವು ಸ್ಪುರಿಸುತ್ತದೆ.

"ಆ ಮಹಾರಘುಪತಿಯೇ ಭಕ್ತರ
ಕಾಮಿತಾರ್ಥವ ಕೊಡಲು ತುಲಸೀ
ಧಾಮ ಸಹಿತತವರಿಸಿ ನಿಜ ಚರಿತಯನು ಪಸರಿಸುತ
ರಾಮದಿಂದಾರಾಮ ತುಲಸೀ
ರಾಮನೆನಿಸುವ ಜಗದೊಳಾತನ
ಪ್ರೇಮ ದಾಸರ ಪೆಸರು ತುಲಸೀರಾಮ ದಾಸಾರ್ಯ ೪

ಮತ್ತು

"ರಾಮ ಬೆರಿನ್ನಲ್ಲ ತುಲಸಿ
ರಾಮನೇ ಶ್ರೀರಾಮನೆಂದಭಿ

ರಾಮ ಮಾನಸರಾಗಿ ಬಲಖೀರಾಮ ಸೇವೆಯೊಳು
ಪ್ರೇಮ ಪಿಡಿದವರೆಲ್ಲರಾತ್ಮಾ
ರಾಮರಾಮದ ತಿಳಿದು ಯೀ ಶಿವ
ರಾಮ ಬಂದನು ಪೊರೆಯೋ ತುಲಸಿರಾಮದಾಸಾರ್ಯ." ೨೦

ಈ ಎರಡು ಕೀರ್ತನೆಗಳಲ್ಲದೇ ಅನೇಕ ಕೀರ್ತನೆಗಳಲ್ಲಿ ಶ್ರೀರಾಮನಾಗಿ ಅವತರಿಸಿದ ನಂಬಿಕೆ ಶಿಷ್ಯರಿಗಿದೆ, ಅಲ್ಲದೆ ಜನ ಸಾಮಾನ್ಯರಿಗೂ ಇತ್ತು ಎಂಬುದನ್ನು ಇಂತಹ ಕೀರ್ತನೆಗಳ ಸಾಲುಗಳಿಂದ ಗೋಚರಿಸುತ್ತವೆ.

ಅನೇಕ ವಿಧವಿಧವಾದ ಹೆಸರಿನಿಂದ ಕರೆದು ಪತ್ರತ್ಯಾಗ ನಿಶ್ಚಲತ್ವ ಜಿತೇಂದ್ರಿಯತ್ವವನ್ನು ಸಾಧಿಸಿ ಮಾಯವನ್ನು ಜಯಿಸಿದ ಪುಣ್ಯ ಶರೀರ ಧರಿಸಿ ಬಂದ ತತ್ವಜ್ಞಾನಿಯರನಿಸಿದ್ದರು. ಸ್ರೀತುಳಸಿರಾಮದಾಸರು ಮುಂದೆ ಶತಮಾನಗಳ ನಂತರ ಬೆಳಕಿಗೆ ಮತ್ತೆ ಪ್ರಚಾರ ಪಡೆಯುತ್ತಾರೆಂಬ ನಂಬಿಕೆಯನ್ನು ಅವರ ಶಿಷ್ಯರಾದ ಚೌಡಯ್ಯನವರು ನಂಬಿಕೆಯ ನುಡಿಗಳಾಗಿವೆ.

ಅಧ್ಯಾಯ : ನಾಲ್ಕು

ಕೀರ್ತನೆಗಳಲ್ಲಿ ವ್ಯಕ್ತವಾಗಿರುವ ಧಾರ್ಮಿಕ ಶ್ರದ್ಧೆ ಮತ್ತು ಸಾಮಾಜಿಕ ಕಳಕಳಿ

ಹರಿದಾಸ ಸಾಹಿತ್ಯವು ಎಲ್ಲಾ ವರ್ಗಗಳ ಸಾಹಿತ್ಯದಲ್ಲೂ ಸ್ವೀಕರಾರ್ಹವಾದದ್ದು. ಮತ್ತು ಯಾವುದೇ ವರ್ಗದ ಭಜನೆಗಳಲ್ಲಿ, ಮಠಮಾನ್ಯಗಳಲ್ಲಿ, ಜನ ಸಮುದಾಯಗಳಲ್ಲಿ, ದಾಸರ ಪದಗಳು ಪ್ರವೇಶವನ್ನು ಪಡೆದದ್ದು ಕನ್ನಡದ ಯಾವುದೇ ಸಾಹಿತ್ಯ ಪ್ರಕಾರಕ್ಕಿಂತಲೂ, ದಾಸ ಸಾಹಿತ್ಯವು ಜನಮನವನ್ನು ಮುಟ್ಟುವುದರಲ್ಲಿ ಯಶಸ್ಸು ಕಂಡಿದೆ.

ಹರಿದಾಸ ಸಾಹಿತ್ಯದ ಯಶಸ್ಸು ಬಹುಪಾಲು ಅವರವರ ಧರ್ಮದ ನಂಬಿಕೆಯನ್ನು, ಧರ್ಮದ ಅಸ್ತಿತ್ವವನ್ನು ಧಾರ್ಮಿಕ ಶ್ರದ್ಧೆಯನ್ನು ಅರಿತು ಉಳಿಸಿ ಬೆಳೆಸಿರುವುದರಲ್ಲಿದೆ.

ಹೀಗೆ ದ್ವೈತದಲ್ಲಿ ಮಾಧ್ವಚಾರ್ಯರು, ಅದ್ವೈತದಲ್ಲಿ ಶಂಕರಾಚಾರ್ಯರು, ವಿಶಿಷ್ಟಾದ್ವೈತದಲ್ಲಿ ರಾಮಾನುಜಾಚಾರ್ಯರು ಹರಿದಾಸ ಪರಂಪರೆಯನ್ನು ಬೆಳಸಿದವರೆಂದು ಮತ, ಧರ್ಮದ ಜೊತೆಗೆ ಮುಕ್ತಿ ಮಾರ್ಗವನ್ನು ತೋರಿಸಿದರು. ಹಾಗೆಯೇ ವಿಶಿಷ್ಟಾದ್ವೈತದಲ್ಲಿ ೧೯ನೇ ಶತಮಾನದಲ್ಲಿ ಕಾಣಿಸಿಕೊಂಡ ಶ್ರೀತುಳಸಿರಾಮದಾಸರು 'ಹರಿಏಕನಿಷ್ಠೆ'ಯನ್ನು ಅವರ ಕೀರ್ತನೆ, ಧಾರ್ಮಿಕ ಶ್ರದ್ಧೆಯಲ್ಲಿ ಪ್ರತಿಪಾದಿಸುತ್ತಾ ವೈದಿಕ ಧರ್ಮದಲ್ಲಿಯೇ ಮಾತ್ರವಲ್ಲದೆ ವೈದಿಕೇತರರಲ್ಲಿ 'ಹರಿಏಕನಿಷ್ಠೆ' ಭಾವನೆಯನ್ನು ಮೂಡಿಸಿ, 'ಹರಿಏಕನಿಷ್ಠೆ'ಯಲ್ಲಿಯೇ ಜನಸಾಮಾನ್ಯರು ಮುಳುಗಿ ಸನ್ಮಾರ್ಗದಲ್ಲಿ ನಡೆದು ಮುಕ್ತಿಯ ಮಾರ್ಗವನ್ನು ಕಂಡುಕೊಳ್ಳುವಂತೆ ಮಾಡಿದರು.

ಶ್ರೀ ತುಳಸಿರಾಮದಾಸರು ದಕ್ಷಿಣ ಕರ್ನಾಟಕದ ಭಾಗದಲ್ಲಿ ಕಂಡು ಬಂದರೂ, ಜನ ಮಾನಸದಲ್ಲಿ ಒಂದಾದರು. ಸಮಾಜದೊಂದಿಗೆ ಬೆರೆತುಹೋದರು. ಜನಾನುರಾಗಿಯಾದರು. ಮತ್ತು ಅವರ ಕೀರ್ತನೆಗಳಲ್ಲಿ, ಧಾರ್ಮಿಕ ಶ್ರದ್ಧೆ ಮತ್ತು ಸಾಮಾಜಿಕ ಕಳಕಳಿಯನ್ನು ಗುರುತಿಸಬಹುದಾಗಿದೆ.

೧೯ನೇ ಶತಮಾನದಲ್ಲೂ ಆಳುವ ಅರಸರು ವೈದಿಕ ಪರಂಪರೆಯ ಉಳ್ಳವರೂ ಆಗಿದ್ದರು, ಎಂಬುದಕ್ಕೆ ಸಾಕ್ಷಿಗಳು ದೊರಕುತ್ತವೆ. ಹಿಂದೂ ಧರ್ಮದ ಅದರಲ್ಲೂ ವೈದಿಕ ಧರ್ಮದ ಮೇಲೆ ಅನ್ಯಧರ್ಮಿಯರ, ಪರಕೀಯರ ಆಕ್ರಮಣ ಹೆಚ್ಚುತ್ತಲಿತ್ತು. ವೈದಿಕ ಧರ್ಮದ ಮೇಲೆ ತೀವ್ರತರವಾದ ಪರಿಣಾಮ ಉಂಟಾಗುತ್ತಲೇ ಇತ್ತು. ಆಂಗ್ಲರು ಕರ್ನಾಟಕಕ್ಕೆ ಹೆಚ್ಚು ಹೆಚ್ಚು ಬರಲಾರಂಭಿಸಿದರು. ಆಗ ವೈದಿಕ ಧರ್ಮದ ವ್ರತ, ಆಚರಣೆ, ಧ್ಯಾನ ಎಲ್ಲವುಗಳ ಮೇಲೆ ಪರಿಣಾಮ ಬೀರುವ ಸಂದರ್ಭವಿದ್ದಾಗ ಈ ಹರಿದಾಸ

ಸಾಹಿತ್ಯವು ಧರ್ಮವನ್ನು, ಅನ್ಯ ಧರ್ಮದ ಆಕ್ರಮಣದಿಂದ ತಡೆಯಲೇಬೇಕಿತ್ತು. ಅಂತಹ ಸಂದರ್ಭದಲ್ಲಿ ಕೀರ್ತನೆಗಳ ಮೂಲಕ ಅರಿವು ಮೂಡಿಸಬೇಕಿತ್ತು. ಧಾರ್ಮಿಕ ಶ್ರದ್ದೆಯನ್ನು ಉಳಿಸಬೇಕಾಗಿತ್ತು, ಅದು ಅನಿವಾರ್ಯವು ಆಗಿತ್ತು. ವಿಶಿಷ್ಟಾದ್ವೈತದಲ್ಲಿ ಬಂದಂತಹ ಶ್ರೀ ತುಳಸಿರಾಮದಾಸರು ಧಾರ್ಮಿಕ ಶ್ರದ್ದೆಯನ್ನು ಜನಸಾಮಾನ್ಯರಲ್ಲಿ ಮೂಡಿಸುವ ಸಲುವಾಗಿ ಕೀರ್ತನೆಗಳನ್ನು ರಚಿಸುತ್ತಾ ಸಾಗಿದರು. ಆದಿದೇವರು ದಾಸರ ಸ್ವಪ್ನದಲ್ಲಿ ಕಾಣಿಸಿಕೊಂಡು ಆದೇಶವಿತ್ತಂತೆ. ಶ್ರೀ ತುಳಸಿರಾಮದಾಸರು ಧರ್ಮದ ಎಲ್ಲಾ ಅರಿವು ತಿಳಿದು, ಗುರುವಿನ ಉಪದೇಶದಂತೆ ನಡೆದು, ಸಕಲ ವಿದ್ಯಾ ಸಂಪನ್ನರಾಗಿ ಧಾರ್ಮಿಕ ಜಾಗೃತಿಯನ್ನು ಮೂಡಿಸಲು 'ಹರಿ ಏಕನಿಷ್ಠೆ'ಯನ್ನು ಜನ ಮಾನಸದಲ್ಲಿ ಪ್ರತಿಷ್ಠಾಪಿಸಲು ತೊಡಗಿದರು. ಶಿಷ್ಯ ಪರಂಪರೆಯನ್ನು ಬೆಳೆಸಿ, ಅವರ ಶಿಷ್ಯ ಪರಂಪರೆಯು ಜೀವಂತ ದಾಸ ಪರಂಪರೆಯಾಗಿ ಉಳಿದು, ಇಂದಿಗೂ ಅವರು ಸಾಕ್ಷಿಯಾಗಿದ್ದಾರೆ.

ಶ್ರೀ ತುಳಸಿರಾಮದಾಸರು ಒಂದೆಡೆ ನಿಂತವರಲ್ಲ, ಕರ್ನಾಟಕದ ಕೆಲವು ದಕ್ಷಿಣ ಭಾಗದಲ್ಲಿ ಸುತ್ತಾಡಿ ಜನರಲ್ಲಿ ಧರ್ಮ ಜಾಗೃತಿ ಮೂಡಿಸಿದರು. ಮತ್ತು ಅವರ ಕಷ್ಟಗಳಿಗೆ ನೆರವಾದರು. ಜನಸಾಮಾನ್ಯರಲ್ಲಿ ವಿಶಿಷ್ಟಾದ್ವೈತ ತತ್ವವನ್ನು ಅನುಸಂಧಾನಗೊಳಿಸಿ ಆ ಮೂಲಕ ಜನಮಾನಸದಲ್ಲಿ ಧರ್ಮದ ಉನ್ನತಿಯನ್ನು ಸಾಧಿಸಿದ ಪುಣ್ಯ ಪುರುಷರು.

ಶ್ರೀ ತುಳಸಿರಾಮದಾಸರು ಸು. ೭ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಎಲ್ಲವೂ ತೆಲುಗು ಭಾಷೆಯಿಂದ ರಚಿಸಲ್ಪಟ್ಟು, ಚಿಕ್ಕ ಚಿಕ್ಕ ಕೃತಿಗಳಾಗಿದ್ದು, ಧಾರ್ಮಿಕ ಕೃತಿಗಳಾಗಿವೆ. ೨೫ ಕನ್ನಡ ಕೀರ್ತನೆಗಳನ್ನು ಮಾತ್ರವೇ ಅವರ ಕನ್ನಡ ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿರುವುದು ಕಂಡು ಬರುತ್ತದೆ. ಇದನ್ನು ಹರಿಕಥಾ ಕೃತಿ ದಾಖಲಿಸುತ್ತದೆ. ಧಾರ್ಮಿಕ ಶ್ರದ್ದೆ ಮತ್ತು ಸಾಮಾಜಿಕ ಕಳಕಳಿಯನ್ನು ಗುರುತಿಸುವಲ್ಲಿ ಶ್ರೀಗುರುತುಳಸಿರಾಮದಾಸರ 'ಸಂಪಾದನಾ ಕೃತಿ'ಯಿಂದ ಕೀರ್ತನೆಗಳನ್ನು ಮಾತ್ರವೇ ಇಲ್ಲಿ ಆರಿಸಿಕೊಳ್ಳಲಾಗಿದೆ.

ಇವರು ರಚಿಸಿರುವ ಎಲ್ಲಾ ಕೃತಿಗಳು ಧಾರ್ಮಿಕ ಹಿನ್ನಲೆಯಿಂದ ಮೂಡಿ ಬಂದಿದ್ದು ದೈವವನ್ನು ಸ್ತುತಿಸುವ ರೂಪಗಳಾಗಿವೆ.

ಶ್ರೀ ತುಳಸಿರಾಮದಾಸರು 'ತುಳಸಿರಾಮದಾಸ' ಎಂಬ ಅಂಕಿತವನ್ನು ಇಟ್ಟುಕೊಂಡು ರಚಿಸಿದ್ದಾರೆ. ೨೫ ಕನ್ನಡ ಕೀರ್ತನೆಗಳು ವೈಷ್ಣವ ಸಂಪ್ರದಾಯಕ್ಕೆ ಅನುಗುಣವಾಗಿರುವುದನ್ನು ಕಾಣಬಹುದು.

"ಎಷ್ಟು ಆನಂದವೋ ಶ್ರೀ ಹರಿಯ ಭಜನೆ"
ಕಮಲನಾಭ ವೆಂಕಟೇಶ ಭಕ್ತ ಕಲ್ಪಭುರುಹಶ್ರೀ ಕಮಲ ಪ್ರಾಣೇಶ"   ಪ

"ಜಯ ಶ್ರೀಧರಾ ರಮಣ ಜಯ ಕೌಸ್ತುಭಾರಣ" ೩

"ಅಂಬುಜೋದದಾಸರೆಲ್ಲರೂ
ತಂಬುರೆಯು ಕರತಾಳವಾದ್ಯವಿ
ಜ್ರಂಭಿಸಿ ಹರಿಸ್ಮರಣೆಯ ಮಾಡುತ" ೪

"ದೃಷ್ಟತರ ದೋಷಗಳ ಬಳಲುವ
ಕಷ್ಟಗಳ ಪರಿಹರಿಸಿ ಸರ್ವೋ
ತ್ಕೃಷ್ಟ ನಾರಾಯಣನ ಭಜನೆ" ೫

ಎಂದು ಹೇಳುವಲ್ಲಿ ಹರಿ ಏಕನಿಷ್ಠೆಯನ್ನು ಗುರುತಿಸಬಹುದಾಗಿದೆ. ವೈದಿಕ ಧರ್ಮಕ್ಕೆ ಪೂರಕವಾಗಿಯೇ ಪರಿಭಾಷೆಯ ಬಳಕೆ ಹೇರಳವಾಗಿರುವುದು. ಶ್ರೀ ಹರಿಸ್ತುತಿ. ಲಕ್ಷ್ಮೀ ಇಷ್ಟಪಡುವ ಶ್ರೀ ನಾರಾಯಣನನ್ನು ಸ್ಮರಿಸಿರುವುದು ಆನಂದವೆಂಬಂತೆ ಸ್ತುತಿಸಲಾಗುತ್ತದೆ.

ಹೀಗೆ ಹೇಳುತ್ತಲೇ ಧರ್ಮದ ಧಾರ್ಮಿಕತೆಯನ್ನು ಹೊಂದಿದ್ದಲ್ಲಿ ದೃಷ್ಠಿದೋಷಗಳು ನಿವಾರಣೆಯಾಗುತ್ತವೆ. ಎಂಬುದು ಸಮಾಜಕ್ಕೆ ಮಾರ್ಮಿಕವಾದ ವಿಷಯವನ್ನು ತಿಳಿಸಲು ಪ್ರಯತ್ನಿಸಿರುವುದು ಕಾಣಬಹುದು.

ಇನ್ನೊಂದು ಕೀರ್ತನೆಯ ಸಾಲಿನಲ್ಲೂ,

"ಆದಿದೇವನು ಸಕಲಾಗಮ ಪೂಜಿತ
ಯಾದವ ಕುಲಮೋಹನ ರೂಪಾ
ವೇದೋದ್ದರ ತಿರುವೆಂಕಟನಾಯಕ
ನಾದಪ್ರಿಯ ತೇ ನಮೋ ನಮೋ ನಾರಾಯಣತೇ" ೬

ಎಂಬ ಕೀರ್ತನೆಯಲ್ಲಿಯೂ ನಾದಪ್ರಿಯನೆಂಬುದು ಹರಿಯನ್ನು ಸ್ತುತಿಸಿದ್ದಾರೆ. ವೈದಿಕ ಧರ್ಮದ ಹಿನ್ನೆಲೆಯಲ್ಲಿಯೇ ಮೂಡಿರುವಂತದ್ದು. ದೇವರು ಸಂಗೀತಕ್ಕೆ ತಲೆದೂಗಿ ಒಲಿಯುತ್ತಾನೆಂಬುದರ ದೃಷ್ಟಿಕೋನ ಹೊಂದಿದೆ. ಮತ್ತು ಇದರ ಮೂಲ ಶ್ರೀ ತುಳಸಿರಾಮದಾಸರಿಗೆ ಆದಿದೇವನು ಪೂರ್ವ ಸಂಕಲ್ಪದಂತೆ ಅಣತಿಯಿತ್ತದ್ದನ್ನು ನೆನಪಿಸುವ ಮತ್ತು ಅದರ ಮೂಲಕ ವೇದ, ಧರ್ಮ, ಆಚಾರಗಳ ಉನ್ನತಿಯನ್ನು

ಮಾಡಬೇಕೆಂದು ಆಜ್ಞಾಪಿಸಿ, ಹಿಂದೂ ಧರ್ಮದ ಉದ್ಧಾರವನ್ನು ಮಾಡಲು ಶ್ರಮಿಸಬೇಕೆಂದು ಸೂಚಿಸಿದ. ಧರ್ಮದ ದೇವನಾದ ಆದಿದೇವನ ಸ್ಮರಣೆಯಲ್ಲೂ ನಮೋ ನಾರಾಯಣಾತೇ ಎಂಬಲ್ಲಿ 'ಹರಿ ಏಕನಿಷ್ಠೆ'ಯ ಧಾರ್ಮಿಕ ಶ್ರದ್ಧೆ, ಭಕ್ತಿ ವ್ಯಕ್ತವಾಗುತ್ತದೆ. ಇಲ್ಲಿ ತನಗೆ ಆಜ್ಞಾಪಿಸಿದ ಇಷ್ಟ ದೈವನಿಗೆ ಭಕ್ತಿಯಿಂದ ಪೂಜಿಸುವ, ನಮಿಸುವ, ಸ್ತುತಿಸುವ ರೂಪವನ್ನು ಕಾಣಬಹುದು.

'ನಮೋ ನಮೋ ರಾಮಕೃಷ್ಣ ಗೋವಿಂದ
ನಮೋ ನಮೋ ಗೋವಿಂದ ಸೀತಾರಾಮ
ನಮೋ ನಮೋ ಹೇಮಾಧವ ಗೋವಿಂದ ಗೋಪಾಲಕೇಶವ
ನಮೋ ನಮೋ ನಾರಸಿಂಹಚ್ಯುತ ನಾರಾಯಣ' ೭

ಏಕದೇವೋಪಾಸನೆ ವಿಶಿಷ್ಟಾದ್ವೈತದ ವೈಶಿಷ್ಟ್ಯವನ್ನು ತೋರಿಸುತ್ತದೆ. ಮತ್ತು ರಾಮಕೃಷ್ಣ, ಗೋವಿಂದ, ಗೋವಿಂದ ಸೀತಾರಾಮ ಹೇಮಾಧವ ಗೋವಿಂದ, ಗೋಪಾಲ ಕೇಶವ, ನಾರಸಿಂಹಚ್ಯುತ ನಾರಾಯಣ' ಎಂಬುವಲ್ಲಿ, ಎಲ್ಲದರಲ್ಲಿಯೂ ಹರಿಯ ರೂಪಗಳು ಹಲವಿದ್ದರೂ 'ಹರಿ ಏಕನಿಷ್ಠೆ' ಒಂದೇ ಎಂಬುದು ಅದರಲ್ಲಿ ಭಕ್ತಿಯ ಪಡೆದುಕೊಂಡ ಬಗೆ ಮತ್ತು ಏಕನಿಷ್ಠೆ ಬಂದು ನಿಲ್ಲುವುದನ್ನು ಗುರುತಿಸಬಹುದಾಗಿದೆ. ಇದರಿಂದ ಸಾಮಾಜಿಕವಾಗಿಯೂ, ಬದಲಾವಣೆಯನ್ನು ಸಮಾಜದಲ್ಲಿ ತರಬಹುದೆಂಬ ನಂಬಿಕೆ, ಶ್ರೀ ತುಳಸಿರಾಮದಾಸರಲ್ಲಿ ಇದ್ದಂತೆ ತೋರುತ್ತದೆ. ಸಮಾಜದಲ್ಲಿ ಮಾನವರನ್ನೆಲ್ಲಾ ಒಂದೇ ತೆರನಾಗಿ ಗುರುತಿಸುವ ಪರಿಕಲ್ಪನೆ ಮೂಡಿದೆ.

ಶ್ರೀ ತುಳಸಿರಾಮದಾಸರು ರಚಿಸಿರುವ ಕೀರ್ತನೆಗಳಲ್ಲಿ ಶ್ರೀ ಲಕ್ಷ್ಮಿಯನ್ನು, ರಾಮಾನುಜ ಆಳ್ವಾರರನ್ನು ಕ್ಷೇತ್ರ ಸ್ತುತಿಗಳನ್ನು, ಲೋಕನೀತಿಗಳನ್ನು ರಚಿಸಿ ಎಲ್ಲವೂ ಏಕನಿಷ್ಠೆಯಲ್ಲಿ ಮೂಡಿದ್ದರೂ ಇವೆಲ್ಲಾ ಧಾರ್ಮಿಕತೆಯ ಪ್ರತಿಪಾದನೆಯಾಗಿದ್ದರೂ ಸಮಾಜದ ಕಳಕಳಿಯನ್ನು ಅವರು ಸಂಚರಿಸಿದ ಸ್ಥಳಗಳ ಬಗ್ಗೆ ಸ್ತುತಿಸಿರುವ ಹಿನ್ನಲೆಯಲ್ಲಿ ಮೂಡಿವೆ.

ಶ್ರೀ ಲಕ್ಷ್ಮೀ ಸ್ತುತಿಯಲ್ಲಿಯೂ ಗಂಡು ಹೆಣ್ಣೆಂಬ ಭೇದವನ್ನು ಕಾಣದಿರುವುದು ಗುರುತಿಸಬಹುದಾಗಿದೆ. ಮತ್ತು ಇವರ ಶಿಷ್ಯರಲ್ಲಿಯೂ ಗಂಡೆಂಬ ಹೆಣ್ಣೆಂಬ ಭೇದವೆಣಿಸದೆ ಸಮಾನವಾಗಿ ಹರಿಭಕ್ತಿಯ ತಲ್ಲೀನತೆಯ ಮಹಾ ಸಾಗರದಲ್ಲಿ ಮುಳುಗಿಸಿರುವುದನ್ನು ಕಾಣುತ್ತೇವೆ. ಶ್ರೀ ತುಳಸಿರಾಮದಾಸರು ಶ್ರೀ ಲಕ್ಷ್ಮೀಯ ಕುರಿತು:

"ಅಮ್ಮಯಾಮ್ಮ ಲಕ್ಷ್ಮೀ ನನಗೆ ಅಭಯವ ಕೊಡು ಸೀತಮ್ಮಾ ಪ

ಬೊಮ್ಮನ ಜಗಂಗಳ ಪೆತ್ತ ಸುತಾಯೆ
ಸುಮ್ಮನೆ ಕಾಲವ ಕಳೆಯದೆ ಬೇಗನೆ ೧

ನಂಬಿದೆ ನಿನ್ನ ಚರಣಾಂಬುಜಯುಗುಳವ
ಕಂಬುಕಂಧರನ ಕಾಂತೆಸುಕಾಂತೆ ೨

ಧರ್ಮ ನಿಲಯ ದಾರಿದ್ರ್ಯ ನಿವಾರಿಣಿ
ಧರ್ಮವಲ್ಲ ತವದಾಸನುಪೇಕ್ಷೆಯು ೩

ಹೇಮ ಮಹೀಧರ ಸ್ವಾಮಿನಿ ತುಲಸೀ
ರಾಮದಾಸನ ಪ್ರೇಮದಿ ಪಾಲಿಸು ೪

ಇಲ್ಲಿ ಮುಖ್ಯವಾದ ಅಂಶವೆಂದರೆ ಹೆತ್ತ ಸುತಾಯೆ ಎಂದ್ಧೇಳುತ್ತಲೇ ವಾತ್ಸಲ್ಯಮಯವಾದ ನೀನು ಹಡೆದ ಜಗತ್ತಿಗೆ ಬಂದು ಧರ್ಮ ನಿಲಯದ ದಾರಿದ್ರ್ಯ ನಿವಾರಣೆ ಮಾಡುವ ತಾಯಿಯೇ ಪ್ರೇಮದಿಂದ ಈ ತುಳಸಿರಾಮದಾಸನನ್ನು ಪ್ರೇಮದಿಂದ ನೋಡು. ಇದು ದಾಸನ ಆಪೇಕ್ಷೆ ಎಂದು ಹೇಳುವಲ್ಲಿ, ಸಮಾಜದಲ್ಲಿ ಧಾರ್ಮಿಕ ಶ್ರದ್ದೆಯ ಕೊರತೆಯನ್ನು, ಅಂಧಕಾರವನ್ನು ಬೆಳಗು, ತನ್ಮೂಲಕ ಸಮಾಜದ ಬಗ್ಗೆ ಇರುವ ಮತ್ತು ಎಲ್ಲರು ಆ ಮೂಲಕ ಸನ್ಮಾರ್ಗದ ಕಡೆ ನಡೆದು ತಮ್ಮಲ್ಲಿ ಧರ್ಮದ ಶ್ರದ್ದೆಯನ್ನು ಮೂಡಿಸಿಕೊಂಡು ಸಮಾಜದೊಂದಿಗೆ ಬೆರತು ಬಾಳಲಿ ಎಂಬ ಆಶಯವನ್ನು ಹೊತ್ತಂತಿದೆ.

(ಅ) ಕೀರ್ತನೆಗಳಲ್ಲಿ ವಸ್ತು ಮತ್ತು ಸ್ವರೂಪ :-

ಸಾಮಾನ್ಯವಾಗಿ ದಾಸ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಶ್ರೀ ತುಳಸಿರಾಮದಾಸರ ಕೀರ್ತನೆಗಳಲ್ಲಿ ವಸ್ತು ಮತ್ತು ಸ್ವರೂಪವನ್ನು ಒಟ್ಟೊಟ್ಟಿಗೆ ನೀಡಲಾಗುತ್ತದೆ. ಶ್ರೀ ತುಳಸಿರಾಮದಾಸರು ವೈದಿಕ ಪರಂಪರೆಯ ಹಿನ್ನೆಲೆಯಲ್ಲಿ ಬಂದವರಾಗಿರುವುದರಿಂದ, ವೈದಿಕ ಮನೋಧರ್ಮದಲ್ಲಿಯೇ ತಮ್ಮ ಕೀರ್ತನೆಗಳನ್ನು ರಚಿಸಿದ್ದಾರೆ. ಅವರ ರಚಿಸಿರುವ ಕೀರ್ತನೆಗಳು ಮತ್ತು ಕೃತಿಗಳನ್ನು ಕುರಿತು ಹೇಳುವುದಾದರೆ, ಅವರ ಕೀರ್ತನೆಗಳು ಕನ್ನಡದಲ್ಲಿ ೨೫ ಮಾತ್ರವೆಂದು ತಿಳಿದು ಬಂದಿದೆ. ಕೃತಿಗಳನ್ನು ತೆಲುಗು ಭಾಷೆಯಲ್ಲಿ ರಚಿಸಿದ್ದು, ಸು. ೭ ಕೃತಿಗಳೆಂದು ಸಂಪಾದನಾ ಕೃತಿಯಿಂದ ತಿಳಿಯುತ್ತದೆ.

ಅವರು ರಚಿಸಿರುವ ಕೀರ್ತನೆಗಳ ಸಾಹಿತ್ಯದಲ್ಲಿ ಕನ್ನಡದಲ್ಲಿ ರಚಿಸಿದ ಕೀರ್ತನೆಗಳು ಲಕ್ಷ್ಮೀ ಸ್ತುತಿ, ಶ್ರೀ ಹರಿ ಸ್ತುತಿ, ರಾಮಾನುಜಾದಾಸ ಸ್ತುತಿಗಳು, ಲೋಕನೀತಿಗಳು, ಕ್ಷೇತ್ರ ಸ್ತುತಿಗಳು ಮತ್ತು ಆಳ್ವಾರರ ಸ್ತುತಿಗಳು ಹೀಗೆ ಕೀರ್ತನೆಗಳು ಕಂಡು ಬರುತ್ತವೆ.

ದಾಸ ಸಾಹಿತ್ಯದಲ್ಲಿ ಮೊದಲಿನಿಂದಲೂ ಸಂಗೀತ, ಲಯ, ದೇಶಿ, ಪಲ್ಲವಿ, ಅನುಪಲ್ಲವಿ, ಕೊನೆಯಲ್ಲಿ ಶ್ಲೋಕವೊಂದು ಮಾರ್ಮಿಕವಾಗಿ ಹೇಳುವ ಪರಿ. ದೈವಸ್ತುತಿ ಎಲ್ಲವನ್ನು ಮೇಳೈವಿಸಿ ಸರಾಗವಾಗಿ ಹಾಡಲು ಪ್ರಾಸ ಬದ್ಧತೆ, ಎಲ್ಲವು ಇಲ್ಲವೇ ಕೆಲವೇ ಕೀರ್ತನೆಗಳಲ್ಲಿ ಕೆಲವು ಅಂಶಗಳನ್ನು ಕಾಣುತ್ತೇವೆ.

'ಹರಿ ಏಕನಿಷ್ಠೆ' ದೈವಸ್ತುತಿಯನ್ನು, ಲಕ್ಷ್ಮೀ ಸ್ತುತಿಯನ್ನು ಭಕ್ತಿ, ಭಾವದಿಂದ ಆರಾಧಿಸಿ ತಾದಾತ್ಮತೆ ಹೊಂದುವುದನ್ನು ಶ್ರೀ ತುಳಸಿರಾಮದಾಸರ ಕೀರ್ತನೆಯಲ್ಲಿ ಕಾಣುತ್ತೇವೆ.

ದಾಸರ ಕೀರ್ತನೆಗಳಲ್ಲಿ ಸಾಮಾನ್ಯವಾಗಿ ದಂಡಕ, ದ್ವಿಪದಿ, ಪಲ್ಲವಿ, ಅನುಪಲ್ಲವಿಯ ಪದ್ಯ, ಚೌಪದಿ ಕೆಲವು ಷಟ್ಪದಿ ಸಾಹಿತ್ಯದಲ್ಲಿ ಎಲ್ಲವು ಕೂಡಿ ಮೂಡಿರುವುದು ವಿಶೇಷವಾಗಿರುತ್ತದೆ.

ಆದರೆ ತುಳಸಿರಾಮದಾಸರು ವೈದಿಕ ಹಿನ್ನಲೆಯಿಂದ ಬಂದ ಕಾರಣವಾಗಿಯೇ ಅವರ ಕೀರ್ತನೆಗಳಲ್ಲಿ ರಾಗ, ತಾಳಗಳು ಕೂಡಿ ಸಂಗೀತದ ಲಯವೂ ಇದ್ದು, ಷಟ್ಪದಿ, ದಂಡಕದ ಸ್ವರೂಪದಲ್ಲಿ ಇವರ ಕೀರ್ತನೆಗಳ ಸ್ವರೂಪವನ್ನು ಕಾಣುತ್ತೇವೆ. ಅಲ್ಲದೆ ಕಂದ, ದ್ವಿಪದಿ, ಚೌಪದಿ, ಭಾಮಿನಿ ಷಟ್ಪದಿಯಲ್ಲಿ ತಮ್ಮ ಕೀರ್ತನೆಗಳಲ್ಲಿ ಮೂಡಿಬಂದಿವೆ.

ಕನ್ನಡ, ತೆಲುಗು ಭಾಷೆಗಳಲ್ಲೂ ಕೀರ್ತನೆಗಳಿವೆ. ಹರಿದಾಸ ಸಾಹಿತ್ಯವು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಹೊರಹೊಮ್ಮಿದ್ದು ದಾಸ ಸಾಹಿತ್ಯದಲ್ಲಿ ಇದ್ದ ಸರಳತೆಯನ್ನು ಗಮನಿಸಬಹುದು. ಹಾಗೆಯೇ ಹರಿದಾಸ ಸಾಹಿತ್ಯದಲ್ಲಿ ಶ್ರೀ ತುಳಸಿರಾಮದಾಸರು ಕೀರ್ತನೆಗಳನ್ನು ರಚಿಸುವಾಗ, ಹರಿಯನ್ನು ಕುರಿತು ಭಜಿಸುವಾಗ ಸಾಮಾನ್ಯ ಜನರಿಗೆ ಭಕ್ತಿಯ ಅರಿವು ಮೂಡಿ, ಅವರೂ ಮುಕ್ತಿ ಮಾರ್ಗವನ್ನು ಹೊಂದಲಿ ಎಂಬ ಕಾರಣವಿದ್ದು ವಿಶಿಷ್ಟಾದ್ವೈತ, ದ್ವೈತ, ಅದ್ವೈತದ ಸಮ್ಮಿಳನವಾಗಿದ್ದರೂ ಶ್ರೀ ತುಳಸಿರಾಮದಾಸರ ಕೀರ್ತನೆಗಳು ಧರ್ಮದ ನೆಲೆಯಿಂದ ಬಂದವೆಂದು ಗುರುತಿಸಲಾಗಿದೆ.

ಹರಿ ಸೇವೆಗೆ ಜೀವನ ಮೀಸಲಿರಿಸಿದ ಶ್ರೀ ತುಳಸಿರಾಮದಾಸರ ಕೀರ್ತನೆಗಳಲ್ಲಿ ವಸ್ತುವೂ ಕೂಡ ಮುಖ್ಯವಾದುದು. "ಶ್ರೀಲಕ್ಷ್ಮೀ ಸ್ತುತಿ, ಶ್ರೀಹರಿ ಸ್ತುತಿ, ಲೋಕನೀತಿಗಳು, ಕ್ಷೇತ್ರ ಸ್ತುತಿಗಳು ಮತ್ತು ಆಳ್ವಾರರ ಸ್ತುತಿ ಮತ್ತು ಕ್ಷೇತ್ರ ವರ್ಣನೆಗಳ ಕೆಲವು ಕೃತಿಗಳಲ್ಲಿ ಒಟ್ಟಾರೆಯಾಗಿ ಗಮನಿಸಬಹುದು."

"ಸಾಮಾನ್ಯವಾಗಿ ನಾಮಕೀರ್ತನೆ, ನಾಮ ಮಹಿಮೆಗಳನ್ನು ತಿಳಿಸುವಾಗ ವೇದ, ಪುರಾಣ, ಇತಿಹಾಸ, ಭಾರತ, ಭಾಗವತ, ರಾಮಾಯಣಗಳ ಕಥೆ, ಉಪಕಥೆಗಳು ಸಹಜವಾಗಿ ಅವರ ರಚನೆಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದವು. ಹೀಗೆ ನೀಡುತ್ತಿದ್ದ ಹರಿದಾಸರ ಜನತಾ ಶಿಕ್ಷಣವೂ ವಿಶಿಷ್ಟ ಗುಣದ್ದಾಗಿತ್ತು, ಸಂಗೀತ, ಸಾಹಿತ್ಯಗಳ ಮೂಲಕ ಜನರನ್ನು ಸುಸಂಸ್ಕೃತರನ್ನಾಗಿ ಮಾಡುವ ಅವರ ಪರಿ ಅನನ್ಯವಾದುದು. ಬುದ್ಧಿಯ ಮತ್ತು ಹೃದಯದ ವಿಕಾಸಕ್ಕೆ ಏಕಕಾಲದಲ್ಲಿ ದಾಸರ ಪದಗಳು ಉತ್ತೇಜನ ನೀಡಿದವು. ಅದು ದಾಸ ಸಾಹಿತ್ಯದ ಕೊಡುಗೆ." [೨] ಎಂಬುದನ್ನು ಗಮನಿಸಿದರೂ ದಾಸ ಸಾಹಿತ್ಯ ಕೀರ್ತನೆಗಳ ಸ್ವರೂಪವನ್ನು ಅರಿಯಬಹುದಾಗಿದೆ.

ಸಾಮಾನ್ಯವಾಗಿ ಕೀರ್ತನೆಗಳ ರಚನೆಯಲ್ಲಿ ಹೇಳುವ ದಾಟಿ, ಆಯ್ದುಕೊಳ್ಳುವ ವಸ್ತು ಕೂಡ ಮುಕ್ತಿಗೆ ಮಾರ್ಗವನ್ನು ತಂದುಕೊಡುವಲ್ಲಿ ಜನರಲ್ಲಿ ಭಕ್ತಿಯನ್ನು ಮೂಡಿಸಲು, ಮನವನ್ನು ಸೆಳೆಯಲು, ಪರಮಾತ್ಮನಲ್ಲಿ ಅಲ್ಲದೆ ಪರಮಾತ್ಮನ ಭಜಿಸುವ ರೀತಿಯ ವಸ್ತುವಿನಲ್ಲಿಯೂ (ಕೀರ್ತನೆಯಲ್ಲಿ) ಅಡಗಿರುವುದು.

ದಾಸರ ಪದಗಳಲ್ಲಿ ಅನೇಕ ಅಂಶಗಳು ಅಂತರ್ಗತವಾಗಿರುತ್ತವೆ. ಶ್ರೀ ತುಳಸಿರಾಮದಾಸರ ಕೀರ್ತನೆಗಳಲ್ಲೂ ಹುದುಗಿರುವ ಅಂಶಗಳನ್ನು ಗುರುತಿಸಬಹುದು, ಶ್ರೀ ಹರಿ ಸ್ತುತಿಯಲ್ಲಿ :

"ಪದ್ಮದಳ ನಯನ ಪ್ರತಿಷ್ಠೆಯ
ಪದ್ಮಶಾಲಿಯ ಭಕ್ತರೆಲ್ಲರೂ
ಪದ್ಮನಾಭನ ಪ್ರೀತಿ ಮಾಡಿ ಸು
ಭದ್ರ ಸಂಪದ್ಯುಕ್ತರಾದರು

ಮಂದಿರವೂ ಕಟ್ಟಿಸಿಯು ಪರಮಾ
ನಂದದಿಂ ಉತ್ಸವವು ನಡೆಸಿದ
ರೆಂದು ಕೇಳಿದ ಭಾಗ್ಯಶಾಲಿಗಳು
ಇಂದಿರೇಶನ ಕೃಪೆಯ ಪಡೆದರು." [೩]

ಎನ್ನುವಲ್ಲಿ ಕೀರ್ತನೆಯು ಚೌಪದಿಯ ಸಾಲಿನಲ್ಲಿ ಮೂಡಿಬಂದಿದ್ದು ಭಕ್ತ-ಭಕ್ತಿಯ ಅನನ್ಯತೆಯಿಂದ ಹೇಗೆ ಸುಖಿಸುವನು ಮನುಷ್ಯ ಎಂಬುದನ್ನು ಪದ್ಮನಾಭನ ಪ್ರೀತಿಮಾಡಿ ಭದ್ರ ಸಂಪದ್ಯುಕ್ತರಾದರ ಎಂದು ಹೇಳುವದರಲ್ಲಿ ಅಡಗಿದೆ. ಇಲ್ಲಿ ಭಕ್ತಿ ಮುಖ್ಯವೇ ಹೊರತು ಬೇರೆ ಯಾವುದೂ ಮುಖ್ಯವೆನ್ನಿಸುವುದಿಲ್ಲ. ಭಕ್ತಿಯಿದ್ದವನು ಪರಮಸುಖ ಹೊಂದುವನು. ಎಂಬುದು ಪ್ರೀತಿಯಿಂದ ಆರಾಧಿಸಿವರು ಕೃಪೆಗೆ ಒಳಗಾಗುವನು ಎಂಬುದನ್ನು ಗಮನಿಸಬಹುದು.

"ವಾಸುಕೀನಗರೇಶ ದಾಸರ
ದಾಸರಾಗಿಯೂ ತುಲಸಿರಾಮ
ದಾಸ ಪರಮೋಲ್ಲಾಸದಿಂ ಶ್ರೀ
ವಾಸುದೇವನ ಚರಣ ನಂಬಿದೆ" [೪]

ನಿತ್ಯ ಉಲ್ಲಾಸದಿಂದ ಇರಲು ಭಕ್ತನ-ಭಕ್ತರಾಗಿಬೇಕೆಂದು ಹೇಳುವಲ್ಲಿ, ಗುರುವಿನ ಶಿಷ್ಯನ ಸಂಬಂಧವು ಹೇಗಿರಬೇಕೆಂಬುದನ್ನು ಹೇಳುತ್ತಾರೆ. ದಾಸರ ದಾಸರಾಗಿಯೂ ಇರಬೇಕೆಂಬ, ಭಾವನೆ ವ್ಯಕ್ತವಾಗುತ್ತದೆ. ಇದರ ಉದ್ದೇಶ ಒಲಿದು ಬಂದು ದೀಕ್ಷೆ ಪಡೆದ ಶಿಷ್ಯರು, ಶಿಷ್ಯರಾಗಿಯೂ ಸಾಮಾನ್ಯ ಜನರು ಆ ಪರಂಪರೆಯನ್ನು ಉಳಿಸುವ ಕಾಳಜಿ ಮುಖ್ಯ ಶ್ರೀ ತುಳಸಿರಾಮದಾಸರಲ್ಲಿ ಇತ್ತೇನೊ ಎಂಬಂತೆ ಕಾಣುತ್ತದೆ.

"ಆದಿ ದೇವನ ಸಕಲಾಗಮ ಪೂಜಿತ
ಯಾದವ ಕುಲ ಮೋಹನ ರೂಪ
ವೇದೊದ್ಧಾರ ತಿರುವೆಂಕಟ ನಾಯಕ
ನಾದಪ್ರಿಯ ತೇನಮೋ ನಾರಾಯಣತೇ" [೫]

ಆದಿದೇವನು ದಾಸರಿಗೆ ವೈದಿಕ ಧರ್ಮದ ಆಚರಣೆ, ವ್ರತ, ಪೂಜೆಗಳು ಪರಕೀಯರಿಗೆ ತಿರಸ್ಕಾರ ಭಾವನೆ ಮೂಡಿದೆ. ಹಿಂದೂ ಧರ್ಮವನ್ನು ಉದ್ದಾರ ಮಾಡೆಂದು ಅಣತಿಯಿತ್ತು ನುಡಿದ ಸಂದರ್ಭದಲ್ಲಿ, ಶ್ರೀ ತುಳಸಿರಾಮದಾಸರು ಅದನ್ನು ವಸ್ತುವಾಗಿ ಆಯ್ಕೆ ಮಾಡಿಕೊಂಡಿರುವುದು ದೇವನು ಧರ್ಮವನ್ನು ಉದ್ಧರಿಸಲು ಪ್ರೇರಕ ಶಕ್ತಿಯಾಗಿ ನಿಲ್ಲುತ್ತಾನೆಂಬ ವಸ್ತು ತಿರುವೆಂಕಟನನ್ನು ಸ್ತುತಿಸಿದ ಕೀರ್ತನೆಯಲ್ಲಿ ವಸ್ತುವಾಗಿ ಕಂಡು ಬರುತ್ತದೆ. ಧರ್ಮದ ಉದ್ಧಾರವನ್ನು ಪ್ರಭುವೇ ನಿರ್ಧರಿಸಿದ್ದನ್ನು ತಿಳಿಸುತ್ತದೆ.

"ಶ್ರೀ ಮಾಧವ ದಾಮೋದರ ನಾಮಾರ್ಚಿತ ಕಾಮಾ
ಸೋಮನ ನಾನಧಾಮಾ ರಿಪು ಭೀಮಾ ಎಚ್ಚರಿಕೆ" ಪ

ಬೃಂದಾರಕ ಬೃಂದಾರ್ಚಿತ ವಂದಿತ ಮುಚುಕುಂದ
ಸುಂದರ ರಥವಂದಿತ ನವಕುಂದಾ ಎಚ್ಚರಿಕೆ ೧

ಗಂಗಾ ಪದರಂಗೇಶ ಭುಜಂಗಾರಿ ತುರಂಗ

ಶೃಂಗಾರ ಶುಭಾಂಗ ಭವಭಂಗ ಎಚ್ಚರಿಕೆ ೨

ಮರಾರಿ ಸಮಾದಿತ ವಾರಾಸಿ ಗಂಭೀರ
ಸೂರ ಸುಕುಮಾರಾ ರಣಧೀರಾ ಎಚ್ಚರಿಕೆ ೩

ಶೇಷಾಚಲ ಭೂಷಾಹತ ದೋಷಾ ಮೃದುಭಾಷಾ
ಭಾಷಾ ಪತಿಪೋಷಾ ದಶವೇಶಾ ಎಚ್ಚರಿಕೆ ೪

ಶ್ರೀಮದಖಿಲಾಂಡಕೋಟಿ ಬ್ರಹ್ಮಾಂಡ ನಾಯಕ
ಆದಿಮಧ್ಯಾಂತರರಹಿತ ಘನಸಾರವಿಲಸನ್ ಭ್ರೂಮಧ್ಯ
ಕಸ್ತೂರಿ ತಿಲಕ್ಜೋಲಾ ದಿವ್ಯ ಪೀತಾಂಬರಧಾರೀ
ಶ್ರೀಯಲಮೇಲ್‌ಮಂಗಾ ಮನೋಹರ
ಶ್ರೀಭಾರ್ಗವಾಸರ ಭಾಜನೋಲ್ಲಾಸ
ಶ್ರೀಚಾಮರಟ್ಟಾಲಿತಾ ಸತ್ಸಂಪ್ರದಾಯ ಸುಜ್ಞಾನ
ಭೋಧಿನೀ ಸಮಾಜೋದ್ಧಾರಕಾ ಎಚ್ಚರಿಕೆ" [೬] ೫

ಪದ್ಯದ ಮೊದಲ ಸಾಲು ಪಲ್ಲವಿಯನ್ನು ಹೊಂದಿದ್ದು, ದ್ವಿಪಾದದಲ್ಲಿ ಸಾಗಿ ನಂತರ ೭ ಸಾಲುಗಳಲ್ಲಿ ಕೊನೆಯ ಪದ್ಯ ಮೂಡಿದೆ.

ಶ್ರೀ ತುಳಸಿರಾಮದಾಸರ ಈ ಕೀರ್ತನೆಯಲ್ಲಿ ಮುಖ್ಯವಾಗಿರುವುದು ಸಂಗೀತಕ್ಕೆ ಕ್ರಮಬದ್ದವಾದ ಲಯವಿರುವುದು ಮತ್ತು ಪ್ರಾಸ ಬದ್ದತೆಯ ಗೇಯತೆಯನ್ನು ಹೊಂದಿದೆ.

ರಿಪು ಭೀಮ ಎಚ್ಚರಿಕೆ, ನವಕುಂದ ಎಚ್ಚರಿಕೆ, ಭವಭಂಗ ಎಚ್ಚರಿಕೆ, ರಣಧೀರ ಎಚ್ಚರಿಕೆ, ಸಮಾಜೋದ್ದಾರಕ ಎಚ್ಚರಿಕ್ಕೆ ಎಂಬ ಮಾತುಗಳಲ್ಲಿ ಹರಿಯನ್ನು ಹಲವು ಹೆಸರಿನಿಂದ ಕರೆದರೂ ಅವನು ಒಬ್ಬನೇ, ಎಲ್ಲಾ ರೂಪಗಳನ್ನು ತೊಟ್ಟ ಅನನ್ಯ ರೂಪ ಎಲ್ಲಾ ಕಾಲದಲ್ಲೂ, ಎಲ್ಲಾವುದರಲ್ಲೂ ಸರ್ವ ಶಕ್ತನಾಗಿ ಸಮಾಜವನ್ನು ಉದ್ಧರಿಸಲು ಸಿದ್ಧನಾಗುತ್ತಾನೆ. ಆದರೆ ನಾನಾ ಅವತಾರಗಳಲ್ಲಿ ಗುರುತಿಸಿಕೊಂಡು ಕಾಣುತ್ತಾನೆ. ರಾಮ, ವಿಷ್ಣು, ಹರಿ, ಕೃಷ್ಣ ಎಲ್ಲವೂ ಅವನೇ ಎಂದು ಮೂಡಿಬಂದು ಮೇಲಿನ ಕೀರ್ತನೆಯಲ್ಲಿ 'ಎಚ್ಚರಿಕೆ' ಎಂಬ ಪದವು ವಿಶಿಷ್ಟ ರೂಪದ ವಸ್ತುವಾಗಿ ನಿಲ್ಲುತ್ತದೆ. ಹರಿಯೇ ದಾಸರು ನೀಡುತ್ತಿರುವುದೋ ದೈವವೇ ದಾಸರಿಗೆ ಅಧಿಕಾರಯುತವಾಗಿ ನೀಡುತ್ತಿರುವ ಗಡುವೋ ಎಂಬ ಸಣ್ಣ ಸಂಶಯಗಳು ಮೂಡಿಬರುತ್ತವೆ. ಆದರೆ 'ಏಕನಿಷ್ಠೆ'ಗೆ ಭಕ್ತನು ಒಳಗಾಗಿ ಹಂಬಲಿಸುವ ಭಾವತೀವ್ರತೆ, ಭಕ್ತನ ಭಕ್ತಿಯೆಂತೆಯೇ ಭಜಿಸುವ

ದೇವನೂ, ಭಕ್ತನಿಗೆ ನಿಷ್ಠೆಯುಳ್ಳವನಾಗಿ ಇರಬೇಕೆಂದು, ದೇವ-ಮನುಷ್ಯ, ಭಕ್ತ-ಭಕ್ತಿ, ನಿಷ್ಠೆ-ಭಕ್ತಿ ಯಲ್ಲಿ ಸಮಾನತೆಯನ್ನು ಸಾಧಿಸಿರುವ ವಸ್ತುವನ್ನು ಗುರುತಿಸಲಾಗುತ್ತದೆ. ಆದರೆ ಹರಿಯೂ ಭಕ್ತನಿಗೆ ಸಮಾಜೋದ್ಧಾರಕನಾಗಿ ನಡೆಯದಿದ್ದರೆ ಎಚ್ಚರಿಕೆಯನ್ನು ಬಾರಿಸುತ್ತಿದ್ದಾನೋ ಇಲ್ಲವೇ ಭಕ್ತನೇ ತನ್ನ ಭಕ್ತಿಯ ಅಧಿಕಾರದಿಂದ ದೇವನಿಗೆ ಎಚ್ಚರಿಕೆಯನ್ನು ನೀಡುತ್ತಿದ್ದಾನೋ ಎಂಬ ಸಂಶಯ ಕಾಡದಿರದು. ಮೈಸೂರಿನ ಪರಕಾಲ ಮಠವು ಶ್ರೀ ತುಳಸಿರಾಮದಾಸರಿಗೆ ಇತ್ತ ಬಿರುದಿನಿಂದಲೇ ಬಳಸಿ ಕೀರ್ತನೆಯನ್ನು ರಚಿಸುವುದನ್ನು ಇಲ್ಲಿ ನೆನೆಯಬಹುದು.

"ಸನಕ ಸನಂದನ ವಿನುತಾ ಶಶಿ
ದಿನಕರ ಶತಕೋಟಿ ದಿವ್ಯ ಸುಚರಿತಾ
ಜನನ ಮರಣ ಕ್ಲೇಶರಹಿತ ಶ್ರೀ
ವನಜ ಸುದರ್ಶನ ಮನಮಾಲ ಧರಿತ" ೨

ಹರಿಯೇ ಶಕ್ತಿ ಕತ್ತಲೆಯನ್ನು ಓಡಿಸುವ ಶಕ್ತಿಯಾಗಿ ಮೂಡಿದೆ. ಚೌಪದಿಯಲ್ಲಿ ರಚಿತವಾದ ಕೀರ್ತನೆ ಸದಾ ಬೆಳಗುವ ಸೂರ್ಯನ ಪ್ರಭೆಯೂ ಉನ್ನತವಾದದ್ದು, ದಿವ್ಯ ಶಕ್ತಿಯಾಗಿರುವಂತದ್ದು, ಯಾವ ಪ್ರಭೆಯೂ ಸೂರ್ಯನಿಗೆ ಸಮನಲ್ಲ, ಅಂತಹ ಶತಕೋಟಿ ದಿವ್ಯ ಪ್ರಭೆಯೆಂಬುದನ್ನು ಗುರುತಿಸಬಹುದಾಗಿದೆ. ಮತ್ತು ಇಲ್ಲಿ ವ್ಯಾಕರಣ ಬದ್ಧವಾದ ಶಾಸ್ತ್ರವನ್ನು ಹೋಲಿಕೆಗಳ ಅಲಂಕಾರಗಳನ್ನು ಗುರುತಿಸಬಹುದೆಂಬ ಆಶಯ. ತುಳಸಿರಾಮದಾಸರು ವ್ಯಾಕರಣ, ತರ್ಕ, ಸಂಗೀತ, ಸಾಹಿತ್ಯ ಎಲ್ಲದರಲ್ಲೂ ಪರಿಣತಿ ಹೊಂದಿದ್ದರೆಂಬ ಈ ಸಾಲುಗಳು ನೆನಪು ಮಾಡಿಸುತ್ತವೆ. 'ಜನನ ಮರಣ ಕ್ಲೇಶರಹಿತ' ಎಂಬಲ್ಲಿ ಹುಟ್ಟು ಸಾವುಗಳೇ ಇಲ್ಲದ ಹರಿಯೂ 'ಸದಾ ಪರಿಪೂರ್ಣ' ಎಂಬ ಭಾವ ವ್ಯಕ್ತವಾಗುತ್ತದೆ.

ಇನ್ನೂ ಲಕ್ಷ್ಮೀ ಸ್ತುತಿಗಳಲ್ಲಿ :

"ಸುಂದರಾಂಗಿ ಸುಗುಣಾ ಸಿಂಧು ಜಗಜ್ಜನನನೀ
ಇಂದು ಸೋದರಿ ಪೂರ್ಣೆಂದು ಬಿಂಬಾನನೆ" ೧

ಕಂದ ತುಲಸೀದಾಸನೆಂದು ಸಂಭ್ರಮದಿ ಮುಚು
ಕುಂದವರದ ಪಾದದ್ವಂದ್ವ ಭಕ್ತಿಯು ಕೊಡಲು ೪

ಹೇಮಗಿರೀಶ್ವರಿ ಭಾಮಾ ತುಲಸೀ

ರಾಮ ದಾಸಸುತ ಸುಕ್ಷೇಮವು ನಿನ್ನದು ೫

ಹೇಮಕುಧರ ಧಾಮೇಶ್ವರಿ ತುಲಸಿ
ರಾಮದಾಸನ ಸಂರಕ್ಷಣೆ ಮಾಡುವ ೪

ದಾಸ ತುಳಸಿರಾಮದಾಸನುತ ಹಿತ ಪ್ರೇಮ
ವಾಸವಾರ್ಚಿತ ನಾಮವರಂ ದೇಹಿ ದೇಹೀ" ೩

ಈಲಕ್ಷ್ಮೀ ಸ್ತುತಿಗಳು ದ್ವಿಪಾದದಲ್ಲಿ ರಚನೆಯಾಗಿವೆ. ಹಾಡಲು ಲಯ ಮತ್ತು ಪ್ರಾಸವನ್ನು ಹೊಂದಿವೆ. ಶ್ರೀತುಳಸಿರಾಮದಾಸರು ಲಕ್ಷ್ಮೀಯನ್ನು, ಜಗತ್ತನ್ನು ವಾತ್ಸಲ್ಯಮಯವಾಗಿ ನೋಡುವ ತಾಯಿಯೆಂದು ಭಾವಿಸಿದ್ದಾರೆ. ಜಗದ ಸಕಲ ಜೀವಿಗಳನ್ನು ಅವಳೇ ಹಡೆದವಳು ಎಂಬಲ್ಲಿ ಜಗ್ಜನನೀ, ಸುಗುಣಾಸಿಂಧು ವ್ಯಕ್ತವಾಗುತ್ತದೆ. ಮಕ್ಕಳನ್ನು ಸದಾ ರಕ್ಷಿಸುವ, ಪೋಷಿಸುವ, ಸನ್ಮಾರ್ಗದ ಗುಣಗಳನ್ನು ಬಿತ್ತಿ ಕಾಪಾಡುವ ಹೊಣೆ ತಾಯಿಗಿರುತ್ತದೆ. ಅಂತೆಯೇ ಭಾವಿಸುವ 'ನಾನು ಕಂದ ನಿನ್ನ ಪಾದಗಳಲ್ಲಿ ಭಕ್ತಿಯು ದೊರಕಲಿ' ಎಂಬುದರಲ್ಲಿದೆ. 'ಸಂರಕ್ಷಣೆ ಮಾಡುವ, ಸುಕ್ಷೇಮವೂ ನಿನ್ನದು ಎಂಬಲ್ಲಿ ಸನ್ನಡತೆಗಳನ್ನು ಕಲ್ಪಿಸುವ ಹಕ್ಕು ನಿನ್ನದು ಎಂದು ಹೇಳಿ ಶ್ರೀಹರಿಯು ತಂದೆಯೆಂಬ ಶ್ರೀ ಲಕ್ಷ್ಮಿಯು ತಾಯಿಯೆಂಬ ಭಾವನೆಯಲ್ಲಿ ಅಡಗಿದೆ.'

"ವೃಥಾ ಮಾಡಬೇಡ ಈ ಜನ್ಮವು ಸದಾ ಬರದು ಮೂಡಾ ಪ

ಅಧೋಕ್ಷ ಜನ ಮೃದು ಪಾದಾರವಿಂದಗಳ
ಯಥಾರ್ಥದಿಂ ಗುರು ಬುಧಾಳಿ ಸೇರದೆ ೧

ಸುಧಾರದನ ಗೃಹ ಪದಾರ್ಥದಾಶದಿಂ
ಮದಾಂಧದಿಂ ಗುರು ಬುಧಾಳಿ ಸೇರದೆ. ೨

ಮಾತಾಪಿತಹಿತ ಸುತಾದಿ ಬಂಧುಗಳ್
ಹಿತಾರ್ಥರೆಂದು ಪರಗತಿ ನೀ ಕಾಣದೆ ೩

ಈ ಮೇಲಿನ ಲೋಕ ರೀತಿ ಕೀರ್ತನೆಯಲ್ಲಿ ಹಾಡಲು ಸಂಗೀತದ ಲಯವಿರುವುದು. ಇದು ಕೂಡ ದ್ವಿಪಾದದಲ್ಲಿ ರಚಿತವಾಗಿ, ಪಲ್ಲವಿಯು ಏಕಪಾದದಲ್ಲಿ ಕೂಡಿದೆ. ದೇಶಿ ಪದಗಳ ಬಂಧವಾಗಿದೆ. ವಸ್ತುವು ಸಮಾಜವನ್ನು ತಿದ್ದುವುದು ಮಾತ-ಪಿತ ಎಂಬ ಭವ ಬಂಧನದ ಆಮಿಷಗಳಿಗೆ ಬಲಿಯಾಗಿ ವ್ಯರ್ಥವಾಗಿ

ಕಾಲಹರಣ ಮಾಡಿದರೆ ಪರಲೋಕದ ಹಿತ ದೊರಕುವುದಿಲ್ಲ. ದೊರಕಬೇಕಾದರೆ ಲೋಕಿಕ ಸುಖಗಳನ್ನು ಅದರ ಮೇಲಿನ ವ್ಯಾಮೋಹವನ್ನು ತ್ಯಜಿಸಿ ತುಳಸಿರಾಮನೇ ದೊರೆಯೆಂದು ಅವನ ಮೊರೆಹೊಕ್ಕರೆ ಮುಕ್ತಿ ದೊರಕುತ್ತದೆ. ಕಾಮ, ಮೋಹವು ನಿನ್ನ ಅಮೂಲ್ಯ ಸಮಯವನ್ನು ವ್ಯರ್ಥ ಮಾಡುತ್ತದೆಯೆಂಬ ಭಾವನೆಯನ್ನು ಒಳಗೊಂಡಿದೆ.

ಹಲವು ಕೀರ್ತನೆಯಲ್ಲಿ ಶ್ರೀ ತುಳಸಿರಾಮದಾಸರು ಅನೇಕ ವಸ್ತುಗಳ ಕಡೆಗೆ ಗಮನಹರಿಸಿ ಕೀರ್ತನೆಯಲ್ಲಿ ತಂದಿದ್ದರು, ಒಟ್ಟಾರೆಯಾಗಿ, ಗುರುತಿಸಿರುವ ವಸ್ತುಗಳು ದೈವದ ವರ್ಣನೆಯೆ ಮುಖ್ಯವಾಗಿ ಕಂಡುಬಂದು, ಹಲವು ರೂಪಗಳಿದ್ದರೂ, ಒಂದೇ ದೈವವೆಂಬ ಏಕನಿಷ್ಠೆಗೆ ಬಂದು ನಿಲ್ಲುವ ದಾಟಿ, ಸಮಾಜವನ್ನು ಹರಿಭಕ್ತಿಯಲ್ಲಿ ತೊಡಗಿಸುವ ಪರಿ, ಸಮಾಜಮುಖಿಯಾದ ವಸ್ತುವು ಆರಿಸಿರುವುದು ಪುರಾಣದ ಪಾತ್ರಗಳ ಮೂಲಕ ಭಕ್ತಿ ಮೂಡಿಸುವಂತೆ ಮಾಡುವುದು. ಶ್ರೀಲಕ್ಷ್ಮಿಯ ಕೃಷ್ಣನ ಸ್ಥಳಗಳ ಮಹಿಮೆಯನ್ನು ತಂದಿರುವುದು, ಶ್ರೀ ಹರಿಯ ಮನೋಹರಿಣಿಯನ್ನು ಶ್ರೀಲಕ್ಷ್ಮಿಯನ್ನು ತಾಯಿಯಾಗಿ ಬಿಂಬಿಸಿರುವುದು, ವ್ಯಾಮೋಹ ಪಾಶಗಳಾದ ಕಾಮ, ಕ್ರೋಧ, ಮೋಹದ ಬಗ್ಗೆ ಅರಿವು ಮೂಡಿಸಿ ಮುಕ್ತಿ ಮಾರ್ಗವನ್ನು ಹೊಂದಲು ಸಮಯ ಮೀಸಲಿಡಲು ಮನಸ್ಸನ್ನು ಜಾಗೃತಿ ಮೂಡಿಸುವುದು, ಸನ್ಮಾರ್ಗ ಸನ್ನಡತೆಗೆ ಹರಿ ಸ್ಮರಣೆಯೊಂದೆ ಮುಖ್ಯವೆಂದು ಸಾಧಿಸುವುದು, ಗುರು-ದೈವದ ಭಕ್ತ-ಭಕ್ತಿಯ ಸಮನ್ವಯತೆ ಸಾಧಿಸುವುದು. ಎಚ್ಚರಿಕೆಯನ್ನು ಅಧಿಕಾರ ಮನೋಭಾವದಿಂದ ದೈವದಲ್ಲಿಯೂ ಸ್ಥಾಪಿಸುವುದು ಇವು ತುಳಸಿರಾಮದಾಸರ ಕೀರ್ತನೆಗಳಲ್ಲಿ ಬೇರೆ ದಾಸರಿಗಿಂತ ಭಿನ್ನವಾದ ಆಯ್ಕೆಯ ವಸ್ತುಗಳು ಕಂಡು ಬಂದರೂ ಭಕ್ತಿಗೆ ಪ್ರಧಾನ್ಯತೆಯನ್ನು ನೀಡಿರುವುದು ಮುಖ್ಯವಾಗಿ ನಿಲ್ಲುತ್ತದೆ.

ಈ ತುಳಸಿರಾಮದಾಸ ಕನ್ನಡದಲ್ಲಿ ರಚಿತವಾದ ಕೀರ್ತನೆಗಳ ವಸ್ತು ಮತ್ತು ಅವುಗಳ ಸ್ವರೂಪವು ವಿಸ್ತಾರವಾಗಿರುವುದನ್ನು ಗುರುತಿಸಲಾಗುತ್ತದೆ. ಸಮಾನ್ಯವಾಗಿ ಶ್ರೀ ತುಳಸಿರಾಮದಾಸರು ೨೭೫ ಕೀರ್ತನೆಗಳಲ್ಲಿ ೨೫ ಕೀರ್ತನೆಗಳು ಕನ್ನಡದಲ್ಲಿವೆ. ಅವರ ೭ ಕೃತಿಗಳು ಧಾರ್ಮಿಕ ಕೃತಿಗಳೆಂದು, ಮತ್ತು ಎಲ್ಲವು ತೆಲುಗು ಭಾಷೆಯಲ್ಲಿಯೇ ರಚಿತವಾದವುಗಳು ಹಾಗೂ ಚಿಕ್ಕ ಕೃತಿಗಳಾಗಿವೆ. ಸಂಪಾದನಾಕಾರರು ಹರಿಕಥಾ ಕೃತಿಯಿಂದ ಗುರುತಿಸಿದ್ದಾರೆ. ಇದರಲ್ಲಿ ಕೆಲವು ಕೀರ್ತನೆಗಳು ದ್ವಿಪದಿಯಲ್ಲಿವೆಯೆಂದು ಮತ್ತು ಕಂದ ಪದ್ಯಗಳಲ್ಲಿ ರಚಿತವಾಗಿವೆಯೆಂದು ಹೇಳಲಾಗಿದೆ.

ದ್ವಿಪದಿಯ ಲಕ್ಷಣವನ್ನು ನಾವು ಹೀಗೆ ಹೇಳುತ್ತೇವೆ. ವಿದ್ವಾಂಸರ ಪ್ರಕಾರ ೧೨ ನೇ ಶತಮಾನದ ನಂತರ ಈ ದ್ವಿಪದಿಯ ಹೆಸರೇ ಸೂಚಿಸುವಂತೆ ಎರಡು ಸಾಲುಗಳನ್ನು ಹೊಂದಿರುತ್ತವೆ. ಎರಡು ಸಾಲುಗಳ ಒಂದು ಬಂಧ ನಡುಗನ್ನಡ ಸಾಹಿತ್ಯದ ಪ್ರಭಾವದಿಂದ ಇತ್ತೀಚಿಗೆ, ತೆಲುಗಿನ ಪ್ರಭಾವದಿಂದಲೋ ಏನೋ ಎಂಬಂತೆ ಕನ್ನಡದಲ್ಲಿ ಬಳಕೆಯಾಗುತ್ತಿದೆ. ದ್ವಿಪದಿಯಲ್ಲಿ ದಾಸರ ಕೀರ್ತನೆಗಳು, ಯಕ್ಷಗಾನ ಜನಪದಗಳು ರಚನೆಯಾಗಿರುವುದನ್ನು ಗಮನಿಸಬಹುದು. ಅದರಂತೆಯೇ ತಮ್ಮ ಕೀರ್ತನೆಯ ರಚನೆಯಲ್ಲಿ ಕೆಲವು ಕೀರ್ತನೆಗಳನ್ನು ದ್ವಿಪದಿಯ ಬಂಧದಲ್ಲಿಯೂ ರಚಿಸಿದ್ದಾರೆಂಬುದನ್ನು ಗುರುತಿಸಬಹುದು.

ನಾ. ಗೀತಾಚಾರ್ಯರು ಹೇಳುವಂತೆ ನಾಲ್ಕು ಸಾಲುಗಳ ಕಂದದಲ್ಲಿಯೂ ರಚನೆಯಾಗಿ ಭಾಮಿನಿಷಟ್ಪದಿಯಲ್ಲಿ ಇರುವುದನ್ನು ವ್ಯಾಕರಣ, ಅಲಂಕಾರ ಶಾಸ್ತ್ರದ ಹಿನ್ನೆಲೆಯಲ್ಲಿ ರಚಿತವಾಗಿರುವದನ್ನು ಗಮನಿಸಬಹುದು.

(ಆ) ಭಾಷೆಯ ವೈಶಿಷ್ಟ್ಯತೆ :-

ಜನ ಸಾಮಾನ್ಯರಿಗೆ ಭಕ್ತಿಯ ಅರಿವು ಮೂಡಿಸುವಲ್ಲಿ ಭಾಷೆಯು ಮುಖ್ಯವಾಗಿರುತ್ತದೆ. ದಿನನಿತ್ಯ ಬಳಸುವ ಭಾಷೆಯು, ಜನರಲ್ಲಿ ಬೆರೆತು ಹೋಗಿರುವ ಭಾಷೆಯು ಮುಖ್ಯವಾಗಿರುತ್ತದೆ. ಅವರಲ್ಲಿ ಅರಿವು ಮೂಡಿಸಲು, ಅರ್ಥವಾಗಿಸಲು ಭಾಷೆಯ ಬಳಕೆಯ ಮಹತ್ವ ಕಂಡುಬರುತ್ತದೆ. ಧರ್ಮ ಪ್ರಚಾರ ಮತ್ತು ಭಕ್ತಿಯ ಮೂಲಕ ಒಂದೆಡೆ ಸೆಳೆಯಬೇಕಾದರೆ ಅನಿವಾರ್ಯವಾದ ಶಕ್ತಿಯೆಂದರೆ ಭಾಷೆಯೊಂದೇ. ಯಾವುದೇ ಧರ್ಮವಾಗಲಿ, ಯಾವುದೇ ಧರ್ಮದ ತತ್ವವಾಗಲಿ ಅದನ್ನು ಸಾಮಾನ್ಯರು ತಿಳಿಸುವಂತೆ ಮಾಡುವಲ್ಲಿ ಭಾಷೆಯು ಅತೀಮುಖ್ಯವಾಗಿ ನಿಲ್ಲುತ್ತದೆ. ಆಇ ನಿಟ್ಟಿನಲ್ಲಿ ಯೋಚಿಸುವುದಾದರೆ ಭಾಷೆ ವೈಶಿಷ್ಟ್ಯವು ಜನರಿಗೆ ತಲುಪಿಸುವ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ್ಯ ಸ್ಥಾನವನ್ನು ಪಡೆದು ನಿಲ್ಲುತ್ತದೆ.

ಶ್ರೀ ತುಳಸಿರಾಮದಾಸರು ತಮ್ಮ ಕೃತಿಯಲ್ಲಿ ಬಳಸಿರುವ ಭಾಷೆಯು ತನ್ನ ನೆಲೆಯ ದೇಶಿ ಭಾಷೆಯು ಮಹತ್ವ ಹೊಂದಿದೆ. ದಾಸರು ತಮ್ಮ ಕೀರ್ತನೆಗಳನ್ನು ಇದೇ ಹಿನ್ನೆಲೆಯಲ್ಲಿ ನೋಡುವುದು ಸೂಕ್ತ ಮೂಲತಃ ಆಂಧ್ರದವರಾದ ಇವರು ತೆಲುಗು ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದು, ತೆಲುಗಿನಲ್ಲಿಯೇ ೭ ಕೃತಿಗಳನ್ನು ರಚಿಸಿರುವುದು ಧರ್ಮದ ಪ್ರಚಾರದ ಹಿನ್ನಲೆಯಲ್ಲಿ ಅಲ್ಲಿನ ದೇಶಿಯಲ್ಲಿ ತೊಡಗಿಸಿಕೊಂಡಿರುವುದು, ಸಾಮಾನ್ಯವಾಗಿ ಹಲವು ಭಾಷೆಗಳ ಸಂಸ್ಕೃತ, ತೆಲುಗು ಬಾಷೆಯ ಪದಗಳು ಅಲ್ಲಲ್ಲಿ ಕೀರ್ತನೆಗಳನ್ನು ಕಟ್ಟುವಲ್ಲಿ, ಮೂಡಿ ಬಂದಿರುವುದು ಹಲವು ಭಾಷೆಯ ಪ್ರಾವೀಣ್ಯತೆಯನ್ನು ಅವರು

ಗುರು ಪರಂಪರೆಯಲ್ಲಿದ್ದಾಗಲೇ ಪಡೆದಿದ್ದ ಪರಿಣತಿಯನ್ನು ತೋರಿಸುತ್ತದೆ. ಆದರೆ ತೆಲುಗಿನ ಭಾಷೆಯ ಬಗ್ಗೆ ಅವರಿಗೆ ಹೆಚ್ಚು ಒಲವು ಇದ್ದು, ಹೆಚ್ಚು ಗಮನ ಹರಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಅವರ ರಚನೆಗಳಲ್ಲಿ ತೆಲುಗು ಭಾಷೆ ಪ್ರಧಾನ್ಯತೆಯನ್ನು ಪಡೆದು ನಿಲ್ಲುತ್ತದೆ. ಇದರ ಆಶಯ ಸಾಮಾನ್ಯವಾಗಿ ಹರಿದಾಸ ಸಾಹಿತ್ಯವನ್ನು ಪ್ರಚಾರ ಪಡಿಸಲು ಆ ಭಾಗದಲ್ಲಿ ಅತಿಮುಖ್ಯವೆನಿಸಿದ್ದಿರಬಹುದು.

ಅವರು ರಚಿಸಿದ ಕೃತಿಗಳು ಲಕ್ಷ್ಮೀ ಶತಕಮು. ರಾಮಾನಾಮ ಶತಕಮು, ಸಿರುತಾವಳಿ ಇನ್ನು ಮೊದಲಾದುವೆಲ್ಲಾ ತೆಲುಗಿನಲ್ಲಿಯೇ ಇರುವುದನ್ನು ಕಾಣಬಹುದು. ದ್ವಿಪದಿ, ಕಂದಗಳಲ್ಲಿಯೂ, ಷಟ್ಪದಿಗಳಲ್ಲಿ ರಚಿತವಾಗಿರುವುದು. ತುಳಸಿರಾಮದಾಸರು ತನ್ನ ೨೦ನೇಯ ವಯಸ್ಸಿನಲ್ಲಿ ಕಲಿತ ಹಲವು ಭಾಷೆಯ, ವ್ಯಾಕರಣಶಾಸ್ತ್ರ, ಸಂಗೀತ ಸಾಹಿತ್ಯದ ಒಲವು, ಕೀರ್ತನೆಗಳನ್ನು ಸಂಗೀತದ ಲಯದೊಂದಿಗೆ ಮೇಳವಿಸಿ ಬಿಗಿಯಾದ ಬಂಧವಾಗಿ ಕಟ್ಟಿರುವುದು ಅವರು ಕನ್ನಡ ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.

ತೆಲುಗು ಭಾಷೆಯಿಂದ ಕಟ್ಟಿದ ಕೀರ್ತನೆಯು ಸಾಮಾನ್ಯವಾಗಿ ಪ್ರಾದೇಶಿಕವಾಗಿ ದೇಶಿಯತೆಯನ್ನು ಗುರುತಿಸಬಹುದು. ಧರ್ಮದ ಪ್ರಚಾರಕ್ಕೆ ಭಾಷೆ ಎಷ್ಟು ಮುಖ್ಯವಾಗುತ್ತದೆ ಎಂಬುದು, ಭಕ್ತಿಯನ್ನು ಮೂಡಿಸಲು ಸಹಕಾರಿಯೇ ನಿಲ್ಲುತ್ತದೆ. ಭಾಷೆಯ ವಿಶಿಷ್ಟತೆ.

ಹರಿಏಕನಿಷ್ಠೆಯನ್ನು ಜನರಲ್ಲಿ ಭಕ್ತಿಯನ್ನು ಮೂಡಿಸಲು ಬಹು ಹಿಂದಿನಿಂದಲೂ ಸಂಗೀತ ಪ್ರಧಾನವಾಗಿ ಕಂಡುಬರುತ್ತದೆ ಅದರಂತೆ ಶ್ರೀ ತುಳಸಿರಾಮದಾಸ ಕೀರ್ತನೆಗಳು ಸಂಗೀತದ ಜ್ಞಾನವನ್ನು ಹೊಂದಿದ್ದು ಸಂಗೀತದ ಭಾಗಗಳಾದ ಲಯ, ಗೇಯ, ಭಾವ, ಪ್ರಾಸ, ತುಂಬಿದ ರಚನೆಗಳನ್ನು ರಚಿಸಿದ್ದಾರೆ. ಅದರ ಮೂಲಕ ಹೆಚ್ಚು ಭಕ್ತರಿಗೆ ಪರಮಾತ್ಮನ ವಿಷಯಗಳನ್ನು ತಿಳಿಸುವುದೇ ಭಾವನೆ ಹೊಂದಿದೆ.

ನಡುಗನ್ನಡದ ಸಾಹಿತ್ಯದ ಸಂದರ್ಭದಲ್ಲಿ ಹೆಚ್ಚು ಬಳಕೆಯಾಗಿದ್ದು ದ್ವಿಪದಿ ಪಾದಗಳು ದಾಸ ಸಾಹಿತ್ಯದಲ್ಲಿ ದ್ವಿಪದಿಯು ಮೇಲುಗೈ ಸಾಧಿಸಿತ್ತು, ಜಾನಪದ ಗೀತೆಗಳಲ್ಲಿ ಯಕ್ಷಗಾನದ ಪದಗಳಲ್ಲಿ ದಾಸ ಸಾಹಿತ್ಯದಲ್ಲಿ ಆ ಒಂದು ದಾಟಿಯನ್ನು ಬಳಸಿಕೊಂಡು ಇವರು ತಮ್ಮ ಕೀರ್ತನೆಗಳನ್ನು ರಚಿಸಿದ್ದಾರೆ. ಹೆಚ್ಚು ಕೀರ್ತನೆಗಳು ದ್ವಿಪದಿಯಲ್ಲಿ ಇರುವುದನ್ನು ಗಮನಿಸಬಹುದಾಗಿದೆ. ನಡುಗನ್ನಡದ ನಂತರ ಬಂದಂತಹ ಈ ಶೈಲಿಯು ತೆಲುಗಿನಲಲ್ಲಿಯೂ ಮಹತ್ವ ಪಡೆದುಕೊಂಡು ಆನಂತರ ತೆಲುಗಿನ ಭಾಷೆಯ ಪ್ರಭಾವದಿಂದ ಕನ್ನಡದಲ್ಲಿ ಕಾಲಿರಿಸಿದೆ. ಎಂದು ನೆನೆಯಬಹುದು.

ಕೀರ್ತನೆ ಸಾಹಿತ್ಯ ಸಾಮಾನ್ಯವಾಗಿ ಸಂಗೀತಕ್ಕೆ ಹತ್ತಿರವಾಗಿದ್ದು ಕಂಡು ಬರುತ್ತದೆ. ಅದರಂತೆ ತುಳಸಿರಾಮದಾಸರು ರಚಿಸಿರುವ ಕೀರ್ತನೆಗಳು ಸಂಗೀತಕ್ಕೆ ಸಂಬಂಧಿಸಿದ ರಾಗ, ತಾಳಗಾಳದ ಶ್ರೀ ಹರಿಸ್ತುತಿಗಳು ಬಿಲಹರಿದಾಗ, ಕಲ್ಯಾಣಿರಾಗ, ಅಟ್ಟತಾಳ, ಆದಿತಾಳಗಳಲ್ಲಿಯೂ ಕಂಡುಬಂದು ಲಕ್ಷ್ಮಿಸ್ತುತಿಗಳು

ಲೋಕನೀತಿಗಳು ಸಂಗೀತ ಪ್ರಧಾನವಾದ ರಾಗತಾಳಗಳಲ್ಲಿ ಮೂಡಿ ಬಂದಿರುವುದು ವಿಶಿಷ್ಟವಾಗಿದೆ. ಕೀರ್ತನೆಗಳಿಂದ ಪರಮಾತ್ಮನು ಬಹುಬೇಗ ಒಲಿಯುತ್ತಾನೆ ಎಂಬ ನಂಬಿಕೆ ಶ್ರೀ ತುಳಸಿರಾಮದಾಸರು

ತುಳಸಿರಾಮದಾಸರಲ್ಲಿಯೂ ಇದ್ದಂತೆ ತೋರುತ್ತದೆ. ಸಂಗೀತಕ್ಕೆ ತಕ್ಕಂತೆ ಸಾಹಿತ್ಯ ರಚಿಸಿರುವುದು, ಸಾಹಿತ್ಯಕ್ಕೆ ಬೇಕಾದ ಭಾಷೆಯನ್ನು ಬಳಸಿ ಬಿಗಿಯಾದ ಬಂಧದಲ್ಲಿ ಕಟ್ಟುವುದು ಪರಿಣಿತಿಯ ಭಾಷೆಯ ಪ್ರಧಾನ್ಯತೆಯನ್ನು ಗುರುತಿಸಬಹುದಾಗಿದೆ.

ಆಂಧ್ರದವರಾದ ದಾಸರು ತೆಲುಗಿನಲ್ಲಿಯೂ ಅಲ್ಲದೇ ಕನ್ನಡ ಜನಕ್ಕೂ ಉಪಯೋಗವಾಗಲೀ ದಾಸ ಸಾಹಿತ್ಯವನ್ನು ಪ್ರಚಾರಪಡಿಸಬೇಕಾಗಿರುವುದರಿಂದ ಅದರಲ್ಲೂ ವೈದಿಕ ಧರ್ಮದ ತತ್ವಗಳನ್ನು ಪ್ರಚಾರಪಡಿಸಲು ಕನ್ನಡ ಭಾಷೆಯಲ್ಲಿಯೂ ಕೀರ್ತನೆಗಳ ರಚನೆ ದಾಸರಿಗೆ ಅನಿವಾರ್ಯವಾಗಿ ಕಂಡು ಬಂದಿರಬೇಕು, ಕನ್ನಡ ಭಾಷೆಯಲ್ಲಿ ರಚಿಸಿದ ಕೀರ್ತನೆಗಳು, ಈ ಮಾತಿಗೆ ಮಾದರಿಯಾಗಯೇ ನಿಲ್ಲುತ್ತದೆ. ಇವನ್ನು ಹರಿದಾಸ ಸಾಹಿತ್ಯಕ್ಕೆ ನೀಡಿದ ಕೊಡುಗೆಯೆಂದು ಭಾವಿಸಬಹುದಾಗಿದೆ ಆಯಾಯ ಪ್ರದೇಶದ ಆಡು ನುಡಿಯೊಂದಿಗೆ ದಾಸ ಸಾಹಿತ್ಯ ಮೂಡುವುದು ದಾಸ ಸಾಹಿತ್ಯದ ಒಂದು ವಿಶೇಷತೆ.

ಶ್ರೀ ತುಳಸಿರಾಮದಾಸರು ಗುರುವಿನ ಬಗ್ಗೆ ಹೆಚ್ಚು ಸ್ತುತಿಗಳನ್ನು ಕೀರ್ತನೆಗಳಲ್ಲಿ ತಂದಿರುವುದು, ಪಾದ ಮತ್ತು ಪ್ರಾಸಕ್ಕಾಗಿ ಬಳಸಿರುವ ಭಾಷೆಯ ವೈಶಿಷ್ಟ್ಯ ಮುಖ್ಯವಾಗಿದೆ. ಸಂಗೀತದ ಪರಿಭಾಷೆಯನ್ನು ಬಳಸಿರುವುದು ಅವರಿಗಿದ್ದ ಶಾಸ್ತ್ರೀಯ ಮನೋಭಾವವನ್ನು ಭಾಷೆಯ ವೈಶಿಷ್ಟ್ಯತೆ ಮತ್ತು ಧರ್ಮದ ಶಾಸ್ತ್ರಬದ್ಧವಾದ ಹಿನ್ನೆಲೆಯಲ್ಲಿ ಗುರುತಿಸಬಹುದು.

ಸಂಸ್ಕೃತ ಭಾಷೆ ದೇವ ಭಾಷೆಯಾಗಿರುವುದು ಹಾಗೆಯೇ ಎಲ್ಲರು ಒಪ್ಪಿಕೊಂಡ ಭಾಷೆಯಾಗಿದೆ. ಶ್ರೀ ತುಳಸಿರಾಮದಾಸರು ತಿರುಪತಿ ವೆಂಕಟೇಶನನ್ನು, ಲಕ್ಷ್ಮಿಪತಿಯನ್ನು ದೈವದ ಮಹಿಮೆಗಳನ್ನು ಹೇಳುವಾಗ ಕನ್ನಡ ಕೀರ್ತನೆಯ ರಚನೆಯಲ್ಲಿಯೂ ಸಂಸ್ಕೃತ ಭಾಷೆಯು ನಿರರ್ಗಳವಾಗಿ ಯಾವ ತಡೆಯೂ ಇಲ್ಲದೇ ಬಳಸಲಾಗುತ್ತದೆ. ಇಂತಹ ಒಂದು ಉದಾಹರಣೆಯನ್ನು ಗಮನಿಸಬಹುದು.

"ಶೇಷಾ ಭೂಧರ ಭವದೋಷರಹಿತ ಭಕ್ತಪೋಷಣ
ಕೌಸುಭ ಭೂಷಾ ಆಶೇಷಾತ್ಮ ಶೇಷಾ ೧

ಅರಿದರಕರ ಕನಕಾಂಬರಧರ ಶ್ರೀಯ
ಲರ್‌ಮೇಲ್‌ಮಂಗಾ ವಿಹಾರ ಉದಾರೀ ವಿಧೀರಾ ೨

ವಿಷಚರಯುಗಮೃಗ ವೇಷಾ ದ್ವಿನೃಷಚ

ವೇಷಾಮರಿ ಕುಲದೂಷಾ ಮಾ ವಿಷಯ ಸಂತೋಷಾ ೩

ಕಾಮಜನಕಯುಗ ತುಲಸೀ ರಾಮದಾಸ ಹಿತ
ಕಾಮಿತಾರ್ಥವನೀವ ಓ ಶ್ರೀನಿವಾಸ

೪

ಸಂಸ್ಕೃತ ಭಾಷೆಯ ಪ್ರಭಾವವನ್ನು ಭಾಷಾ ಪ್ರಯೋಗದಲ್ಲಿ ಕಾಣುವುದು ವೈಶಿಷ್ಟ್ಯವಾಗಿದೆ. ಭಕ್ತಿಯ ಭಾವವೇಶದಿಂದ ನಿರರ್ಗಳವಾಗಿ ಸಂಸ್ಕೃತದ ಪದಗಳಲ್ಲಿ ಈ ಕೀರ್ತನೆ ರಚನೆಯಾಗಿರುವುದನ್ನು ಗಮನಿಸಬಹುದು. ಅರಿ–ಲರ್, ವಿಷ–ವೇಷಾ, ಕಾಮ–ಕಾಮಿಗಳಲ್ಲಿ ಪ್ರಾಸವು ಕಾಣುತ್ತದೆ.

ಕನ್ನಡ, ಸಂಸ್ಕೃತ, ತೆಲುಗಿನಲ್ಲಿ ಪರಿಣಿತಿಯನ್ನು ಪಡೆದು ಶ್ರೀ ತುಳಸಿರಾಮದಾಸರು ಕೀರ್ತನೆ, ಕೃತಿ, ಶ್ಲೋಕಗಳಲ್ಲಿರುವುದು ಭಾಷೆಯ ವೈಶಿಷ್ಟ್ಯವಾದರೂ ಯಾವ ಭಾಷೆಯಾದರೂ ಭಕ್ತಿಯೊಂದೆ ಎಂಬ ತತ್ವಕ್ಕೆ ದೇವನಲ್ಲಿ ನಿಷ್ಠೆ ಮಾತ್ರವೇ ಮುಖ್ಯವಾಗಿ ನಿಲ್ಲುತ್ತದೆ. ಅದೊಂದೇ ಸತ್ಯವಾಗಿ ಹರಿದಾಸ ಸಾಹಿತ್ಯದ ಅನೇಕ ಕೃತಿಗಳನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲವೆಂಬುದು ನನ್ನ ಅರಿವು. ಏಕೆಂದರೆ ಸಾಕಾಷ್ಟು

ಶಾಸ್ತ್ರಜ್ಞಾನ, ಭಾಷಾಜ್ಞಾನ ಎಲ್ಲವೂ ವಿಶೇಷವಾಗಿರಬೇಕಾಗುತ್ತದೆ. ಕೆಲವು ಕಡೆ ಆದಿ, ಅಂತ್ಯ ಪ್ರಾಸವು ಕಂಡುಬರುತ್ತದೆ.

'ದರಿಶಕುಪ್ಪ ಶ್ರೀ ಅಂಜನ ತನಯ
ದರುಶನ ಕೊಡು ಬೇಗ ದಯದಿಂದಾ'

ಈ ಪದ್ಯದ ಪಲ್ಲವಿಯ ಆದಿ ಭಾಗದಲ್ಲಿ ಆದಿಪ್ರಾಸವು ಬರುತ್ತದೆ

'ಸಿರಿ ರಘುಕುಲವರ ಸೇವಾನುಕೂಲ
ಸ್ಮರಿಸುವೆ ನಿಮ್ಮ ಪಾದಸರಸಿಜಯುಗಳ'
ಹರಿಹರ ಬ್ರಹ್ಮದ್ಯಮರ ಸುಪೂಜ
ಧರಣಿ ಜಾ ಪ್ರಾಣೊದ್ದಾರ ಸುತೇಜ'

ಎಂದು ಮುಂದುವರೆದ ಸಾಲಿನಲ್ಲಿಯೂ ಆದಿ, ಅಂತ್ಯದಲ್ಲಿಯೂ ಪ್ರಾಸವು ತಂದು, ಲಯ ಗೇಯತೆಯನ್ನು, ಹಾಡುವುದಕ್ಕೆ ಸರಾಗವಾಗಿ ಪದ ವೈಶಿಷ್ಟ್ಯವು ಭಾಷೆಯ ಹಿನ್ನೆಲೆಯಲ್ಲಿ ಮೂಡಿರುವುದು ಗಮನಾರ್ಹವಾಗಿದೆ.

ಅಡಿ ಟಿಪ್ಪಣಿ

ಕೀರ್ತನೆಗಳಲ್ಲಿ ವ್ಯಕ್ತ ವಾಗಿರುವ ಧಾರ್ಮಿಕ ಶ್ರದ್ಧೆ ಮತ್ತು ಸಾಮಾಜಿಕ ಕಳಕಳಿ

೧. ನಾ.ಗೀತಾಚಾರ್ಯರು, ಶ್ರೀಗುರುತುಳಸೀರಾಮ ಪು;೩೭

೨. ಅದೇ, ಪು ೩೭

೩. ಅದೇ, ಪು ೪೨

೪ ಅದೇ, ಪು ೩೭

೫. ಅದೇ, ಪು ೪೨

೬. ಅದೇ, ಪು ೩೯

೭. ಅದೇ, ಪು ೩೯

೮. ಅದೇ, ಪು ೪೨

೧. ನಾ. ಗೀತಾಚಾರ್ಯರು (ಸಂ)	: ಶ್ರೀ ಗುರು ತುಳಸೀರಾಮ	ಪು : ೩೦
೨. ಕೊಲ್ಹಾರ ಕುಲಕರ್ಣಿ	: ಮನುಕುಲಕ್ಕೆ ದಾಸಸಾಹಿತ್ಯ ಲೇಖನ	ಪು : ೪೫
೩. ನಾ. ಗೀತಾಚಾರ್ಯರು (ಸಂ)	: ಶ್ರೀ ಗುರು ತುಳಸೀರಾಮ	ಪು : ೩೭
೪. ನಾ. ಗೀತಾಚಾರ್ಯರು (ಸಂ)	: ಶ್ರೀ ಗುರು ತುಳಸೀರಾಮ	ಪು : ೩೮
೫. ನಾ. ಗೀತಾಚಾರ್ಯರು (ಸಂ)	: ಶ್ರೀ ಗುರು ತುಳಸೀರಾಮ	ಪು : ೩೮
೬. ನಾ. ಗೀತಾಚಾರ್ಯರು (ಸಂ)	: ಶ್ರೀ ಗುರು ತುಳಸೀರಾಮ	ಪು : ೪೦
೭. ನಾ. ಗೀತಾಚಾರ್ಯರು (ಸಂ)	: ಶ್ರೀ ಗುರು ತುಳಸೀರಾಮ	ಪು : ೪೨
೮. ಅದೇ ಪುಸ್ತಕ		ಪು : ೪೪
೯. ಅದೇ ಪುಸ್ತಕ		ಪು : ೪೫
೧೦. ಅದೇ ಪುಸ್ತಕ		ಪು : ೪೫
೧೧. ಅದೇ ಪುಸ್ತಕ		ಪು : ೪೭
೧೨. ಅದೇ ಪುಸ್ತಕ		ಪು : ೪೮
೧೩. ಅದೇ ಪುಸ್ತಕ		ಪು : ೫೧

ಅಧ್ಯಾಯ – ಐದು

ಆಂದೋಲನಕಾರರಾಗಿ ತುಳಸಿರಾಮದಾಸರು

ಕನ್ನಡ ದಾಸಸಾಹಿತ್ಯದಲ್ಲಿ ಪುರಂದರದಾಸರನ್ನು, ಕನಕದಾಸರನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ, ಆಂದೋಲನ ನಡೆಸಿದವರೆಂದು ಗುರುತಿಸಲಾಗುತ್ತದೆ. ವಚನಸಾಹಿತ್ಯದ ಸಂದರ್ಭದಲ್ಲಿಯೂ ಬಸವಣ್ಣನನ್ನು ಒಬ್ಬ ಕ್ರಾಂತಿಯನ್ನುಂಟು ಮಾಡಿ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ ಶಿವಶರಣನನ್ನಾಗಿ ಗುರುತಿಸಿದ್ದೇವೆ. ಹಾಗೆಯೇ ೧೯ ನೇ ಶತಮಾನದಲ್ಲಿ ಮುಂದುವರಿದ ಶ್ರೀ ತುಳಸಿರಾಮದಾಸರು ಸಾಮಾಜಿಕವಾಗಿ, ಧಾರ್ಮಿಕವಾಗಿ, ೧೯ ನೇ ಶತಮಾನದ ಆಂದೋಲನಕಾರನಾಗಿ, ಹರಿಕಾರನಾಗಿ ಗುರುತಿಸುವುದು ಒಂದು ವಿಶೇಷತೆ. ಅದನ್ನು ಹಲವಾರು ಆಯಾಮಗಳಿಂದ ಆಂದೋಲನಕಾರನೆಂದು ಹೇಳುವುದು ಸೂಕ್ತ. ಗುರುತಿಸುವುದು ಮುಖ್ಯವಾಗುತ್ತದೆ.

ಇನ್ನೇನೂ ಅನ್ಯ ಧರ್ಮದ ಸ್ವಧರ್ಮದಲ್ಲಿರುವ ಅತೀರೇಕಗಳು ಜನಸಾಮಾನ್ಯರಲ್ಲಿ ಅನೇಕ ಗೊಂದಲವನ್ನುಂಟುಮಾಡುವ ಸಂದರ್ಭ. ಮತ್ತು ಆಂಗ್ಲರು ಹೆಚ್ಚು ಹೆಚ್ಚು ಬರಲಾರಂಭಿಸಿ ಕ್ರೈಸ್ತ ಮಿಷನರಿಗಳ ಪ್ರಭಾವದಿಂದ ಆಗುತ್ತಿದ್ದ, ಮತಾಂತರಗಳನ್ನು ತಡೆಯಲು ಹಿಂದೂ ಧರ್ಮದ ಅದರಲ್ಲೂ ವೈದಿಕ ಧರ್ಮದ ಭಾಗವಾದ ವ್ರತ, ಧ್ಯಾನ, ಆಚರಣೆ, ಪೂಜೆ, ಇತ್ಯಾದಿ ಶೈವ, ವೈಷ್ಣ ಪಂಥದ ವಿಧಗಳ ಹೆಚ್ಚು ಪ್ರಭಾವ ಬೀರಿದ್ದ ಸಂದರ್ಭದಲ್ಲಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಜಾಗೃತಿ ಮೂಡಿಸುವುದು ಅನಿವಾರ್ಯತೆಯನ್ನು ಮನದಟ್ಟು ಮಾಡಿಕೊಂಡಿದ್ದರು.

ಮಹಾಪುರುಷನಾದ ಶ್ರೀ ತುಳಸಿರಾಮದಾಸರು ಹರಿದಾಸ ಸಾಹಿತ್ಯ ಮತ್ತು ಹರಿಏಕನಿಷ್ಠೆಯನ್ನು ಜನಮಾನಸಲ್ಲಿ ಬಿತ್ತಿ ಚದುರುತ್ತಿರುವ ಮನಸ್ಸುಗಳನ್ನು ಧರ್ಮದಿಂದ ದೂರವೇ ಉಳಿಯುತ್ತಿರುವ ಮನುಕುಲವನ್ನು ಒಂದುಗೂಡಿಸುವ ಸಲುವಾಗಿ ರಾಮೋತ್ಸವ ಮತ್ತು ಕೃಷ್ಣೋತ್ಸವಗಳಾದ ಉತ್ಸವಗಳ ಆಚರಣೆಗೆ ತರುವುದನ್ನು ಕಂಡುಕೊಂಡು ಧಾರ್ಮಿಕವಾಗಿಯೇ ನಡೆಸಿ ಅದರ ಮೂಲಕ ವೈದಿಕ ಮತ್ತು ವೈದಿಕೇತರರನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡುವ ಮೂಲಕ ಶ್ರೀ ತುಳಸಿರಾಮದಾಸರು ಹರಿದಾಸ ಸಾಹಿತ್ಯದಲ್ಲಿಯೂ ೧೯ ನೇ ಶತಮಾನದಲ್ಲಿ ಒಂದು ಆಂದೋಲನವನ್ನೇ ನಡೆಸಿದರು. ಎಂಬುದನ್ನು ಗುರುತಿಸುತ್ತಾ ಆ ವಿಚಾರವನ್ನು ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ ವಿಂಗಡಿಸಿಕೊಂಡು ಮುಖ್ಯವಾಗಿ ಗುರುತಿಸಲಾಗಿರುವ ಅಂಶಗಳನ್ನು ನೀಡಲಾಗಿದೆ.

(ಅ) ಇತರೆ 'ಹರಿದಾಸರ' ಮೇಲೆ ಬೀರಿದ ಪ್ರಭಾವ :-

ಶ್ರೀ ತುಳಸಿರಾಮದಾಸರು ಇತರ ದಾಸರ ಮೇಲೆ ಪ್ರಭಾವ ಬೀರಿದ್ದೂ ಕೂಡ ಒಂದು ವಿಶೇಷವಾಗಿದೆ. ಶ್ರೀ ತುಲಸಿರಾಮದಾಸರ ಪ್ರಭಾವಕ್ಕೆ ಒಳಗಾದ ವ್ಯಕ್ತಿಗಳು(ದಾಸರು) ಶ್ರೀ ತುಳಸಿರಾಮದಾಸರಂತೆ, ಅವರು ಹಾಕಿಕೊಟ್ಟ ಮಾರ್ಗದಲ್ಲಿ, ತೋರಿಸುವ ಸನ್ಮಾರ್ಗದ ಮುಕ್ತಿಯ ಕಡೆ ಸಾಗಿ, ಇಂದಿಗೂ ಅವರ ಶಿಷ್ಯರಾಗಿ ಮುಂದುವರೆಯುವುದರಲ್ಲಿದೆ. ಕಾರಣ ಅವರು ಬದುಕಿದ್ದಷ್ಟು ದಿನವು ಸಮಾಜದೊಂದಿಗೆ ಬೆರೆತು ಧಾರ್ಮಿಕ ಆಂದೋಲನವನ್ನಂಟು ಮಾಡಿ ಅರಿವು ಮೂಡಿಸುತ್ತಾ ಸಾಗಿದ್ದರು.

ದಾಸರೆಂದರೆ ಬರೀ ಹಾಡುತ್ತಾ ಬೀದಿ ಬೀದಿ ತಿರುಗುತ್ತ ಕಾಲ ಕಳೆದು ಸಾಗುವಂತದ್ದಲ್ಲ. ಎಂಬುವ ಹೊಸ ದೃಷ್ಟಿಕೋನವನ್ನು ದಾಸ ಪರಂಪರೆಗೆ ನೀಡಿ ಇದ್ದಷ್ಟು ದಿನವೂ ತನ್ನಿಂದ ಮಾಡಲಾದ, ಮಾಡಲಾಗುವ ಕಾರ್ಯವನ್ನು ನಿಯೋಜಿಸಿಕೊಂಡು ಅದರಂತೆ ಪರಿಪೂರ್ಣವಾಗಿ ಮಾಡಿ ಧರ್ಮ ಜಾಗೃತಿಯನ್ನು ಮೂಡಿಸಿ ೧೯ನೇ ಶತಮಾನದಲ್ಲೂ ದಾಸರಾಂದೋಲನವನ್ನು ಮಾಡಿ ಕೊನೆಯುಸಿರೆಳೆದರು. ಇಂತಹ ಮಹಾಪುರುಷರ ಪ್ರಭಾವ ಸಾಮಾನ್ಯವಾಗಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಹೆಚ್ಚು ಪರಿಣಾಮ ಬೀರಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ೫೦ಕ್ಕೂ ಹೆಚ್ಚು ಮಂದಿ ಶಿಷ್ಯರನ್ನು ಹುಟ್ಟುಹಾಕಿ ಶಿಷ್ಯ ಪರಂಪರೆ ಮತ್ತು ಪ್ರಶಿಷ್ಯ ಪರಂಪರೆಯನ್ನು ಬೆಳೆಸಿರುವುದಕ್ಕೆ ಸಾಕ್ಷಿಯಾಗಿ, ಇಂದಿಗೂ ಅವರ ಹೆಸರು ಪರಿಣಾಮ ಬೀರಿರುವುದು ಅವರ ಮೂಲಕ ಗುರುತಿಸಬಹುದಾಗಿದೆ.

ಶ್ರೀ ತುಳಸಿರಾಮದಾಸರನ್ನು ಕುರಿತು ಶಿಷ್ಯ ಪರಂಪರೆಯು ೪೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಇವರು ಬೀರಿದ್ದ ಪ್ರಭಾವಕ್ಕೂ ಇವರಿಗಿದ್ದ ಶಿಷ್ಯ ಪರಂಪರೆಗೂ ದ್ಯೋತಕವಾಗಿದೆ. ಕನ್ನಡದಲ್ಲೇ ३೦ಕ್ಕೂ ಹೆಚ್ಚು ಸ್ತುತಿಗಳು ದೊರಕುತ್ತವೆ. ಪರಕಾಲ ಮಠ ವೇದಾಂತ ಶಿವರಾಮ ಶಾಸ್ತ್ರೀ(ಅದ್ವೈತ ಪರಂಪರೆ ಶಂಕರದಾಸ) ತೊಪ್ಪಲ್ ವೆಂಕಟಾಚಾರ್ಯ (ಶ್ರೀ ವೈಷ್ಣವ ಗಣ್ಯರು) ಶ್ರೀ ತುಳಸಿರಾಮದಾಸರ ಹೆಸರನ್ನೇ ಅಂಕಿತವಾಗಿಸಿಕೊಂಡಿದ್ದ ಚನ್ನಪಟ್ಟಣದ ಅಹೋಬಲದಾಸರೆಂಬ ಇನ್ನೊಬ್ಬ ಕೀರ್ತನಕಾರರು ಇವರ ಪರಂಪರೆಯನ್ನು ಮುಂದುವರೆಸಿದ್ದಲ್ಲದೆ ತಮ್ಮ ಶಿಷ್ಯ ಪರಂಪರೆಯನ್ನು ಬೆಳೆಸಿದ ಮಳಿಗೆ ರಂಗಸ್ವಾಮಿದಾಸರು ಮತ್ತು ಇವರನ್ನು ಕುರಿತು ಹರಿಕಥೆಯನ್ನು ಕಟ್ಟಿದ ಕಾಹಾಳ ಭೈರವ ದಾಸರಂತಹ ಬಲಿಷ್ಠ ಪರಂಪರೆಯನ್ನು ಬೆಳೆಸಿದ್ದ ಪ್ರಮುಖರ ಮೇಲೆ ಶ್ರೀ ತುಳಸಿರಾಮದಾಸರ ಪ್ರಭಾವವಿತ್ತು ಎಂಬುದರಲ್ಲಿ ಗುರುತಿಸಬಹುದು.

ಶ್ರೀ ತುಳಸಿರಾಮದಾಸರ ಮೇಲೆ ಪ್ರಭಾವ :-

ತೆಲುಗು ದಾಸ ಸಾಹಿತ್ಯದಲ್ಲಿ ಅನ್ನಮಯ್ಯನೆಂಬ ಕೀರ್ತನಕಾರ, ಕನ್ನಡದಲ್ಲಿದ್ದ ಶ್ರೀಪಾದರಾಯರಂತೆ, ವ್ಯಾಸರಾಯರಂತೆ ಕೀರ್ತನೆಗಳನ್ನು ರಚಿಸುವ ಹಾಡುವ ಕೀರ್ತನಕಾರ, ಸು, ೧೫ನೇ ಶತಮಾನದ ಪ್ರಾರಂಭದಿಂದ ೧೬ ನೇ ಶತಮಾನದ ಆರಂಭದಲ್ಲಿ ಜೀವಿಸಿದ್ದ. ತೆಲುಗು ದಾಸಸಾಹಿತ್ಯವನ್ನು ಅನ್ನಮಯ್ಯನಿಂದಲೇ ಗುರುತಿಸುತ್ತದೆ. ತೆಲುಗು ದಾಸ ಸಾಹಿತ್ಯ

ಅನ್ನಮಯ್ಯನಿಗೆ ಶ್ರೀ ಪುರಂದರದಾಸರ ಪ್ರಭಾವ, ಪುರಂದರದಾಸರ ಮೇಲೆ ಅನ್ನಮಯ್ಯನ ಪ್ರಭಾವವಿದ್ದಂತೆ, ಜಗನ್ನಾಥದಾಸ, ಗೋಪಾಲದಾಸ, ಮೋಹನದಾಸ ಮೊದಲಾದ ಕೀರ್ತನಕಾರರಿಗೆ ದಾಸ ಪರಂಪರೆಯನ್ನು ಮುಂದುವರೆಸಲು ಇವರಿಗೆ ಗುರುವಾಗಿ ವಿಜಯದಾಸರು ಕಾರಣರಾದರು. ಪುರಂದರದಾಸರನ್ನು ಪರೋಕ್ಷವಾಗಿ ವಿಜಯದಾಸರು ಗುರುವೆಂದು ಸ್ವೀಕರಿಸಿ ಅನೇಕ ಕೀರ್ತನೆಗಳನ್ನು ರಚಿಸಿ ಹರಿದಾಸರನೇಕರಿಗೆ ದೀಕ್ಷೆ ನೀಡಿದರು.

ಜಗನ್ನಾಥ ದಾಸರು ವಿಜಯದಾಸರ ಮುಖ್ಯ ಶಿಷ್ಯರಾಗಿ ಕಂಡು ಬಂದು ಹಲವು ಬಾರಿ ತಿರುಪತಿ ಯಾತ್ರೆ ಕೈಗೊಂಡು ಶ್ರೀ ಹರಿಯನ್ನು ಸ್ತುತಿಸಿದ್ದಾರೆ. ಅನ್ನಮದಾಸರ ಪ್ರಭಾವ ಈ ಜಗನ್ನಾತದಾಸರ ಕೀರ್ತನೆಗಳಲ್ಲಿರುವುದು ಅನಂತರ ಬಂದಂತಹ (೧೭೬೭-೧೮೪೭) ತ್ಯಾಗರಾಜರು ತಮ್ಮ ತಂದೆ ತಾಯಿಗಳ ರಾಮಾಬ್ರಹ್ಮಯು ತಾಯಿ ಸೀತಮ್ಮ ಎಂಬ ನಂಬಿಕೆಯನ್ನು "ಸೀತಮ್ಮ ಮಾಯಮ್ಮ ಶ್ರೀರಾಮುಡು ಮಾಕುತಂಡ್ರಿ" ಎಂಬ ಕೃತಿಯಲ್ಲಿ ತಂದು ಕರೆದಿರುವುದು ಮುಖ್ಯ.

ತ್ಯಾಗರಾಜರ ಇಷ್ಟದೇವ ಶ್ರೀರಾಮ. ವಿದ್ವಾನ್ ಶೊಂಠಿ ವೆಂಕಟರಮಣಯ್ಯರ ಬಳಿ ಸಂಗೀತಾಭ್ಯಾಸ ಮಾಡಿ ಶ್ರೀರಾಮನನ್ನು "ಬಾಲಕನ ಕಮಮಯಚೇಲ ಸುಜನ ಪರಿಪಾಲ, ಘನಾಘನಾನೀಲ ವನಮಾಲೀಕಾಭರಣ ರಾಜೀವನೇತ್ರ ಜಲಧಿ ಗಂಭೀರ, ಅತೀಲಾವಣ್ಯ, ಯೋಗೀಂದ್ರ ಸುಹೃದ್ಭಾವಿತ' ಎಂದು ಸ್ತುತಿಸಿದ್ದಾರೆ. ಶ್ರೀ ತುಳಸಿರಾಮದಾಸರು ಅವರು ಸ್ತುತಿಸಿರುವ ರೀತಿಯಲ್ಲಿಯೇ ಪದಗಳ ಬಳಕೆಯಾಗಿರುವುದರಿಂದ ಅರ್ಧದಷ್ಟು ಕೃತಿ ರಾಮನ ನಾಮಾವಳಿಗಳಿಂದ ಕೂಡಿರುತ್ತದೆ. ಎಂದು ಗುರುತಿಸಿ ಸಂಗೀತ, ಸಾಹಿತ್ಯ ಎರಡರ ದೃಷ್ಟಿಯಿಂದಲೂ ತ್ಯಾಗರಾಜರು ಅನ್ನಮಾಚಾರ್ಯರನ್ನು, ಪುರಂದರದಾಸರು ಮತ್ತು ರಾಮಾದಾಸನನ್ನು ಅನುಸರಿಸಿದ ಸಂದರ್ಭಗಳು ಇವೆಯೆನ್ನಬಹುದು.

ಈ ನಾಲ್ಕು ಜನರ ಪ್ರಭಾವ ಶ್ರೀ ತುಳಸಿರಾಮದಾಸರ ಸಾಹಿತ್ಯದ ಮೇಲೆ ಬೀರಿರಬಹುದಾದ ಸಾಧ್ಯತೆಗಳು ಇವೆ. ಶ್ರೀ ತುಳಸಿರಾಮದಾಸ ಸ್ತುತಿಸಿರುವ ಮುಕ್ಕಾಲು ಭಾಗ ರಾಮನನ್ನು ಕುರಿತ್ತದ್ದಾಗಿದೆ. ಮತ್ತು ತ್ಯಾಗರಾಜರಂತೆ ಅವರು ವರ್ಣಿಸಿರುವ ವರ್ಣನೆಗಳನ್ನು ಶ್ರೀ ತುಳಸಿರಾಮದಾಸರ ಸಾಹಿತ್ಯದಲ್ಲಿಯೂ ಗುರುತಿಸಬಹುದಾಗಿದೆ. ಆದ್ದರಿಂದ ಇವರೆಲ್ಲರ ಪ್ರಭಾವಕ್ಕಿಂತಲೂ ಅನ್ನಮಯ್ಯನ ಮತ್ತು ತ್ಯಾರಾಜರ ಪ್ರಭಾವನ್ನು ಶ್ರೀ ತುಳಸಿರಾಮದಾಸರ ಕೀರ್ತನೆಗಳಲ್ಲಿ ಗುರುತಿಸಬಹುದಾದ ಸಾಧ್ಯತೆಗಳು ಇವೆ.

(ಅ) ದಾಸರ ಮೇಲೆ ಪ್ರಭಾವ :–

ಸಾಮಾನ್ಯವಾಗಿ ದಾಸರು ಇತರ ದಾಸರ ಪ್ರಭಾವದಿಂದ ಪ್ರೇರಿತರಾಗಿ ಪರಂಪರೆ ಬೆಳೆದು ಬರುವುದು ಸಹಜವಾದ ಸಂಗತಿ. ಶ್ರೀ ತುಳಸಿರಾಮದಾಸರು ತಮ್ಮ ಪ್ರಭಾವವನ್ನು ಇತರ ಹರಿದಾಸರು ಶ್ರೀ ತುಳಸಿರಾಮದಾಸರನ್ನು ಸ್ತುತಿಸಿ, ಹಾಡಿ, ಹೊಗಳಿರಿವುದು ಬಿರುದಾವಳಿಗಳನ್ನು ಮಾಡಿರುವುದು ಅನೇಕ ನಾಮಾವಳಿಗಳಿಂದ ತಿಳಿದುಬರುತ್ತದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಇವರ ಪ್ರಭಾವವು ಹೆಚ್ಚು ದಾಸರ ಮೇಲೆ ಇತ್ತು.

ದಾಸರ ಪ್ರಭಾವಕ್ಕೆ ಒಳಗಾದ ಶಿಷ್ಯ ದಾಸರುಗಳು ತಮ್ಮ ಇಷ್ಟ ಗುರು ಶ್ರೀ ತುಳಸಿರಾಮದಾಸರ ಬಗ್ಗೆ ಅನೇಕ ಕೀರ್ತನೆಗಳನ್ನು, ಕೃತಿಗಳನ್ನು ರಚಿಸಿರುವುದು ತಿಳಿಯುತ್ತದೆ.

ಚನ್ನಪಟ್ಟಣದ ಅಹೋಬಲದಾಸರು ಇವರು ಶ್ರೀ ತುಳಸಿರಾಮದಾಸರ ಪ್ರಭಾವಕ್ಕೆ ಒಳಗಾಗಿದ್ದರು. ಅವರ ಮೇಲಿನ ಭಕ್ತಿಯಿಂದ ೧೩೦ಕ್ಕೂ ಅಧಿಕ ಕೀರ್ತನೆಗಳನ್ನು ಬರೆದು 'ವೇದಾಂತ ಸಿದ್ಧಾಂತ' ಎಂಬ ಕೃತಿಗಳನ್ನು ಬರೆದು ಶ್ರೀ ತುಳಸಿರಾಮದಾಸರ ಹೆಸರನ್ನೇ ಅಂಕಿತವಾಗಿರಿಸಿಕೊಂಡು 'ತುಳಸಿದಾಸ' ನೆಂದು ಕೀರ್ತನೆಗಳನ್ನು ರಚಿಸಿರುವುದು ವಿಶೇಷ ಇವರು ಶ್ರೀ ತುಳಸಿರಾಮದಾಸರ ಪ್ರಮುಖ ದಾಸರಾಗಿದ್ದು ಅವರು ಅನುಸರಿಸಿದ ಮಾರ್ಗವನ್ನು ಅನುಸರಿಸಿ ನಡೆದವರು.

"ದೇಶಿಕೊತ್ತಮವಾದ ನಿಜಗುರುದಾಸ ತುಳಸಿರಾಮನಾ
ಶೇಷಗಿರಿಯಂದ್ಯೆದಿ ಬಂದಿಹ ಸರ್ವತಂತ್ರ ಸ್ವತಂತ್ರನಾ'

'ಧರಣಿ ಮದ್ದುಗ್ಗರು ತುಲಸಿರಾಮ
ದಾಸರಪ್ಪಣೆಯ ಹಲಾತನ
ಚರಣ ಸೇವೆಯೊಳಿರುತಿಹುದೆ ನಿಜ

ಪರಮ ಪದವಿದು ಸತ್ಯ ನಿತ್ಯವು'

'ಈ ಮಹೀ ಪರಕಾಲ ಶಠಕೋಪದೇಶಿಕ
ಸ್ವಾಮಿಗಳೆಲ್ಲರು ಪ್ರೇಮಗೊಳ್ಳತಲೀ
ರಾಮಕೃಷ್ಣಯಂಬೋ ನಾಮವುಚ್ಚರಿಸೆಂದು
ಭೂಮಿಯೆಳು ಭೋಧಿಸುವ ಮಹಾ ನಿ
ಸ್ಸೀಮನಾದ ಮಹಾನುಭಾವಗೆ ಹರಿದೇವನಗೆ ವ
ರಮೀವಗೆ ನಿಜಸೇವಕರ ಸತ್ಕುಪಾಕಟಾಕ್ಷಗೆ'

"ಭೇದವಾದಿಗಳೀಗ ನಾದಬ್ರಹ್ಮವೇ ಸತ್ಯ
ವೇದ ಶಾಸ್ತ್ರಗಳೆಲ್ಲ ಒಡನೆ ಶೋಭಿಸುತ್ತಾ
ನಾದ ಬ್ರಹ್ಮನೆಯಾಗಿ ನಟಿಸುತ್ತಿರುವ ನಿತ್ಯ
ಪಾದವೆನ್ನರೊ ಗುರುವು ತುಲಸಿರಾಮರಾಗಿಯೂ
ಬಂದ ಸ್ವಾಮಿಗೆ ಸುರಧಾರೆಗೆ ಸರಿಧೂಮಗೆ
ಕರ ಚಕ್ರಧರ ಪರವಾದಿ ಚಂದ್ರಗೆ"

ಈ ಕೀರ್ತನೆಗಳಿಂದ ತಮ್ಮ ಗುರುವಾದ ತುಳಸಿರಾಮದಾಸರ ಪ್ರಭಾವವು ಅಹೋಬಲ ದಾಸರ ಮೇಲೆ ಹೇಗೆ ತೀವ್ರವಾಗಿತ್ತು. ಎಂಬುದನ್ನು ತಿಳಿಯುತ್ತದೆ. ಹಲವು ವರ್ಣನೆಗಳನ್ನು ಮಾಡುವ ಮೂಲಕ ಅವರ ಮೇಲೆ ಅದಮ್ಯ ಭಕ್ತಿಯನ್ನು ಎಷ್ಟರಮಟ್ಟಿಗೆ ಹೊಂದಿದ್ದರೆಂಬ ಮಾಹಿತಿ ಇಂತಹ ಸಾಲುಗಳಿಂದಲೂ ದೊರೆಯುತ್ತದೆ.

ಸಾಹಿತ್ಯದ ಮೇಲೂ ಗುರು ತುಳಸಿರಾಮದಾಸರ ಪ್ರಭಾವ ಎಲ್ಲಾ ದಾಸರಲ್ಲಿ ಬೀರಿತ್ತು ಎಂಬುದನ್ನು ಗುರುತಿಸಬಹುದು. ಮದ್ಗುರು ತುಳಸಿರಾಮದಾಸ ಗುರುವಿನಲ್ಲೇ ದೈವವನ್ನು ಕಂಡ ಗುರುವೇ ಸರ್ವಸ್ವ ಎಂಬ ಹಂಬಲವನ್ನು ಕಾಣಲಾಗುತ್ತದೆ.

ಶ್ರೀ ತೊಪ್ಪಲ್ ವೆಂಕಟಾಚಾರ್ಯರ ಮೇಲಿನ ಪ್ರಭಾವವನ್ನು ನೋಡಬಹುದು. ತೊಪ್ಪಲ್ ವೆಂಕಟಾಚಾರ್ಯರು ಶ್ರೀ ತುಳಸಿರಾಮದಾಸರನ್ನು ಸ್ತುತಿಸಿ ರಚಿಸಿರುವ ಕೀರ್ತನೆಗಳಿವೆ. ಗುರು ದೈವದ ಸ್ಥಾನದಲ್ಲಿರಿಸಿ ನೋಡಿದ್ದಾರೆ. ಶ್ರೀವೈಷ್ಣವ ತತ್ವಕ್ಕೆ ಅನುಗುಣವಾದ ಕೀರ್ತನೆಗಳಿವೆ. ಮುಜರಾಯಿ ಇಲಾಖೆಯಲ್ಲಿ ಆಗಮ ಪಂಡಿತರಾಗಿದ್ದು ಆನಂತರ ಬೆಂಗಳೂರಿನ ಮೆಜೆಸ್ಟಿಕ್‌ನ ತುಳಸಿದಾಸ ತೋಟದ

ದೇವಾಲಯಕ್ಕೆ ಶ್ರೀರಾಮ ಶ್ರೀಕೃಷ್ಣರ ವಿಗ್ರಹಗಳನ್ನು ಶ್ರೀ ತುಳಸಿರಾಮದಾಸಂರು ನೀಡಿದ್ದಾರೆಂದು ಆ ಮೂರ್ತಿಗಳನ್ನು ಪೂಜಿಸಲು ವೆಂಕಟಾಚಾರ್ಯರನ್ನು ನೇಮಿಸಿದ್ದರು. ಮಾಹಿತಿಗಳು ದೊರಕುತ್ತವೆ. ಈ ವೆಂಕಟಾಚಾರ್ಯರು ತುಳಸಿರಾಮದಾಸರನ್ನು ಕುರಿತು ೨೬ ನುಡಿಗಳ ಶ್ಲೀಕವನ್ನು ರಚಿಸಿ ಮಂಗಳ ಸ್ತುತಿಯ ಕೀರ್ತನೆಗಳನ್ನು ರಚಿಸಿದ್ದಾರೆ ದಾಸರ ಅಂತ್ಯಕಾಲದವರೆಗು ಸಂಪರ್ಕದಲ್ಲಿ ಇದ್ದವರೆಂದು ತಿಳಿಯುತ್ತದೆ.

'ಮಂಗಳಂ ಶ್ರೀ ನೃಹರಿಯೇ ಶ್ರೀನಿವಾಸಾಯ ಮಂಗಳಂ'
ಮಂಗಳಂ ರಘುನಾಥಾಯ ಶ್ರೀಕೃಷ್ಣಯಾಸ್ಸು ಮಂಗಳಂ

ದಾಸರ ಪ್ರಭಾವ ವೆಂಕಟಚಾರ್ಯರ ಮೇಲೆ ಆಗಿತ್ತೆಂಬುದಕ್ಕೆ ನಿದರ್ಶನದಂತಿದೆ ಈ ಸಾಲುಗಳು:

'ಅಹೋಬಲ ಶ್ರೀ ಶಠಂ ದೇಶಿಕೇಂದ್ರ ಕಟಾಕ್ಷತ್ರ
ಅಷ್ಟಚಕ್ರಾದಿ ದೀಕ್ಷಾಯ ರಾಮದಾಸಾಯ ಮಂಗಳಂ'

ಗುರುವಿನ ಗುರು, ಅರಿವು,ಮತ್ತು ಹತ್ತಿರದ ಪ್ರಭಾವವಿದೆ

ಶ್ಲೋ॥ ಮಂಗಳಂ ತುಳಸೀರಾಮ ಮಂಗಳಂ ವಿಜಿತೇಂದ್ರಿಯ
ಮಂಗಳಂ ತ್ರಿಗುಣಾತೀತ ಮಂಗಳಂಚ ಭವಂತುತೇ
ಮಂಗಳಂ ಚೇತನೋದ್ಧಾರ ಕಲ್ಯಾಣ ಪಮುಷೇಸದಾ
ಬುಧಾರಾಮನ ವಿಖ್ಯಾತ ಸಂತತಂ ತವಮಂಗಳಂ

ತುಳಸೀರಾಮದಾಸರ ಬಗ್ಗೆ ಇರುವ ಭಕ್ತಿ ಭಾವವೂ ಇದೆ. ಅದು ಅದಮ್ಯವಾಗಿದೆ. ಸಂಸ್ಕೃತ ಪಾಂಡಿತ್ಯದ ಪ್ರೌಢಿಮೆಯನ್ನು ಗುರುತಿಸಬಹುದಾಗಿದೆ. ದಾಸರ ಪ್ರಭಾವದಂತೆ ಶ್ಲೋಕದಲ್ಲಿ ಸಂಸ್ಕೃತದ ಬಿಗಿಬಂಧದಿಂದ ಕೂಡಿದೆ.

ವೇದಾಂತ ಶಿವರಾಮ ಶಾಸ್ತ್ರೀಗಳ ಸ್ತುತಿ :–

'ಶಂಕರದಾಸ' ಎಂಬ ಅಂಕಿತದಿಂದ ತಮ್ಮ ಕೀರ್ತನೆಗಳನ್ನು ಬರೆದಿದ್ದಾರೆ. ವೇದಾಂತ ಪ್ರವಚಕ, ಪ್ರಸಿದ್ಧ ಅದ್ವೈತಿ ಸಿದ್ಧಾಂತಕ ತುಳಸೀ ರಾಮದಾಸರ ನಿಕಟವರ್ತಿ ತುಳಸೀರಾಮದಾಸರನ್ನು ಹಲವು ಬಾರಿ ಸಂದರ್ಶಿಸಿದ್ದರೆಂಬ ಮಾಹಿತಿ ದೊರಕುತ್ತದೆ.

'ಶ್ರೀ ವಾಣೀ ವಿಭವ ಪ್ರಭಾವ ವಿಲಸತ್ಸಮ್ರಾಟ್ಕಿರೀಟೋಲ್ಲ
ಸನ್ನಾತರತ್ನ ಮರೀಚಿ ದೀಪಕಲಿಕಾ ನೀರಾಜಿತಾಂಘ್ರಿದ್ವಯಃ
ಮಲಸ್ವಸ್ವಾಂತ ಪುಷ್ಪಂಧಯೋಸೀತಾನಾಥ ಪಪಾಬ್ಜಲೀನವ
ಜೀಯಾತ್ಸಧೃದಯೈಕ ತುಲಸೀರಾಮಾಖ್ಯ ಯೋಗೀಶ್ವರ"

ತುಳಸೀರಾಮದಾಸರಿಂದ ವೇದಾಂತ ಜ್ಞಾನವನ್ನು ಪಡೆದ ಬಗ್ಗೆ ಇರುವ ಈ ಸ್ತುತಿ ಮಂಗಳ ಶಾಸನದಲ್ಲಿದ್ದು, ಸಂಸ್ಕೃತ ಭಾಷೆಯಲ್ಲಿದೆ. ಹಾಗೂ ಚೌಪದಿಯಲ್ಲಿದ್ದ ಭಾಮಿನಿಷಟ್ಪದಿಯ ಬಂಧದಲ್ಲಿ ಕಂಡುಬರುವ ಸ್ತುತಿಯೊಂದು ಈ ರೀತಿ ಇದೆ.

'ರಾಮ ಬೇರಿನ್ನಲ್ಲ ತುಲಸೀ
ರಾಮನೇ ಶ್ರೀರಾಮನೆಂಬ ಭಿ
ರಾಮಮಾನನಸರಾಗಿ ಬಳಿಕೀ ರಾಮಸೇವೆಯೋಳು
ಪ್ರೇಮ ಪಿಡಿದವರೆಲ್ಲರಾತ್ಮಾ
ರಾಮರಾದುದ ತಿಳಿದು ಯೀ ಶಿವ
ರಾಮ ಬಂದನು ಪೊರೆಯೋ ತುಳಸೀರಾಮಾದಾಸಾರ್ಯ'

ದಾಸರನ್ನು ಭಕ್ತಿಭಾವದಿಂದ ಸ್ತುತಿಸಿರುವುದು ಕಂಡುಬರುತ್ತದೆ. ಹೀಗೆ ದಾಸರ ಪ್ರಭಾವ ವೇದಾಂತ ಶಿವರಾಮಶಾಸ್ತ್ರಿಗಳ ಮೇಲೆ ಪರಿಣಾಮ ಬೀರಿತ್ತು ಎನ್ನವದರಲ್ಲಿ ಯಾವ ಸಂಶಯವು ಇಲ್ಲ.

ದರಿಶಕುಪ್ಪದ ವೆಂಕಟದಾಸರಮೇಲೆ ತುಳಸೀರಾಮದಾಸರ ಪ್ರಭಾವ.. ಇವರು ದರಿಶಕುಪ್ಪದಲ್ಲಿ ಶ್ರೀ ತುಳಸೀರಾಮದಾಸರೊಂದಿಗೆ ಇದ್ದು ಸೇವೆಯನ್ನು ಮಾಡಿ ಪ್ರಿಯ ಶಿಷ್ಯರೆನಿಸಿಕೊಂಡು ದಾಸರಿಗೆ ಹತ್ತಿರವಾಗಿದ್ದರೆಂದು 'ಹರಿಕಥಾ'ಕೃತಿ ದಾಖಲಿಸುತ್ತದೆ. ಇವರು ರಂಗಸ್ವಾಮಿ ದಾಸರ ಮೂಲಕ ದಾಸರ ಕೃಪೆಗೆ ಪಾತ್ರರಾಗಿದ್ದರು ಎನ್ನುವುದನ್ನು ಸ್ಮರಿಸಬಹುದು.

'ದರಿಶಕುಪ್ಪೆಯೊಳ್ ನಿಂದು ದರುಶನಕೊಟ್ಟು ಬಂದು
ಅರುಹನುಗ್ರಹವೆಂದು ಗುರುವೆ ಮಂಗಳಂಯೆಂದು'

ಎಂದು ಹೇಳುವಲ್ಲಿ, ದರಿಶಕುಪ್ಪದಲ್ಲಿದ್ದು ದರ್ಶನ ನೀಡಿದರು. ಎಂಬ ಸಂಗತಿಯನ್ನು ತಿಳಿಸುತ್ತಾ

'ಮಂಗಳಕರ ಗುರುಗಳೆಂದೂ
ಮಹಿಮೆಯಿಂದ ತಿಳಿಸಬೇಕೆಂದೂ
ರಂಗಸ್ವಾಮಿದಾಸರು ಬಂದು
ರಮ್ಯವಾಗಿ ಭೋಧಿಸಿದರಿಂದು'

ರಂಗದಾಸರ ಮೂಲಕ ದಾಸನಾದುದನ್ನು ಪ್ರತಿಪಾದಿಸುತ್ತದೆ.

'ದರಿಶಕುಪ್ಪನಗರಿಧಾಮಾ
ದರುಶನ ಕೊಡು ಶ್ರೀರಾಮಾ
ಅರುಹಿಬೇಡುವೆ ಸುಗುಣ ಪ್ರೇಮ
ಗುರುವೇ ಶ್ರೀತುಲಸೀರಾಮ'

ದೈವಸಾಕ್ಷಾತ್ಕಾರದ ಈ ವೈಷ್ಣವ ನಿಷ್ಠೆ ಎದ್ದು ಕಾಣುತ್ತದೆ. ಶ್ರೀ ತುಳಸೀರಾಮದಾಸರ ಪ್ರಭಾವ ಎಷ್ಟೆಂಬುದನ್ನು ಈ ಮೇಲಿನ ಸ್ತುತಿಯಿಂದ ತಿಳಿಯುತ್ತದೆ.

ಮುಳುಬಾಗಿಲು ರಂಗಸ್ವಾಮಿದಾಸರು :-

'ಶ್ರೀ ಶಠಗೋಪದಯಪಾತ್ರಂ ಶ್ರೀ ಮದ್ಗುರು ತುಳಸೀರಾಮಂ' ಎಂಬ ಕೃತಿಯನ್ನು ಬರೆದು ಪ್ರಭಾವಿ ಶಿಷ್ಯರಾಗಿ ದಾಸರಿಗೆ ಇದ್ದವರು. ನಂತರ ಗುರು ಪರಂಪರೆಯನ್ನು ಮುಂದುವರೆಸಿಕೊಂಡು ಬಂದರಲ್ಲದೆ ೭೦ ಕೀರ್ತನೆಗಳಲ್ಲಿ ೧೫ ಕನ್ನಡ ಕೀರ್ತನೆಗಳನ್ನು ರಚಿಸಿ ತುಳಸೀರಾಮದಾಸರನ್ನೇ ಕುರಿತು ೪ ಕೃತಿಗಳನ್ನು ರಚಿಸುವಷ್ಟು ಶ್ರೀ ತುಳಸೀರಾಮದಾಸರು ರಂಗಸ್ವಾಮಿದಾಸರ ಮೇಲೆ ಪ್ರಭಾವ ಬೀರಿದ್ದರು.

'ಹರಿಕಥಾ ಸಲ್ಲಾಮು ದಾರಕೃಷ್ಣರಾಮೋತ್ಸವ
ಸೂರಿಜನ ಸಂಶೋಭಿತ ಪಾರಾವಾರ ಧೀರಾ ಯಶ'

ಎಂಬಲ್ಲಿ ಶ್ರೀ ತುಳಸೀರಾಮದಾಸರಂತೆ ದ್ವಿಪದಿಯನ್ನು ಅನುಸರಿಸಿರುವುದು, ಮತ್ತು ತೆಲುಗಿನ ಭಾಷೆಯಲ್ಲಿರುವುದು ಕಂಡುಬರುತ್ತದೆ. ಅಲ್ಲದೆ ಶ್ರೀ ತುಳಸೀರಾಮದಾಸರು ರಾಮೋತ್ಸವಕ್ಕೆ ಸುತ್ತಾಡಿದ ವಿಚಾರಗಳು ಪ್ರಭಾವ ಬೀರಿದೆ.

'ಭಕ್ತಿ ಜ್ಞಾನ ವೈರಾಗ್ಯ ಸುಭೋಧಂ
ಭಕ್ತ ಪ್ರಿಯಂ ನಿಜದಾಸ ಶ್ರೇಷ್ಠ'

'ಮಂಗಳಕರಗಳ ತುಲಸೀ ಹಾರಂ
ರಂಗಸ್ವಾಮಿ ದಾಸ ಹೃದಯ ನಿವೇಶಂ'

ಎಂಬಲ್ಲಿಯೂ ಭಕ್ತಿ, ಜ್ಞಾನ, ವೈರಾಗ್ಯ, ನಿಜದಾಸನಿಗೆ ಅತಿ ಮುಖ್ಯವೆಂಬುದನ್ನು ಆಶಯ ಹೊತ್ತು ದೈವವನ್ನು ಶ್ರೀ ತುಳಸೀರಾಮದಾಸರಂತೆ ಕಾಣುತ್ತದೆ. ಇಷ್ಟೆ ಅಲ್ಲದೆ ಇತರ ಹರಿದಾಸರಾದ ಅನೇಕ ದಾಸರ ಮೇಲೆ ಪ್ರಭಾವವನ್ನು ಈ ರೀತಿ ಪಟ್ಟಿಮಾಡಲಾಗಿದೆ "ದರಿಶಕುಪ್ಪದ ಕೃಷ್ಣದಾಸ, ಪರಾವಸ್ತುಜೀಯರ್, ಸೂರಿದಾಸ, ಅಲಂಗೂರು ಸುಬ್ಬಚಾರ್ಯ, ಯಲದೂರು ಶ್ಯಾದಾಸ, ಮುಳಬಾಗಿಲು ಪಂಚಾನನಂ, ಮದರಾಸು ಕವಿವರ, ಪಂಡಿತವರ, ಸಿಂಗಾಚಾರ್ಯ, ಕೋಲಾರದ ಚಂಚುದಾಸ, ಬೆಂಗಳೂರು ದಂಡಿನ ಸಂಗೀತಂ, ವೆಂಕಟ್ರಾಮದಾಸ, ಚೌಡನಪಲ್ಲೆ ಶ್ರೀನಿವಾಸದಾಸ, ಬಾರಮಾರ್ಗ ಶ್ರೀನಿವಾಸದಾಸ, ಕಾದಾಳ ಭೈರವ ಕವೀಶ್ವರ, ನರಸಿಂಹದಾಸ, ಬೆಂಗಳೂರು ಜಗನ್ನಾಥದಾಸ, ಮುಳಬಾಗಿಲು, ರಾಮಯ್ಯ, ವಡ್ಡಪಲ್ಲಿ ಶ್ರೀನಿವಾಸದಾಸ, ಉಪ್ಪರಂಶ್ರೀನಿವಾಸದಾಸ, ಇನ್ನೂ ಮೊದಲಾದ ಹರಿದಾಸರುಗಳ ಮೇಲೆ ಶ್ರೀ ತುಳಸಿರಾಮದಾಸರ ಪ್ರಭಾವವಾಗಿರುವುದನ್ನು ಕಾಣಬಹುದು.

ಆದರೆ ಈ ಎಲ್ಲಾ ದಾಸರ ಮಾಹಿತಿಗಳು, ವಿವರಗಳು, ಕೀರ್ತನೆಗಳು ದೊರೆತರೆ ವಿಶಿಷ್ಟಾದ್ವೈತಕ್ಕೆ ಹೆಚ್ಚಿನ ಹರಿದಾಸ ಪರಂಪರೆಯ ಸಾಹಿತ್ಯ ಭಂಡಾರವೇ ದಾಸ ಸಾಹಿತ್ಯವಾಗಿರುತ್ತದೆ ಎಂಬುದರಲ್ಲಿ ಭಿನ್ನ ಮಾತಿಲ್ಲ.

(ಆ) ಸಾಮಾಜಿಕವಾಗಿ :-

ತುಳಸಿರಾಮದಾಸರು ಹರಿದಾಸರಾಗಿ ವೈದಿಕ ಧರ್ಮದ ಹಿನ್ನೆಲೆಯಲ್ಲಿಯೂ ಬಂದಿದ್ದರೂ ಕೇವಲ ಭಜನೆ, ಕೀರ್ತನೆ, ಧ್ಯಾನ ಅಷ್ಟರಲ್ಲೇ ಅವರು ತೃಪ್ತಿಯನ್ನು ಕಾಣುವುದರಲ್ಲಿ ತಲ್ಲೀನರಾಗಲಿಲ್ಲ. ತನ್ನ ಜ್ಞಾನಕ್ಕೆ ನಿಲುಕಿದ ವಿಚಾರಗಳನ್ನು ತಿಳಿಸುತ್ತಾ ಜನರನ್ನು ಒಟ್ಟುಗೂಡಿಸುವ ಸಮಾಜದೊಂದಿಗೆ ಬೆರೆಯುವ ಮನಸ್ಸನ್ನು ಹೊಂದಿದ್ದವರು. 'ಹರಿಏಕನಿಷ್ಠೆ' ಯನ್ನು ಸಾಮಾನ್ಯ ಜನರಲ್ಲಿಯೂ ಬಿತ್ತುವುದರ ಮೂಲಕ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ತನ್ನನ್ನು ತೊಡಗಿಸಿಕೊಂಡವರು. ಸಾಮಾಜಿಕವಾಗಿ ಒಂದು ಆಂದೋಲನವನ್ನೇ ಉಂಟುಮಾಡಿ ಧರ್ಮ ಜಾಗೃತಿಯನ್ನು ಮೂಡಿಸಿದವರು. ೧೯ನೇ ಶತಮಾನದಲ್ಲಿಯೂ ಆಂಗ್ಲರ ಆಕ್ರಮಣದಿಂದಾಗುತ್ತಿದ್ದ ಧರ್ಮದ ಹಿನ್ನೆಲೆಯಲ್ಲಿ ಧರ್ಮ ಜಾಗೃತಿಯನ್ನು ಸಾಮಾಜಿಕವಾಗಿ ಮೂಡಿಸಿ ಸಮಾಜಮುಖಿಯಾದವರು.

ವಿಶಿಷ್ಟಾದ್ವೈತದ ತತ್ವವನ್ನು ಜನಮಾನಸದಲ್ಲಿ ಅನುಸಂಧಾನಗೊಳಿಸಿ ಧರ್ಮದ ಉಳಿವು ಮತ್ತು ಸಮಾಜದ ಉನ್ನತಿಗಾಗಿ ಶ್ರಮಿಸಿದವರು.

ಇವರು ದಕ್ಷಿಣ ಕರ್ನಾಟಕದ ಕೆಲವು ಭಾಗದಲ್ಲಿ ಸಂಚರಿಸಿದ್ದು ಗಮನಾರ್ಹ. ಸಂಚರಿಸಿದ ಕಡೆಯೆಲ್ಲೆಲ್ಲಾ ಭಜನಾ ಮಂದಿರಗಳನ್ನು ನಿರ್ಮಿಸಿ ಮಠಗಳನ್ನು ಸ್ಥಾಪಿಸಿದ್ದರು. ಮಠಗಳನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಕೋಲಾರದ ಮುಳುಬಾಗಿಲು, ಬೆಂಗಳೂರಿನ ಕ್ಲೋಸ್ ಪೇಟೆ, ಶ್ರೀರಂಗಪಟ್ಟಣದ ದರಿಶಕುಪ್ಪದಲ್ಲಿ ಮೂರು ಕಡೆ ಸ್ಥಾಪಿಸಿದ್ದು ಗಮನಾರ್ಹ. ಹಾಗೂ ಕೆಲವು

ತಾಲ್ಲೂಕುಗಳಲ್ಲಿಯೂ ಸಂಚರಿಸಿ, ಭಾರ್ಗವ ರಾಮ ಭಜನಾ ಮಂದಿರ ಸ್ಥಾಪಿಸಿ, ಎಲ್ಲಾ ವರ್ಗದ ಜನರನ್ನು ಭಿನ್ನಭೇದ, ಭಾವವಿಲ್ಲದೆ ಭಜನಾ ಮಂಡಳಿಗಳಿಗೆ ಪ್ರತಿನಿಧಿಗಳಾಗಿ ನೇಮಿಸಿಕೊಂಡು, ಸೇವಾಕರ್ತರಾಗಿ ತೊಡಗಿಸಿಕೊಂಡು ಇದ್ದ ವ್ಯಾಮೋಹ ಮತ್ತು ಅನ್ಯ ಜಾತಿಯವರನ್ನೆಲ್ಲಾ ಒಗ್ಗೂಡಿಸುವ ಪ್ರಯತ್ನ ದಾಸರಲ್ಲಿ ಇತ್ತು ಎಂಬುದಕ್ಕೆ ಸಾಕ್ಷಿಯಂತಿದೆ. ಹೀಗೆ ಹೋದ ಕಡೆಯೆಲ್ಲೆಲ್ಲಾ ಧರ್ಮ ಜಾಗೃತಿ ಮೂಡಿಸಿ ಜನರನ್ನು ಕೂಡಿ ಹಾಕುವ ಕೆಲಸವೂ ನಡೆದ ಮೇಲೆ 'ಹರಿಏಕನಿಷ್ಠೆ' ಮೂಡಿಸಿದ್ದಲ್ಲದೆ, ರಾಮೋತ್ಸವ, ಕೃಷ್ಣೋತ್ಸವಗಲ್ಲನು ನಡೆಸಿದರು. ಹೋದ ಕಡೆಯೆಲ್ಲೆಲ್ಲಾ ಶಿಷ್ಯರ, ಜನರುಗಳ, ಭಕ್ತರ ದಂಡೇ ಇರುತ್ತಿತೆಂದು ಸುಮಾರು ಒಂದೊಂದು ಕಾರ್ಯಕ್ರಮದಲ್ಲಿ ೨೦೦೦೦ಕ್ಕೂ ಹೆಚ್ಚು ಖರ್ಚು ಅಂದಿನ ದಿನಗಳಲ್ಲಿ ಆಗಿತ್ತಿತ್ತು ಎಂದು ತಿಳಿದು ಬರುತ್ತದೆ.

ಹಾಗೆ ಜನಾನುರಾಗಿಯಾಗಿಯೇ ಕೊನೆಯವರೆಗೂ ದಾಸರು ಇದ್ದರೆಂಬುದು ವಿಶೇಷತೆಯನ್ನು ಗುರುತಿಸಬಹುದಾಗಿದೆ. ಅಂದು ಹರಿದಾಸ ಸಾಹಿತ್ಯ ಇನ್ನೇನು ಮುಗಿದೇ ಹೋಯಿತು ಎನ್ನುತ್ತಿರುವಾಗಲೇ ಸಮಾಜದಲ್ಲಿ ಭಕ್ತಿಯನ್ನು ವೈದಿಕ-ವೈದಿಕೇತರರಲ್ಲಿಯೂ ಮೂಡಿಸಿ ದಾಸ ಸಾಹಿತ್ಯದ ಪುನರುಜ್ಜೀವನಗೊಳಿಸುವಲ್ಲಿ ಕಾರಣರಾಗಿದ್ದಾರೆ.

ಅನೇಕ ದಾಸರ ಶಿಷ್ಯರು ಅವರ ಸೇವಾಕಾರ್ಯದಲ್ಲಿ ನೆರವಾಗಿ ಅವರ ಸಂಕಲ್ಪಕ್ಕೆ ಸಹಕಾರಿಯಾಗಿ ಕೈಗೂಡಿಸಿದ್ದು ಒಂದು ಹೊಂದಾಣಿಕೆಯ ಮನೋಧರ್ಮವನ್ನು ಕಾಣಬಹುದು. ಶಿಷ್ಯ ಪರಂಪರೆಯೂ ೩೦ಕ್ಕೂ ಮೀರಿ ಬೆಳೆದಿದೆ. ಎಲ್ಲರೂ ತುಳಸಿರಾಮದಾಸರ ಬಗ್ಗೆ ಸಂಕೀರ್ತನೆಗಳನ್ನು, ಸ್ತುತಿಗಳನ್ನು, ಶ್ಲೋಕಗಳನ್ನು ರಚಿಸಿ, ತೆಲುಗು ಮತ್ತು ಕನ್ನಡದಲ್ಲಿಯೂ ಸ್ತುತಿಸಿರುವುದು ಶ್ರೀ ತುಳಸಿರಾಮದಾಸರ ಬಗ್ಗೆ ಕೃತಿಗಳು ರಚನೆಯಾಗಿರುವುದು ಆ ನಿಟ್ಟಿನಲ್ಲಿಯೇ ಕಾಣುತ್ತದೆ.

೧೮೭೬-೭೮ರಲ್ಲಿ ಕಾಣೀಸಿಕೊಂಡ ಕ್ಷಾಮ ಬರಗಾಲ ಭೀತಿಯಿಂದ ತತ್ತರಿಸಿ ನಲುಗಿದ್ದ ಜನರಿಗೆ ಜೀವನದ ಅಸ್ಥಿರತೆ ಕಾಡಿತ್ತು. ಯುದ್ಧದ ಭೀಕರತೆ ಮನಸ್ಸುಗಳ ಮೇಲೆ ಗಾಢವಾದ ಪರಿಣಾಮ ಬೀರಿತ್ತು. ಆನರ ಅರಾಜಕತೆ ಇತ್ತು ಇದನ್ನು ಹೋಗಲಾಡಿಸಿ ಸಮಾಜದಲ್ಲಿ ಶಾಂತಿ ನೆಲಸಬೇಕೆಂದು ಸಾಮಾನ್ಯ ಜನ ವರ್ಗಕ್ಕೆ ಆಸರೆಯಾಗಿ ನಿಂತು ಭರವಸೆ ಮೂಡಿಸಿದರು.

ದಕ್ಷಿಣ ಕರ್ನಾಟಕದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದ ಶ್ರೀ ತುಳಸಿರಾಮದಾಸರು ಜನರ ಕಷ್ಟ ನಷ್ಟಗಳಿಗೆ ಸ್ಪಂದಿಸಿ ಮನ ಮಿಡಿದಿದ್ದಾರೆ. ಉಳ್ಳವರಿಂದ ದವಸ, ಧಾನ್ಯ, ಆಹಾರ ವಸ್ತು ಸಂಗ್ರಹಿಸಿ ನಿರ್ಗತಿಕರಿಗೆ ಆಸರೆಯನ್ನೊದಗಿಸಿ, ಊಟ, ಬಟ್ಟೆಯ ಕೊರತೆಯನ್ನು ನೀಗಿಸಿ ಸ್ಪಂದಿಸಿದ್ದಾರೆ. ನೊಂದವರ ಪಾಲಿಗೆ ಶ್ರೀ ಹರಿಯೆಂತೆನಿಸಿದ್ದ ಮಹಾಪುರುಷರಾಗಿದ್ದಾರೆ. ಶ್ರೀ ತುಳಸಿರಾಮದಾಸರು ಭಜನೆಗೆ ಸೀಮಿತವಾಗಲಿಲ್ಲ. ಸಮಾಜದ ಕೆಳಸ್ತರಗಳಿಗೂ ಸ್ಪಂದಿಸಿದ ಮಹಾಮಹಿಮರಾಗಿ ಇಂದಿಗೂ ಪೂಜಿಸಲ್ಪಡುತ್ತಿದ್ದಾರೆ.

'ವೃಥಾ ಸಮಯ ವ್ಯರ್ಥ ಮಾಡಬೇಡ'ಎಂಬಲ್ಲಿ ಸಮಾಜದಲ್ಲಿ ನಿರತನಾದವನು ಕಾಯಕ ತತ್ವಕ್ಕೆ ಬದ್ಧನಾಗಿರಬೇಕು, ಸಮಾಜದಲ್ಲಿ ಬದುಕುವವನಿಗೆ ಸೋದರ ಮನೋಭಾವನೆ ಜನಗಳಲ್ಲಿ, ಜನರ ನಡತೆಯಲ್ಲಿ, ನೈತಿಕವಾಗಿ ಹೇಳುತ್ತಾರೆ. ಭಕ್ತಿಯನ್ನು ಭಿತ್ತಿ ಜನ ಮಾನಸದಲ್ಲಿ ಬೇರೂರಿ ನಿಂತು ಮಾನವತಾವಾದಿ ಎನಿಸಿದ್ದಾರೆ. ಸಮಾಜದ ಬಗ್ಗೆ ಕಾಳಜಿ, ಹರಿಯ ಕಡೆ ಮನಸ್ಸು ತಿರಿಗಿಸುವ ಪ್ರಯತ್ನ ನಡೆದಿದೆ.

ಸಮಾಜದ ಉದ್ಧಾರಕ್ಕಾಗಿಯೇ ಹಲಬವಾರು ಕಡೆ ಸಂಚಾರ ಮಾಡಿದ ಸ್ಥಳಗಳನ್ನು ಹೀಗೆ ಪಟ್ಟಿಮಾಡಿ ಹೇಳಬಹುದು. ಬಂಗಾರಪೇಟೆ, ರಾಬರ್ಟ್ ಪೇಟೆ, ಮುಳಬಾಗಿಲು, ರಾಜ ಪೇಟೆ, ಮದ್ದೂರು, ಚನ್ನಪಟ್ಟಣ, ರಾಮನಗರ, ಕನಕಹಳ್ಳಿ, ಕೊಡಿಯಾಲ, ಮಳವಳ್ಳಿ, ದರಿಶಕುಪ್ಪೆ, ಮೈಸೂರು, ಬೆಂಗಳೂರು, ದಂಡು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಕೊಡದವಾಡಿ, ದಮ್ಮಸಂದ್ರ, ಚವಡನಪಲ್ಲಿ, ಯಲಂದೂರು, ಸಾಹೂರು, ಅಲಂಗೂರು, ಪಿಚ್ಚಗುಂಟ್ಲ, ಪಲ್ಲೆ, ಮಲ್ಲಕುಪ್ಪೆ ಇಲ್ಲೆಲ್ಲಾ ರಾಮೋತ್ಸವಗಳನ್ನು ಮಾಡಿ, ಹಲವಾರು ಜನ ಭಕ್ತರು ಸೇರುವಂತೆ ಮಾಡುತ್ತಿದ್ದರು. ಅಲ್ಲಿಗೆ ಬಂದವರೆಲ್ಲರೂ ಒಬ್ಬೊಬ್ಬರಿಗೂ ಒಂದೊಂದು ಅನುಭವವು ಉಂಟಾಗುತ್ತಿತ್ತು ಎಂಬ ನಂಬಿಕೆ ಇತ್ತು. ಹಲವಾರು ಸ್ಥಳಗಳಲ್ಲಿ ರಾಮೋತ್ಸವವನ್ನು ಆಚರಿಸಿದ್ದು, ಅಭಿವೃದ್ದಿಯನ್ನು ಸಾಮಾಜಿಕವಾಗಿ ಉಂಟು ಮಾಡಲೆಂದು ನಡೆಸಿದ ಪ್ರಯತ್ನಗಳೆಂಬುದು ಸ್ಪಷ್ಟವಾಗುತ್ತದೆ.

ದಾಸರು ತಮ್ಮ ಪವಾಡಗಳ ಶಕ್ತಿಯಿಂದಾಗಿ ಶ್ರೀ ತುಳಸಿರಾಮದಾಸರು ಕೆಳಸ್ತರದಲ್ಲೂ ಜಾಗೃತಿ ಮೂಡಿಸಿ, ಧಾರ್ಮಿಕ ಕೆಲಸಗಳಲ್ಲಿ ಒಂದುಗೂಡುವಂತೆ ಮಾಡಿದ್ದುದರ ಪರಿಣಾಮವಾಗಿ ಇವರನ್ನು ಸುಸಂಸ್ಕೃತ ವಲಯವು ಅವತಾರ ಪುರುಷ, ಪವಾಡ ಪುರುಷ ಮಹಾಮಹಿಮನೆಂದು ಭಾವಿಸಿ ಪರಕಾಲ ಮಠದ ಮೈಸೂರಿನ ಮಹಾರಾಜರು ದಾಸರನ್ನು ಗೌರವಿಸಿ, ಬಿರುದಾವಳಿಗಳನ್ನು ದಾಸರಿಗಿತ್ತು ಚಿನ್ನದ ಕಡಗವನ್ನು ದಾಸರಿಗೆ ತೊಡಿಸಿದರೆಂದು ತಿಳಿಯುತ್ತದೆ.

"ಶ್ರೀ ಚಾಮರಾಟ್ಪಾಲಿತ ಸತ್ಸಂಪ್ರಾದಾಯ ಸುಜ್ಞಾನ್ಯ
ಬೋದಿನೀ ಸಮಾಜೋದ್ಧಾರಕಾ ಎಚ್ಚರಿಕೆ'

ಎಂಬಲ್ಲಿ ಮಠಮಾನ್ಯಗಳು ಕೂಡ ಇವರ ಸೇವೆಯನ್ನು ಗುರುತಿಸಿ ತಲೆದೂಗಿ ಅನೇಕ ಬಿರುದಾವಳಿಗಳನ್ನು ನೀಡಿ, ಕಾಣಿಕೆಯಿತ್ತು ಗೌರವಿಸಿದ್ದರಲ್ಲಿ ಸಮಾಜೋದ್ಧಾರಕ ಎಚ್ಚರಿಕೆಯ ಮಾತುಗಳನ್ನು ಈ ಕೀರ್ತನೆಯ ಸಾಲಿನಲ್ಲಿ ನೆನಯಬಹುದು.

ಇಷ್ಟೇ ಅಲ್ಲದೇ ದಾಸರು ಬಹು ದೊಡ್ಡ ಶಿಷ್ಯ ಪರಂಪರೆಯನ್ನು ಹೊಂದಿದ್ದು ಅವರೆಲ್ಲರೂ ದಾಸರನ್ನು ಸ್ತುತಿಸಿ, ಅನೇಕ ಕೀರ್ತನೆಗಳನ್ನು ರಚಿಸಿ ಅವರನ್ನು ಹಲವಾರು ಹೆಸರುಗಳಿಂದ ಗುರುತಿಸಿ ದೈವನಾಗಿಸಿದ್ದು, ತುಳಸಿರಾಮದಾಸರನ್ನೇ ಗುರುವೆಂದು ಸ್ವೀಕರಿಸಿ ಅವರ ಬಗ್ಗೆ ಕೃತಿಗಳನ್ನು, ಸ್ತುತಿಗಳನ್ನು

ಶ್ಲೋಕಗಳಿಂದ ಭಜಿಸಿರುವುದು ಸಾಮೂಹಿಕವಾಗಿಯೇ ಗುರುತಿಸುವಂತಹ ಪರಿಣಾಮಕಾರಿಯಾದ ಪ್ರಭಾವವನ್ನು ಸಮಾಜದಲ್ಲಿ ಬೀರಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಸಂಪಾದನಾ ಕೃತಿಕಾರರಾದ ನಾ. ಗೀತಾಚಾರ್ಯರು ಗುರುತಿಸಿ ಹೇಳಿರುವ ಮಾತು ೧೯ನೇ ಶತಮಾನದಲ್ಲಿ ಬಹುದೊಡ್ಡ ಆಂದೋಲನವನ್ನೇ ಮಾಡಿದ್ದಾರೆಂಬುದು ವಿಶಿಷ್ಟ ದೃಷ್ಟಿಕೋನದಿಂದ ಯೋಚಿಸುವವರಿಗೆ ಅತಿಶಯೋಕ್ತಿಯೆನಲ್ಲ.

ಪುರಂದರದಾಸರು, ಕನಕದಾಸರ ನಂತರ ಬಂದ ಹರಿದಾಸ ಸಾಹಿತ್ಯದ ಮೂಲಕ ಸಮಾಜದಲ್ಲಿ ಒಂದು ಬದಲಾವಣೆ ತರಲು ಪ್ರಯತ್ನಿಸಿದವರು. ಧಾರ್ಮಿಕ ಶ್ರದ್ಧೆಯ ಮೂಲಕ ಸಾಮಾನ್ಯರಲ್ಲಿ ಸಮಾಜಿಕ ಜಾಗೃತಿ ಮೂಡಿಸುವುದು. ಅಸ್ಥಿರತೆ ಹೋಗಾಲಾಡಿಸುವುದು. ಜೀವನಾಸಕ್ತಿ ಬೆಳೆಸುವುದೇ ಆಗಿರುವುದು.

ಮುಖ್ಯವಾಗಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಗೌಡ, ರೆಡ್ಡಿ, ಅಕ್ಕಸಾಲಿಗ, ಬಣಜಿಗ, ಗಾಣಿಗ, ಉಪ್ಪಾರ, ದಲಿತ ೯ರೆನ್ನದೇ ಎಲ್ಲಾ ವರ್ಗದ ಹರಿದಾಸರನ್ನು ಶಿಷ್ಯರಾಗಿ ಪಡೆದಿರುವುದು 'ಹರಿಏಕನಿಷ್ಠೆ'ಗೆ ಒಳಗಾಗುವಂತೆ ಹರಿದಾಸ ಆಂದೋಲನವನ್ನೇ ನಡೆಸಿದ್ದಾರೆನ್ನುವುದು ವಿಶಿಷ್ಟಾದ್ವೈತಿಯಾದ ಶ್ರೀ ತುಳಸಿರಾಮದಾಸರ (ಸಾಮಾಜಿಕವಾದ) ಪ್ರಯತ್ನ ಎಂದೆಂದೂ ಸಮಾಜಮುಖಿಯಾದದ್ದು ಎಂಬುದು ಗಮನಾರ್ಹ.

ಹಿಂದಿನ ಹರಿದಾಸರಲ್ಲಿ ಕಾಲದಲ್ಲಿ ಹೆಚ್ಚಾಗಿ ವೈದಿಕ ಸಮುದಾಯವೇ ಭಾಗವಹಿಸುತ್ತಿದ್ದರು. ಇತರ ಧರ್ಮದವರನ್ನು ಅಥವಾ ಭಕ್ತಿ ಮಾರ್ಗದಲ್ಲಿ ತುಳಸಿರಾಮದಾಸರು ತಮ್ಮ ಕೀರ್ತನೆಗಳ ಮೂಲಕ ಹಾಗೂ ರಾಮೋತ್ಸವ ಆಚರಣೆಗಳ ಮೂಲಕ ವೈದಿಕ ಧರ್ಮದವರಲ್ಲದೇ ಇತರ ಹಿಂದೂ ಧರ್ಮದ ಇತರರನ್ನು ಸಹ ಒಗ್ಗೂಡಿಸಲು ಪ್ರಯತಿಸಿದ್ದು ಇವರ ಒಂದು ವಿಶೇಷತೆ. ಹೀಗಾಗಿ ಸಾಮಾಜಿಕ ಒಂದು ಸ್ವಾಸ್ಥ್ಯ ಸಮಾಜ ಮತ್ತು ಭಕ್ತಿ ನೈತಿಕ ಪರವಾದ ಸಮಾಜವನ್ನು ನಿರ್ಮಿಸುವಲ್ಲಿ ತುಳಸಿರಾಮದಾಸರ ಸಾಮಾಜಿಕ ಕಳಕಳಿಯು ವ್ಯಕ್ತವಾಗುತ್ತದೆ.

(ಇ) ಮತ ಧಾರ್ಮಿಕವಾಗಿ :-

ಸಾಮಾನ್ಯವಾಗಿ ದಾಸರು ಒಂದೊಂದು ಪರಂಪರೆಯ ಕ್ರಮ ಧರ್ಮದ ನೆಲೆಯಿಂದ ಬಂದವರಾಗಿರುತ್ತಾರೆ. ಸಾಮಾನ್ಯವಾಗಿ ಅವರವರ ಧರ್ಮದ, ಅವರವರ ವರ್ಗದ ಪಂಥವನ್ನೇ ಉದ್ದರಿಸಲು ಮುಂದಾಗುತ್ತಾರೆ. ಇವತ್ತಿನ ಪ್ರಸ್ತುತ ಪರಿಸ್ಥಿತಿಯು ಕೂಡ ಅದೇ ಆಗಿದೆ. ಆದರೆ ದಾಸರಲ್ಲಿ ಮುಖ್ಯವಾಗಿ ಕಂಡು ಬರುವುದು ಧಾರ್ಮಿಕವಾದ ಚಿಂತನೆ. ಗೂಡಾರ್ಥಗಳು, ಸಾಮಾನ್ಯರಿಗೂ ಅರ್ಥೈಸುವ ರೀತಿಯು, ಧರ್ಮದ ಬೆಳವಣಿಗೆ ಇದ್ದರೂ, ಸಮಾಜವನ್ನು ತಿದ್ದುವ ವಿಡಂಬನೆ ವ್ಯಂಗ್ಯಾರ್ಥಗಳು, ಗೂಡಾರ್ಥಗಳು, ಮುಖ್ಯವಾಗಿ ಎಲ್ಲರನ್ನು ಇಲ್ಲವೇ ಕೆಲವೇ ಜನರನ್ನು ಆಕರ್ಷಿಸಿದ್ದು ತಿಳಿದ ಸಂಗತಿ. ಆದರೆ ಇದು ಸಾಮಾನ್ಯವಾಗಿರುತ್ತದೆ.

ಯಾವುದೇ ಮತಭೇದವಿಲ್ಲದೇ ವೈದಿಕೇತರರಲ್ಲಿಯೂ ಧರ್ಮ ಜಾಗೃತಿಯನ್ನು ಸಾಮೂಹಿಕವಾಗಿ ಮೂಡಿಸಿ, ಭಜನೆ, ಕೀರ್ತನೆ, ಹರಿಕಥೆ, ದೈವಭಕ್ತಿಯಲ್ಲಿ ತೊಡಗಿಸುವುದು ಸಾಮಾನ್ಯ ವ್ಯಕ್ತಿಗೆ ಸಾಧ್ಯವಿಲ್ಲ. ವಿಶಿಷ್ಠ ವ್ಯಕ್ತಿಗೆ ಅದು ದಕ್ಕಿದ ವಿಷಯ. ಅಂತೆಯೇ ಶ್ರೀ ತುಳಸಿರಾಮದಾಸರು ಜನರಲ್ಲಿ ಧಾರ್ಮಿಕವಾದ ಧರ್ಮ ಜಾಗೃತಿ ಮೂಡಿಸಿದ್ದು ವಿಶಿಷ್ಠವೆನಿಸುತ್ತದೆ.

ಶ್ರೀ ತುಳಸಿರಾಮದಾಸರು ಅಂತಹ ನಿಟ್ಟಿನಲ್ಲಿ ತಮ್ಮ ಕಾರ್ಯ ಚಟುವಟಿಕೆಯನ್ನು ಬೆಳೆಸಿದ್ದು ಒಂದು, ಅಂದಿನ ದಿನಗಳಲ್ಲಿ ಇಂತಹ ಧಾರ್ಮಿಕ ಚಳುವಳಿಯನ್ನು ಮಾಡಿರುವುದು ಗಮನಾರ್ಹ.

ದಾಸರು ಹಿಮಾಲಯದ ಬದರಿಕಾ ಕ್ಷೇತ್ರದಲ್ಲಿ ತಪಸ್ವಿಗಳಾಗಿದ್ದಾಗ ಬದರಿನಾರಾಯಣ ಸ್ವಾಮಿಯು ಸ್ವಪ್ನದಲ್ಲಿ ಕಾಣಿಸಿಕೊಂಡು ಬೆಂಗಳೂರಿಗೆ ಹೋಗಿ ಧರ್ಮೋದ್ದಾರ (ಹಿಂದೂ ಧರ್ಮ) ಮಾಡಬೇಕೆಂಬ ಸೂಚನೆಯಂತೆ ತಮ್ಮ ಧರ್ಮದ ಉತ್ಸವಗಳ ಮೂಲಕ ಧಾರ್ಮಿಕವಾಗಿ ಎಲ್ಲರ ಮನಸ್ಸು ಒಲಿಸಿ, ಹಲವು ತಾಲ್ಲೂಕು ಕೇಂದ್ರಗಳಲ್ಲಿ ಸುತ್ತಾಡಿ, ಭಜನೆ ರಾಮಮಂದಿರಗಳನ್ನು ಸ್ಥಾಪಿಸಿ ಜನರಲ್ಲಿ ಜೀವನುತ್ಸಾಹ, ಧಾರ್ಮಿಕ ಶ್ರದ್ದೆಯನ್ನು ಮೂಡಿಸಿದವರಲ್ಲಿ ಪುರಂದರದಾಸ, ಕನಕದಾಸರಂತ ದಾಸರುಗಳ ನಂತರ ಶ್ರೀ ತುಳಸಿರಾಮದಾಸರು ಭಕ್ತಿ ಚಳುವಳಿಯ ಹರಿಕಾರನಾಗಿ ಗುರುತಿಸಿಕೊಂಡಿದ್ದಾರೆ.

ದಕ್ಷಿಣ ಕರ್ನಾಟಕದ ಹಲವು ಭಾಗದಲ್ಲಿ ಸುತ್ತಾಡಿ ಮೈಸೂರು, ಮಂಡ್ಯ, ಕೋಲಾರ ಕೇಂದ್ರಗಳಾಗಿ ಮಾಡಿಕೊಂಡು ಮಠಗಳನ್ನು ಸ್ಥಾಪಿಸಿ, ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿದ್ದ 'ಭಾರ್ಗವ ರಾಮ ಭಜನಾ ಮಂದಿರಗಳು' ಇಂದಿಗೂ ಅವು ರಾಮಕೃಷ್ಣ ದೇವಾಲಯಗಳಾಗಿ ಮುಂದುವರಿದಿವೆ. ಅವರ ಹಾಕಿಕೊಟ್ಟ

ಬುನಾದಿಯಿಂದ ಕರ್ನಾಟಕದ ದಕ್ಷಿಣ ಭಾಗದಲ್ಲಿ ಇಂದಿಗೂ ಉಳಿದಿರುವುದನ್ನು ಅವರು ಧಾರ್ಮಿಕ ಶ್ರದ್ಧೆಯ ಮೂಲಕ ಜನರಲ್ಲಿ ಮೂಡಿಸಿದ ಪರಿಣಾಮವಾಗಿದೆ.

ದಾಸರು ಧ್ಯಾನಾಸಕ್ತರಾಗಿ ಗಾಳಿಯಲ್ಲಿ ತೇಲಾಡುವ ಪವಾಡವನ್ನು ಮಾಡುತ್ತಿದ್ದರೆಂಬುದು, ಪವಾಡ ಪುರುಷನಂತೆ ಕಂಡಿರುವುದು ಸೂಚಿಸುತ್ತದೆ. ಅಲ್ಲದೇ ದಾಸರಿಗೆ ಆ ಕಲೆ ಸಿದ್ಧಿಸಿತ್ತೆಂಬುದು ಸ್ಪಷ್ಟ. ಅವರು ಪದ್ಮಾಸನ ಹಾಕಿ ಧ್ಯಾನಭಂಗಿ ಅಥವಾ ಕಿರೀಟ ಧಾರಿಗಳಾಗಿ ನಿಂತ ಭಂಗಿಯ ಭಾವಚಿತ್ರಗಳು ಅನೇಕ ಮನೆಗಳಲ್ಲಿ ಪೂಜಿಸಲ್ಪಟ್ಟು ಇಂದಿಗೂ ಜನರ ಮನಸ್ಸಿನಲ್ಲಿಯೂ, ಶಿಷ್ಯರ ಪರಂಪರೆಯಲ್ಲಿಯೂ ಬೆರೆತು ಉಳಿದಿದ್ದಾರೆ ಎಂಬುದನ್ನು ಗುರುತಿಸಬಹುದು. ಎಲ್ಲರ ಮನಸ್ಸಿನಲ್ಲಿಯೂ ಗುರುವಾಗಿ, ದೈವವಾಗಿ ನಿಲ್ಲುತ್ತಾರೆ. ಧಾರ್ಮಿಕಾಚರಣೆಯ ಮೂಲಕ ಉಂಟುಮಾಡಿದ ಧಾರ್ಮಿಕ ಚಳುವಳಿಯೇ ಕಾರಣವಾಗಿರಬಹುದು.

ಸಮಾಜ ಸುಧಾರಣೆಯನ್ನು ಕೂಡ ಧಾರ್ಮಿಕವಾದ ವಿಚಾರಗಳ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಈಗಲೂ ಅವರ ಬಗ್ಗೆ ಇರುವ ಪವಾಡಗಳು, ದಂತಕಥೆಗಳು, ನಂಬಿಕೆಗಳು, ಪ್ರಚಲಿತವಿರುವವು. ಅದರಲ್ಲಿ ಮುಖ್ಯವಾಗಿ ಗಾಳಿಯಲ್ಲಿ ಧ್ಯಾನಾಸಕ್ತರಾಗಿರುವಾಗಲೇ ತೇಲುವುದು, ಮಹಾರಾಜರು ಚಿನ್ನದ ಕಡಗ ತೊಡಿಸಿ ಗೌರವಿಸುವುದು, ಗರುಡ ಪಕ್ಷಿ ದರ್ಶನ ನೀಡುವುದು ಎಲ್ಲವೂ ಧರ್ಮದ ಹಿನೆಲೆಯಲ್ಲಿಯೇ ಮೂಡುತ್ತವೆ.

ಜನರು ಇವರ ಹರಿಕಥೆಯನ್ನು ಕೇಳಿ ಇವರಿಗೆ ಚಿನ್ನದ ಕರೀಟವನ್ನು ದಾಸರಿಗೆ ತೊಡಿಸಿ ಹಲವಾರು ಬಿರುದಾವಳಿಗಳನ್ನು ನೀಡಿ ಗೌರವಿಸಿರುವುದನ್ನು ಕೂಡ ಇಲ್ಲಿ ಗಮನಾರ್ಹ. ಇವರ ಪ್ರಭಾವವನ್ನು ಕಂಡು ರಾಜರು, ಮಠ ಮಾನ್ಯಗಳು ಶ್ರೀ ತುಳಸಿರಾಮದಾಸರಿಗೆ ಹಲವಾರಿ ಬಿರುದುಗಳನ್ನು ನೀಡಿ ಗೌರವಿಸಿದ್ದಾರೆ. ಇವರ ಆಧ್ಯಾತ್ಮಕ್ಕೆ, ತತ್ವನಿಷ್ಠೆಗೆ, ಪಾಂಡಿತ್ಯಕ್ಕೆ ಗೌರವಿಸಿ, ಹಲವು ವಿಶೇಷಣಗಳಿಂದ ಸ್ತುತಿಸಿ ಧಾರ್ಮಿಕ ನಿಷ್ಠೆ ಮತ್ತು ಆಧ್ಯಾತ್ಮ ತತ್ವಕ್ಕೆ ಮನ್ನಣೆ ನೀಡಿ ಸಾಕ್ಷಾತ್ ರಾಮಾವತಾರವೆಂದು ಭಾವಿಸಿದ್ದರು.

ಅನೇಕ ಶಿಷ್ಯ ವರ್ಗ, ಶಿಷ್ಯರ ಶಿಷ್ಯರುಗಳು, ಪ್ರಶಿಷ್ಯ ವರ್ಗವೂ ಕೂಡ ಅಂದಿನ ಧರ್ಮ ಜಾಗೃತಿಯು ಇಂದಿಗೂ ಮುಂದುವರೆದು ಶಿಷ್ಯರಾಗಿ, ದಾಸರಾಗಿ, ಮಾಡಿದ್ದು, ಒಂದು ಪವಾಡವಾದರು, ಅವರು ಗುರು ತುಳಸಿರಾಮದಾಸರನ್ನು ಗುರುವೆಂದು ಭಾವಿಸಿ, ದೀಕ್ಷೆಹೊಂದಿ ಹಾಕಿಕೊಟ್ಟ ಮಾರ್ಗದಲ್ಲೇ 'ಹರಿಏಕ ನಿಷ್ಠೆಗೆ ಒಳಗಾಗಿ ಸಾಗಿದ್ದು ಧಾರ್ಮಿಕ ಆಂದೋಲನದ ಪ್ರಭಾವವೆನ್ನಬಹುದು.

ಹರಿದಾಸರಿಗೆ ನೈತಿಕತೆ ಬಹಳ ಮುಖ್ಯವಾಗಿ ಇರಬೇಕೆಂದು ನಂಬಿದ್ದರು. ಏಕೆಂದರೆ ತಮ್ಮ ವ್ಯಕ್ತಿತ್ವದ ಮೂಲಕ ಸಮಾಜದಲ್ಲಿ ಮಾದರಿಯಾಗಿ ನಿಲ್ಲುವ ವ್ಯಕ್ತಿಗಳು ಧಾರ್ಮಿಕ ವ್ಯಕ್ತಿಗಳಾಗಿರುತ್ತಾರೆ. ಶ್ರೀತುಳಸಿರಾಮದಾಸರು ತಮ್ಮ ೨೦ನೇ ವಯಸ್ಸಿನ ಹೊತ್ತಿಗೆ ಗುರುಪರಂಪರೆಯಿಂದ ಮತ್ತು ಪೂರ್ವ ಸಂಸ್ಕಾರದಿಂದಲೇ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಭಕ್ತಿ, ಜ್ಞಾನ, ವೈರಾಗ್ಯ ಇದ್ದಡೆ ನೀತಿ ನಿಯಮಶೀಲದಿಂದ ಕೂಡಿರಬೇಕೆಂದು ಭಾವಿಸಿದ್ದರು. ಅದಕ್ಕೆ ಉದಾಹರಣೆಯಾಗಿ ಒಂದು ಘಟನೆಯನ್ನು ಪೂರಕವಾಗಿ ಹೇಳಬಹುದು.

"ಮುಳಬಾಗಿಲು ಗುಂಡಗಂಟಿಪಾಳದವರು ವೈಭವದಿಂದ ರಾಮೋತ್ಸವವನ್ನು ಮಾಡುವ ಸಂದರ್ಭದಲ್ಲಿ ಶ್ರೀ ತುಳಸಿರಾಮದಾಸರನ್ನು ಪರೀಕ್ಷಿಸಲೆಂದು ಅವರು ಮಲಗುವ ಕೋಣೆಗೆ, ಒಬ್ಬ ಹುಡುಗನಿಗೆ ಹೆಣ್ಣು ವೇಷವನ್ನು ಹಾಕಿ ಆ ಹೆಣ್ಣನ್ನು ಕಳಿಸಿದರಂತೆ, ಆ ದಾಸರು ಆ ಹೆಣ್ಣ ಮಗಳನ್ನು ಕುಳ್ಳಿರಿಸಿ ಅರಿಶಿನ, ಕುಂಕುಮ, ಹೂವನ್ನು ಕೊಟ್ಟು ಉತ್ಸವದ ಚಪ್ಪರದಲ್ಲಿರುವ ದೇವರ ಮುಂದೆ ಕುಳ್ಳಿರಿಸಿ ಸಂಕೀರ್ತನೆ ಹಾಡಿದರಂತೆ." ಇಂತಹ ನೈತಿಕತೆ ಶ್ರೀ ತುಳಸಿರಾಮದಾಸರಲ್ಲಿತ್ತು. ಸ್ವಾರ್ಥ, ಮೋಹ ತೊರೆದು ವೈರಾಗ್ಯ ಯೋಗಿಯಾದವನಿಗೆ ಇದ್ದರೆ ಧಾರ್ಮಿಕ ಸಂಸ್ಕಾರ ಅವರಲ್ಲಿ ಇದ್ದು ಪ್ರಜ್ಞಾವಂತರಾಗಿ ಮನುಷ್ಯ ಬಾಳಲು ಮುಕ್ತಿಯ ಕಡೆ ಸಾಗಲು ಸಹಕಾರಿಯಾಗುತ್ತದೆ.

(ಈ) ವಿಶಿಷ್ಟ ದೃಷ್ಟಿಕೋನ :-

ವೈದಿಕ ಧರ್ಮವು ಶ್ರೇಣಿಕೃತ ಸಮಾಜದ ಕಲ್ಪನೆಯಿಂದ ಎಲ್ಲಾ ಜಾತಿಯ ಜನಗಳಿಗೆ ಸ್ಪಂದಿಸದೆ ದ್ವೀಪದಂತೆ ವ್ಯಾಪಕವಾದ ಆಯಾಮವಿಲ್ಲದೆ ತನ್ನ ಸುತ್ತ ನಿರ್ಮಿಸಿಕೊಂಡ ಚೌಕಟ್ಟಿನೊಳಗೆ ಉಳಿದು ಬಿಟ್ಟಿದೆ. ಎಂದು ಟೀಕಿಸುವವರಿಗೆ ಈ ತುಳಸಿರಾಮದಾಸರು ತಮ್ಮ ವಿಶಿಷ್ಟಾದ್ವೈತದ ಪರಂಪರೆಯ ಮೂಲಕ 'ದೇವರು ಒಬ್ಬನೇ ಎಲ್ಲವೂ ಅವನಿಂದಲೇ ಬಂದು, ಮತ್ತೆ ಅವನಲ್ಲಿಯೇ ಐಕ್ಯವಾಗುವುದು ಎಂಬ ಸತ್ಯವನ್ನು ಭಗವಾನ್ ಮಹಾವಿಷ್ಣು ಬ್ರಹ್ಮನಿಗೆ ಭೋಧಿಸಿದ, ಬ್ರಹ್ಮನು ವಶಿಷ್ಠನಿಗೆ ಅರುಹಿದ.

ಹೀಗೆ ಪರಂಪರಾಗತವಾಗಿ ವಿಷ್ಣು ಭಕ್ತರಾದ ಆಳ್ವಾರರಿಗೆ ಆಚಾರ್ಯ ಪರಂಪರೆಯಾಗಿ ರಾಮಾನುಜಾಚಾರ್ಯರಿಗೆ ವಿಶಿಷ್ಟಾದ್ವೈತವನ್ನು ಭೋಧಿಸಿದ 'ಏಕಮೇವ' ತತ್ವವನ್ನೇ ಇವರು ಸಮಾನ್ಯ ಜನರಿಗೆ ಅರ್ಥವಾಗುವಂತೆ ತಮ್ಮ ಕೀರ್ತನೆಗಳ ಮೂಲಕ, ಹರಿಕಥೆಗಳ ಮೂಲಕ ಸಾಗುತ್ತ ಬಂದಿದ್ದರಿಂದ ಸಮಾಜದಲ್ಲಿನ ಎಲ್ಲಾ ಜಾತಿ ಜನಾಂಗದವರನ್ನು ಒಂದುಗೂಡಿಸಿ ಹಿಂದೂ ಧರ್ಮಕ್ಕೆ ಒಂದು ವಿಶಿಷ್ಟ ಆಯಾಮವನ್ನು ಕೊಟ್ಟಿದ್ದಾರೆ.

ರಾಮೋತ್ಸವ, ಕೃಷ್ಣೋತ್ಸಗಳ ಮೂಲಕ ದೈವ ಭಕ್ತಿಗಾಗಿ ಒಗ್ಗೂಡುತ್ತಿದ್ದ ಜನಸಾಮಾನ್ಯರು ಆಂಗಲರ ಆಕ್ರಮಣದ ವಿರುದ್ಧ ದೇಶದ ಸ್ವಾತಂತ್ರ್ಯದ ಬಗ್ಗೆಯೂ ಸಹ ಯೋಚಿಸಲು ಒಂದು ಅವಕಾಶವನ್ನು ಮಾಡಿಕೊಳ್ಳುತ್ತಿದ್ದರು. ಈ ದೃಷ್ಟಿಯಿಂದಲೂ ಸಹ ದೈವಭಕ್ತಿಯ ಮೂಲಕ ದೇಶ ಭಕ್ತಿಯೂ ಮೂಡುತ್ತಿತ್ತು ಎಂಬುದನ್ನು ಗುರುತಿಸಬಹುದು.

ನಂತರದ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಪ್ರಾರಂಭಗೊಂಡ ಗಣೇಶೋತ್ಸವಗಳು ಆಂದೋಲನದಂತೆ ಇಡೀ ದೇಶವನ್ನೇ ವ್ಯಾಪಿಸಿ ಸ್ವತಂತ್ರ ಪಡೆಯಲು, ಆಂಗ್ಲರ ವಿರುದ್ದದ ಅಸಹನೆಯನ್ನು ಸ್ವಾತಂತ್ರ್ಯ ಆಂದೋಲನವಾಗಿ ಹುಟ್ಟುಹಾಕಲು ಕಾರಣವಾಗಿರಬಹುದು. ತುಳಸಿರಾಮದಾಸರು ತಿಳಿದೋ, ತಿಳಿಯದೆಯೋ ಜನಸಾಮಾನ್ಯರಲ್ಲಿ ದೇಶ ಪ್ರೇಮವನ್ನು ಮೂಡಿಸಿದ್ದಾರೆಂಬುದು ಅತಿಶಯವಲ್ಲ.

ಶ್ರೀ ತುಳಸಿರಾಮದಾಸರು ಶ್ರೀ ವೈಷ್ಣವ ಮತ ಸೇರಿದ್ದರೂ ಪೂಜೆ, ವ್ರತ, ಧ್ಯಾನ, ಆಚರಣೆ ಶ್ರೀ ಹರಿಯನ್ನು ಸ್ತುತಿಸಿ ಮಂತ್ರಗಳಿಂದ ವರ್ಣನ ವಿಧಾನದಿಂದ ಹೊಗಳಿದ್ದರೂ ಅವರ ದೃಷ್ಟಿಕೋನ ಬೇರೆಯದೇ ಆಗಿದೆ. ಎಂಬ ದೃಷ್ಟಿಕೋನವನ್ನು ನೀಡಬಹುದು, ದೇವರನ್ನು ಸ್ತುತಿಸುವುದರ ಜೊತೆಗೆ ಪರಲೋಕದಲ್ಲಿ ಮೋಕ್ಷ ಸಿಗಬೇಕಾದರೆ ಅದಕ್ಕಾಗಿಯೇ ಜನರ ಮಧ್ಯೆ ಬೆರೆತು ಧಾರ್ಮಿಕವಾಗಿ ತೊಡಗಿಸಿಕೊಂಡು ಅನೇಕ ಜನರನ್ನು ಭಕ್ತಿಯಲ್ಲಿ ಮುಳುಗುವಂತೆ ಮಾಡಿರುವುದು ಗಮನಾರ್ಹ.

ಜನಸಾಮಾನ್ಯರಿಗೆ ಕಷ್ಟಗಳು ಬಂದಾಗ ಅವರಿಗೆ ಉಳ್ಳವರಿಂದ ದಾನ ಪಡೆದು, ನಿರ್ಗತಿಕರಿಗೆ ನೀಡಿರುವುದು ಹಲವಾರು ಧರ್ಮದವರಲ್ಲಿಯ ಮನಸ್ಸಿನಲ್ಲಿ 'ಹರಿಏಕನಿಷ್ಠೆ'ಯನ್ನು ಪ್ರತಿಷ್ಠಾಪಿಸಿ, ಅವರು ಕೂಡ ದೈವದ ವಿಚಾರಗಳನ್ನು ಅರಿಯುವಂತೆ ಕೀರ್ತನೆಗಳ ಹರಿಕಥೆಗಳನ್ನು ಮಾಡಿರುವುದು. ಹೀಗೆ ಪರೋಪಕಾರ ಮಾಡುವ ಮಾರ್ಗದಲ್ಲಿಯೂ ಮೋಕ್ಷ ಸಿದ್ದಿಯನ್ನು ಕಂಡುಕೊಂಡಾಗ ಪರಮಾತ್ಮನು ಮೆಚ್ಚುತ್ತಾನೆಂದು ಭಾವಿಸಿದ್ದಿರಬಹುದೆಂಬ ಶ್ರೀ ತುಳಸಿರಾಮದಾಸರಲ್ಲಿರಬಹುದಾದ ದೃಷ್ಟಿಕೋನವೊಂದು ಹೊಸ ಚಿಂತನೆಗೆ ಎಡೆಮಾಡಿಕೊಟ್ಟಿದೆ.

ಅಂದು ಹರಿದಾಸ ಸಾಹಿತ್ಯ ಇನ್ನೇನೂ ಮುಗಿದೇ ಹೋಯಿತು. ಎನ್ನುವಷ್ಟರಲ್ಲಿ ಹರಿದಾಸ ಪರಂಪರೆಯನ್ನು ದಾಸ ಸಾಹಿತ್ಯವನ್ನು ಪುನರ್‌ಜೀವನಗೊಳಿಸಲು ೧೯ ನೇ ಶತಮಾನದಲ್ಲಿ ಜನ್ಮತಾಳಿ ಬಂದ ಶ್ರೀತುಳಸಿರಾಮದಾಸರು ಹರಿದಾಸ ಸಾಹಿತ್ಯವನ್ನು ಬೆಳೆಸುತ್ತಾ, ಶಿಷ್ಯ ಪರಂಪರೆಯನ್ನು ಹುಟ್ಟಿಹಾಕುತ್ತಾ

ಶ್ರೀರಾಮೋತ್ಸವ, ಕೃಷ್ಣೋತ್ಸಗಳನ್ನು ಧಾರ್ಮಿಕಾಚರಣೆಗಳನ್ನು ಮಾಡುತ್ತಾ ವೈದಿಕ ಮತ್ತು ವೈದಿಕೇತರರನ್ನು ಒಟ್ಟುಗೂಡಿಸುವ ಸನ್ಮಾರ್ಗದಲ್ಲಿ ಮುನ್ನಡೆಸುವ, ಜನರಲ್ಲಿ ಭಕ್ತಿ, ವೈರಾಗ್ಯ, ನೈತಿಕತೆ ಬೆಳೆಸುತ್ತಾ ಸಾಮಾಜಿಕ ಜಾಗೃತಿಯನ್ನುಂಟು ಮಾಡಿ, ಸಮಾಜವನ್ನು ಕಟ್ಟುವ ಕೆಲಸವನ್ನು ಮಾಡಿದ್ದರು.

ಇಂದು ಪಾಶ್ಚಿಮಾತ್ಯ ರಾಷ್ಟ್ರಗಳ ಜಾಗತೀಕರಣ, ಆಧುನೀಕರಣ, ಉದಾರೀಕರಣದ ಪ್ರಭಾವದಿಂದ ಜನರಲ್ಲಿ ನೈತಿಕತೆ ನಿರ್ಮಲ ನಿಷ್ಠೆ ಉಡುಗೆ-ತೊಡುಗೆ, ಆಚಾರ-ವಿಚಾರ, ಸನ್ಮಾರ್ಗದ ಕೊರತೆಯಿಂದಾಗಿ ಮಾನವನ ಮನಸ್ಸು ಅಶಾಂತಿಯಿಂದ ಕೂಡಿದ್ದು, ಸಮಾಜದಲ್ಲಿ ದುರಂತದಿಂದ ದೇಶವು ತತ್ತರಿಸಿ ಹೋಗುತ್ತಿರುವುದನ್ನು ಗಮನಿಸಬಹುದಾಗಿದೆ.

ಇದರ ಪ್ರಭಾವದಿಂದಾಗಿ ನೈತಿಕತೆ, ಅಸ್ಥಿರತೆ, ಅರಾಜಕತೆ, ವೈರಾಗ್ಯ, ಭಕ್ತಿ ನಿಷ್ಠೆ ಧಾರ್ಮಿಕ ಕೊರತೆ ಎದ್ದು ಕಾಣುತ್ತಿದೆ. ೧೯ನೇ ಶತಮಾನದಲ್ಲಿ ಅಂತಹ ಸಮಾಜವನ್ನು ಒಗ್ಗೂಡಿಸುವ ಕೆಲಸವನ್ನು ಶ್ರೀ ತುಳಸಿರಾಮದಾಸರು ಮಾಡಿದರು.

ಸಾಮಾನ್ಯ ಜನರಲ್ಲಿ ನೈತಿಕ ಮೌಲ್ಯವನ್ನು ಬೆಳಸಿ ಛಿದ್ರಗೊಳಿಸುತ್ತಿರುವ ಮನಸ್ಸುಗಳನ್ನು ಒಂದೆಡೆ ಒಂದುಗೂಡಿಸಲು ಜಾತಿ, ಧರ್ಮ, ಪಂಥಗಳ ಹೆಸರಿನಲ್ಲಿ ಹಂಚಿಹೋಗುತ್ತಿರುವ ಸಮಾಜವನ್ನು ಒಗ್ಗೂಡಿಸಿ, ಭಕ್ತಿ ನಿಷ್ಠೆ, ನೈತಿಕತೆಯ ಕೊರತೆಯನ್ನು ನೀಗಲು ಶ್ರೀ ತುಳಸಿರಾಮದಾಸರಂತಹ ಸಮರ್ಥ ಹರಿದಾಸರು ಈ ೨೧ನೇ ಶತಮಾನದಲ್ಲೂ ಪ್ರಸ್ತುತವೆನ್ನಿಸಿ ನಿಲ್ಲುತ್ತಾರೆ.

ಅಧ್ಯಾಯ – ಆರು

ಸಮಾರೋಪ

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ದಾಸ ಸಾಹಿತ್ಯದ ಕೊಡುಗೆ ಅಪಾರ. ದಾಸ ಸಾಹಿತ್ಯವು ತನ್ನದೇ ಆದ ನೆಲೆಯಿಂದ ಗುರುತಿಸಿಕೊಂಡು ಕನ್ನಡ ಸಾಹಿತ್ಯದ ಮುಖ್ಯ ವಾಹಿನಿಯಾಗಿದೆ. ಹರಿದಾಸ ಸಾಹಿತ್ಯವು ೧೪ ನೇ ಶತಮಾನದಿಂದಲೂ ಗುರುತಿಸಿಕೊಂಡು ನೀಡಿದ ಕಾಣಿಕೆ ಗಮನಾರ್ಹ. ದಾಸ ಸಾಹಿತ್ಯವು ನಿಂತ ನೀರಲ್ಲ. ಅದು ನರಂತರ ಹರಿವ ನದಿ. ಒಮ್ಮೊಮ್ಮೆ ದೇಶದ ರಾಜಕೀಯ, ಧಾರ್ಮಿಕ, ಸಾಮಾಜಿಕ ಕಾರಣಗಳಿಂದ ಕುಂಟಿತಗೊಳ್ಳುತ್ತಿದೆ ಎನ್ನುತ್ತಿರುವಾಗಲೇ ಪುನಶ್ಚೇತನಗೊಂಡು ಸಾಗುತ್ತದೆ. ಹಾಗೆ ಆಗುವುದು ಸ್ಪಷ್ಟ ಬೆಳವಣಿಗೆಯ ರೂಪವೂ ಹೌದು.

ದ್ವೈತ–ಅದ್ವೈತ ಮತ್ತು ವಿಶಿಷ್ಟಾದ್ವೈತದಿಂದ ಕೂಡಿದ ತ್ರಿವೇಣಿ ಸಂಗಮವೆಂದು ಡಾ. ಹಾವನೂರರವರು ಗುರುತಿಸಿರುವುದನ್ನು ಸ್ಮರಿಸಬಹುದು. ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತದ ಹೊಸ ಸೇರ್ಪಡೆಯನ್ನು ಗುರುತಿಸಿ ಹೇಳಿರುವ ಮಾತು ಸತ್ಯವೆನಿಸುತ್ತದೆ. ವೈದಿಕ ಧರ್ಮಕ್ಕೆ ಮತ್ತಷ್ಟು ಮೆರುಗನ್ನು ನೀಡುತ್ತದೆ. ಆತ್ಮ ಸಮರ್ಪಣೆ ಹರಿಏಕನಿಷ್ಠೆ ಸಮರ್ಪಣಾ ಮನೋಭಾವದ ಲಕ್ಷಣವಾಗಿದ್ದು, ವಿಶಿಷ್ಟಾದ್ವೈತದ ವಿಶಿಷ್ಟತೆಯನ್ನು ಗುರುತಿಸಿರುವುದು ಮುಖ್ಯ ಲಕ್ಷಣವಾಗಿದೆ. ಭಿನ್ನತೆಯನ್ನು ಹೋಗಾಲಾಡಿಸಿರುವ ನಿಚ್ಚಳವಾದ ನಿಲುವಿದೆ.

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ದಾಸ ಸಾಹಿತ್ಯವು ಒಂದಾಗಿದ್ದು ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿ, ದಾಖಲಾಗದೆ ಉಳಿದಿರುವ ಎಷ್ಟೋ ಹರಿದಾಸ ಮಹನೀಯರು ಇನ್ನು ಉಳಿದಿದ್ದಾರೆ. ಅವರ ಹೆಸರು, ಸಾಧನೆ, ಜೀವನ ವಿವರ, ಕೈಗೊಂಡ ಕಾರ್ಯಗಳು ಸಮಾಜಕ್ಕೆ ನೀಡಿದ ಕೊಡುಗೆ ಇವೆಲ್ಲವೂ ದಾಖಲಾರ್ಹ. ಅಂತಹವರಲ್ಲಿ ಇಲ್ಲಿಯವರೆಗೂ ದಾಖಲಾಗದೆ ಉಳಿದಿದ್ದ ಆಂಧ್ರ ಭಾಗದ ಕಡಪ ಜಿಲ್ಲೆಯ ಸಿದ್ದವಟ್ಟಂನ ಶ್ರೀ ತುಳಸಿರಾಮದಾಸರನ್ನು ನನ್ನ ಅಧ್ಯಯನದ ವಿಷಯವಾಗಿ ಆರಿಸಿಕೊಂಡು ಅವರನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸುತ್ತಿರುವುದು ಸಂತೋಷಕರ ಸಂಗತಿ.

೧೯ನೇ ಶತಮಾನದಲ್ಲಿ ಕಂಡು ಬಂದ ತುಳಸಿರಾಮದಾಸರು ವೈದಿಕ ಪರಂಪರೆಯ ಶ್ರೀ ವೈಷ್ಣವದ ವಿಶಿಷ್ಟಾದ್ವೈತಿಗಳಾಗಿದ್ದು, ಅವರು ರಚಿಸಿರುವ ಎಲ್ಲಾ ಕೀರ್ತನೆಗಳಲ್ಲಿ ವಿಶಿಷ್ಟಾದ್ವೈತದ ಎಲ್ಲಾ ಲಕ್ಷಣಗಳು ಕಂಡು ಬಂದು ಹರಿದಾಸ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದು ಕೊಟ್ಟಿದ್ದಾರೆ. ವೈದಿಕ ಪರಂಪರೆಯ ಹಿನ್ನೆಲೆಯಲ್ಲಿ ಬಂದ ಹರಿದಾಸ ಸಾಹಿತ್ಯ ನಶಿಸಿಹೋಗುತ್ತಿದೆ ಎಂದು ಆತಂಕ ಪಡುವವರಿಗೆ ಭರವಸೆಯನ್ನು

ಮೂಡಿಸಿದೆ. ಶ್ರೀ ತುಳಸಿರಾಮದಾಸ ಕೀರ್ತನಾ ಸಾಹಿತ್ಯದಲ್ಲಿ, ಶ್ರೀ ತುಳಸಿರಾಮದಾಸರು ೨೭೫ ಕೀರ್ತನೆಗಳನ್ನು ರಚಿಸಿದ್ದಾರೆ. ೨೫ ಕೀರ್ತನೆಗಳು ಮಾತ್ರವೇ ಕನ್ನಡದಲ್ಲಿವೆ. ಉಳಿದವುಗಳು ತೆಲುಗಿನಲ್ಲಿ ರಚಿತವಾಗಿವೆ. ತೆಲುಗಿನಲ್ಲಿ ೭ ಕೃತಿಗಳನ್ನು ರಚಿಸಿದ್ದಾರೆ.

ಅವುಗಳಲ್ಲಿ

ಶ್ರೀ ರಾಮ ಶತಕಮು, ಲಕ್ಷ್ಮೀಶತಕಮು, ಕಂದಾರ್ಥ ಪಂಚರತ್ನಮುಲು , ಶ್ರೀರಾಮ ಶತಕಮು ವಡ್ಡಪಲ್ಲೆ ಗ್ರಾಮ ಹನುಮಸ್ತುತಿ, ಸಿರಿತಾರಾವಳಿ , ಪರಕಾಲ ಗುರು ಸ್ತೋತ್ರ ಇವುಗಳೆಲ್ಲವೂ ತೆಲುಗು ಭಾಷೆಯಲ್ಲಿದ್ದು ಚಿಕ್ಕ ಚಿಕ್ಕ ಕೃತಿಗಳಾಗಿವೆ.

ಪರಕಾಲ ಮಠದ ಗುರುಪರಂಪರೆಯಲ್ಲಿ ಸಂಪ್ರದಾಯಬದ್ಧವಾಗಿ ಎಲ್ಲವನ್ನು ಕಲಿತು ಆದಿಶೇಷನ ಅಣತಿಯಂತೆ ಹಿಂದೂಧರ್ಮದ ಭಾಗವಾದ ವೈದಿಕ ಧರ್ಮದ ಉದ್ಧಾರಕ್ಕಾಗಿ ನಿಂತು, ವೈದಿಕೇತರರನ್ನು ತನ್ನ ಶಿಷ್ಯರಾಗಿಸಿಕೊಂಡು ಜಾತಿ. ಮತ ಭೇದವನ್ನು ತೊಡೆದುಹಾಕಿ ರಾಮೋತ್ಸವ, ಕೃಷ್ಣೋತ್ಸವಗಳ ಮೂಲಕ ಜನರನ್ನು ಒಟ್ಟುಗೂಡಿಸಿ, ಧಾರ್ಮಿಕ ಜಾಗೃತಿಯನ್ನು ಜನರಲ್ಲಿ ಮೂಡಿಸಿದರು.

ಕರ್ನಾಟಕದ ದಕ್ಷಿಣ ಭಾಗದಲ್ಲಿ ಸುತ್ತಾಡಿ ಕೋಲಾರ, ಬೆಂಗಳೂರು, ಮಂಡ್ಯಗಳಲ್ಲಿ ಮಠಗಳನ್ನು ಸ್ಥಾಪಿಸಿ, ವೈದಿಕ, ವೈಧಿಕೇತರರನ್ನು ಭಜನಾ ಮಂಡಳಿಗಳಲ್ಲಿ ಪ್ರತಿನಿಧಿಗಳನ್ನಾಗಿ ಮಾಡಿ ಭಾರ್ಗವ ಮಂಡಳಿಗಳಲ್ಲಿ ಧಾರ್ಮಿಕ ಕಾರ್ಯಚಟುವಟಿಕೆಗಳು ನಡೆಸಿ, ಧಾರ್ಮಿಕ ಆಂದೋಲನದ ಜೊತೆಗೆ ಸಾಮಾಜಿಕ ಆಂದೋಲನವನ್ನು ಮಾಡಿ ಸಮಾಜದ ಒಳಿತಿಗಾಗಿ ಶ್ರಮಿಸಿದರು ಶ್ರೀತುಳಸಿರಾಮದಾಸರು ಇಂತಹ ಮಹಾನುಭಾವರಿಗೆ ಸಾಮಾನ್ಯಜನರು, ಮಠಮಾನ್ಯ ಗಳು, ಮಹಾರಾಜರು ಅನೇಕ ಬಿರುದುಗಳನ್ನು ನೀಡಿ ಗೌರವಿಸಿ ಸತ್ಕರಿಸಿದರು. ಧರ್ಮದ ಉನ್ನತಿಗಾಗಿ ಸಮಾಜದಲ್ಲಿ ಒಂದಾಗಿ ಬೆರೆತು, ಜನಮಾನಸದಲ್ಲಿ ಒಂದಾದರು, ಜನಾನುರಾಗಿ ಶ್ರೀ ತುಳುಸಿರಾಮದಾಸರು.

ಹರಿದಾಸ ಸಾಹಿತ್ಯಕ್ಕೆ ಸೇರ್ಪಡೆಯಾಗುತ್ತಿರುವ ಶ್ರೀ ತುಳಸಿರಾಮದಾಸರನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾದ ಇವರ ಬಗ್ಗೆ, ಪರಿಚಯ ಕಾಲಘಟ್ಟ, ಕೀರ್ತನೆಗಳು, ಗುರುಪರಂಪರೆ, ಜನರಲ್ಲಿ ಹಬ್ಬಿರುವ ದಂತಕಥೆಗಳು, ಪವಾಡಗಳು, ಜೀವಿತಾವಧಿಯಲ್ಲಿ ಜನರಿಗೆ ಮಾಡಿದ ಸೇವೆ,ಎಲ್ಲವನ್ನು ತಿಳಿಸುವ ಪ್ರಯತ್ನ ನನ್ನ ಅಧ್ಯಯನದ ವಿಷಯದ ಮೂಲಕ ತಿಳಿಸುತ್ತಿರುವುದು ಸೂಕ್ತವೆನಿಸುತ್ತದೆ.

ಮೊದಲನೆಯ ಅಧ್ಯಯನದಲ್ಲಿ ಅಧ್ಯಯನಕ್ಕೆ ಆರಿಸಿಕೊಡಿರುವ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ, ತುಳಸಿರಾಮದಾಸರನ್ನು ಪರಿಚಯಿಸುವ ಮುಖ್ಯ ಉದ್ದೇಶವನ್ನು ಅವರನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸುವುದೇ ಆಗಿದೆ, ಮತ್ತು ಅವರ ಕೀರ್ತನ ಸಾಹಿತ್ಯವೂ ಕನ್ನಡದ ಸಾಹಿತ್ಯಕ್ಕೆ ನೀಡಿದ ಕೊಡುಗೆಯಾಗಿದೆ,ಅವರ ಜೀವನ ವಿವರವು ಬದುಕಿದ ರೀತಿ ಹರಿನಿಷ್ಠೆ ,೧೯ನೇ ಶತಮಾನದ ಆಂದೋಲನಕಾರನಾಗಿ ಹೇಗೆ ಕಂಡುಬಂದರು ಎಂಬುದುದನ್ನು ತಿಳಿಸುವ ಪ್ರಯತ್ನವು ವ್ಯಾಪ್ತಿಯನ್ನು ಒಳಗೊಂಡಿದೆ,

ಎರಡನೆಯ ಅಧ್ಯಾಯದಲ್ಲಿ, ಹರಿದಾಸ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆಯ ಕುರಿತಾಗಿದ್ದು , ಜನರ ನಡುವೆ ಆರಂಭವಾದ ದಾಸಸಾಹಿತ್ಯ ಸುಮಾರು ೧೨ನೇಶತಮಾನದಿಂದಲೇ ಓಬಳೇಶಮಾದಾರಸನಿಂದ ಪ್ರಾರಂಭಗೊಂಡಿತೆಂಬ ಮಾಹಿತಿ ನೀಡಿಲಾಗಿದೆ. ೧೪ನೇಶತಮಾನದಲ್ಲಿ ಪ್ರಾರಂಭವಾದರು ೧೨ನೇಶತಮಾನದಲ್ಲಿ ಓಬಳೇಶಮಾದರಸನ ಪದ್ಯವೊಂದು ಅತ್ಯಂತ ಪ್ರಾಚೀನವಾಗಿದ್ದು, ಎಚ್.ಎನ್.ವೆಂಕಟೇಶಮೂರ್ತಿಯವರ 'ಕೀರ್ತನಕಾರರು ಕೃತಿ'ಯಲ್ಲಿ ಎಲ್.ಬಸವರಾಜುರವರ ಹೇಳಿಕೆಯ ಪ್ರಸ್ತಾಪದೊಂದಿಗೆ ಗುರುತಿಸಲಾಗಿದೆ. ವಿಷಯದ ವಿಸ್ತಾರವನ್ನು ಮಾಡಲಾಗಿದೆ. ದಾಸಸಾಹಿತ್ಯ ೧೨ನೇಶತಮಾನದಿಂದ ಕಾಣಿಸಿಕೊಂಡು ೧೪ನೇ ಶತಮಾನದಲ್ಲಿ ಸಾಗಿ ೧೬ನೇ ಶತಮಾನದಲ್ಲಿ ಪ್ರವಾಹದಂತೆ ಹರಿದು, ೧೯ನೇ ಶತಮಾನದಲ್ಲಿಯೂ ಶ್ರೀ ತುಳಸಿರಾಮದಾಸರ ಮೂಲಕ ಇಂದಿಗೂ ೨೧ನೇ ಶತಮಾನದಲ್ಲೂ ಬೆಳವಣಿಗೆಯನ್ನು ಕಾಣಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಅಧ್ಯಯನಕ್ಕೆ ಆರಿಸಿಕೊಂಡ ಶ್ರೀ ತುಳಸಿರಾಮದಾಸರ ಕಾಲಘಟ್ಟವನ್ನು ಕುರಿತ್ತಾದ್ದಗಿದೆ. ನಾಲ್ಕು ಘಟ್ಟಗಳನ್ನು ಪ್ರಸ್ತಾಪಮಾಡಿ ಯಾವ ಕಾಲಘಟ್ಟದಲ್ಲಿ ಬರುತ್ತಾರೆಂಬ ಪ್ರಸ್ತಾಪಮಾಡಲಾಗಿದೆ. ಮತ್ತು ಇವರ ಜೀವನ ವಿವರವನ್ನು ವಿಸ್ತಾರವಾಗಿ ತಿಳಿಸುವ ಪ್ರಯತ್ನವಿದೆ, ಅದರಲ್ಲಿ ಜನನದ ವಿವರಗಳು ,ತಂದೆತಾಯಿಗಳ ಮಾಹಿತಿ ವಿದ್ಯಾಭ್ಯಾಸ ಗುರುವಿನ ಉಪದೇಶ ಅಂತಿಮ ದಿನಗಳಲ್ಲಿ ತಮ್ಮ ನಿರ್ಧಾರದಂತೆ ಪರಮ ಪದ ಸೇರಿದ ವಿವರಗಳನ್ನು ನೀಡಲಾಗಿದೆ

, ಅದರಲ್ಲಿ ಉಪ ವಿಭಾಗಳನ್ನು ಮಾಡಿಕೊಂಡು ಶ್ರೀ ತುಳಸಿರಾಮದಾಸರ ಬಗ್ಗೆ ಇದ್ದ ದಂತಕಥೆಗಳು, ಪವಾಡ ಗಳೂ, ಮೈಸೂರು ಪ್ರಾಂತ್ಯದ ಹಳ್ಳಿಗಳಲ್ಲಿ, ಜನರ ಬಾಯಲ್ಲಿ ಈಗಲೂ ಉಳಿದಿರುವುದನ್ನು ಗುರುತಿಸಿದೆ, ಮತ್ತು ಗುರುಪರಂಪರೆಯನ್ನು ತಿಳಿಸಿ, ಅವರ ಶಿಷ್ಯರಿಗೆ ಶ್ರೀ ತುಳಸಿರಾಮದಾಸರು ಗುರುವಾಗಿ ಮತ್ತು ಪ್ರಶಿಷ್ಯ ಕೆಲವು ಶಿಷ್ಯರ ವಿವರಗಳನ್ನು ನೀಡಲಾಗಿದೆ, ಮತ್ತು ಶಿಷ್ಯರು ಶ್ರೀ ತುಳಸಿರಾಮದಾಸರನ್ನು ಸ್ತುತಿಸಿರುವ ಕೀರ್ತನೆಗಳ ಮೂಲಕ ಗುರು-ದೈವ, ಶಿಷ್ಯ-ಗುರು, ಸಮನ್ವಯವನ್ನು ಹೇಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ, ಗುರುತಿಸಿಲಾದ ಮುಖ್ಯ ಅಂಶಗಳು ಈ ರೀತಿಯಾಗಿವೆ, ಧಾರ್ಮಿಕ ಶ್ರದ್ಧೆ ಮತ್ತು ಸಾಮಾಜಿಕ ಕಳಕಳಿಯನ್ನು ಶ್ರೀ ತುಳಸಿರಾಮದಾಸರಲ್ಲಿ ಮತ್ತು ಅವರ ಕೀರ್ತನಾ ಸಾಹಿತ್ಯದಲ್ಲಿ ಗುರುತಿಸಿರುವುದು ಗಮನಾರ್ಹ, ಉಪವಿಭಾಗದಲ್ಲಿ ಕೀರ್ತನೆಗಳ ವಸ್ತು ಮತ್ತು ಸ್ವರೂಪದಲ್ಲಿ ಕಂಡುಬರುವ ಅಂಶಗಳು ಮುಖ್ಯವಾಗಿ, ಪುರಾಣ ಪಾತ್ರಗಳು ಲಕ್ಷ್ಮೀಸ್ತುತಿ, ಆಳ್ವಾರರ ಬಗ್ಗೆ, ಶ್ರೀ ಹರಿಯಬಗ್ಗೆ, ಮತ್ತು ಸ್ವರೂಪವು, ದಂಡಕ ಷಟ್ಪದಿ.ದ್ವಿಪದಿ ಚೌಪದಿ, ಕಂದದಲ್ಲಿ ರಚಿತವಾಗಿರುವುದನ್ನು ಹೇಳಲಾಗಿದೆ,

ಭಕ್ತಿ–ಭಕ್ತ, ಶಿಷ್ಯ–ಗುರು, ಮನುಷ್ಯ–ದೇವರು ಸಮನ್ವಯದ ನೆಲೆಗಟ್ಟಿನಲ್ಲಿ ಗುರುತಿಸಿದೆ.ಭಾಷೆಯ ವೈಶಿಷ್ಟ್ಯವು ಕನ್ನಡ ತೆಲುಗಿನಲ್ಲಿ ರಚಿತಗೊಂಡು ಅದರೊಂದಿಗೆ, ವೈದಿಕ ಪರಂಪರೆಯ ಸಂಸ್ಕೃತ ಭಾಷೆಯು ಮೇಳವಿಸಿ ಬಂದಿರುವುದು ಗಮನಾರ್ಹವಾಗಿದೆ. ಕನ್ನಡದ ಕೀರ್ತನೆಯಲ್ಲೂ ತೆಲುಗಿನ ಪ್ರಭಾವವನ್ನು ಮತ್ತು ಸಂಸ್ಕೃತದ ಪ್ರಭಾವವನ್ನು ಹೇರಳವಾಗಿ ಗುರುತಿಸಿದೆ. ಸಂಗಿತದ ಹಿನ್ನಲೆಯಲ್ಲಿ ಕೀರ್ತನೆಗಳ ಸಾಹಿತ್ಯ ಲಯ, ಪ್ರಾಸ , ಆದಿ, ಅಂತ್ಯಪ್ರಾಸವೂ ರಾಗ ತಾಳಗಳು ಸಂಗೀತದ ಹಿನ್ನೆಲೇಯಲ್ಲಿಯೇ ರಚಿತವಾಗಿರುವುದನ್ನು ಕಾಣಬಹುದು.

ಐದನೆಯ ಅಧ್ಯಾಯವೂ ಶ್ರೀ ತುಳಸಿರಾಮದಾಸರು ಮತ ಧಾರ್ಮಿಕವಾಗಿ, ಸಾಮಾಜಿಕವಾಗಿ ಹೇಗೆ ಗುರುತಿಸಿಕೊಂಡು ಸಮಾಜದಲ್ಲಿ ಧರ್ಮದಲ್ಲಿ ಬೆರೆತು ಹೋದರು , ತೆಲುಗಿನ ಅನ್ನಮಯ್ಯನ ಪ್ರಭಾವವು ಶ್ರೀ ತುಳಸಿರಾಮದಾಸರ ಸಾಹಿತ್ಯದ ಮೇಲೆ ಆಗಿರುವುದನ್ನು ಗುರುತಿಸಿದೆ, ಇತರ ದಾಸರು ಬೀರಿದ ಪ್ರಭಾವ, ಶ್ರೀ ತುಳಸಿರಾಮದಾಸರು ತಮ್ಮ ಶಿಷ್ಯ ಹರಿದಾಸರ, ಪ್ರಶಿಷ್ಯ ದಾಸರ ಮೇಲೆ ಬೀರಿದ ಪ್ರಭಾವವನ್ನು ಗುರುತಿಸಿರುವುದು ಮುಖ್ಯವಾಗಿದೆ ಸಾಮಾಜಿಕವಾಗಿ ತೊಡಗಿಕೊಂಡು ಧಾರ್ಮಿಕ ಜಾಗೃತಿಯನ್ನು ಸಾಮಾನ್ಯರಲ್ಲೂ ಮೂಡಿಸಿ ಗಾಣಿಗ, ಅಕ್ಕಸಾಲಿಗ, ರೆಡ್ಡಿ, ಬಣಜಿಗ, ನೇಕಾರ, ಬ್ರಾಹ್ಮಣ ಹೀಗೆ ಎಲ್ಲಾ ವರ್ಗದವರನ್ನು 'ಹರಿಏಕನಿಷ್ಠೆ'ಯಲ್ಲಿ ಒಟ್ಟು ಗೂಡಿಸಿದರೆಂಬುದನ್ನು ಗುರುತಿಸಿದೆ.

ವಿಶಿಷ್ಟ ದೃಷ್ಟಿಕೋನದಲ್ಲಿ ಹಲವಾರು ಚಿಂತನೆಗೆ ಹಚ್ಚುವಂತಹ ವಿಚಾರಗಳನ್ನು ಗುರುತಿಸಲಾಗಿದೆ, ದೈವಭಕ್ತಿಯ ಮೂಲಕವೇ ದೇಶಭಕ್ತಿಯ ಹಿನ್ನೆಲೆಯಲ್ಲಿ ಚಿಂತಿಸುವ ಕ್ರಮ, ಒಂದು ಆಲೋಚನೆಗೆ ಎಡೆ ಮಾಡಿಕೊಡುತ್ತದೆ

ಸಮಾಜೋದ್ದಾರಕ'ರಾಗಿ ಸೇವೆ ಸಲ್ಲಿಸಿ , ಸಾಹಿತ್ಯವನ್ನು ವಿಶಿಷ್ಟಾದ್ವೈತದ ಮೂಲಕ ನೀಡಿ 'ಶ್ರೀ ಹರಿಏಕನಿಷ್ಠೆ'ಯನ್ನು ಹೊಂದಿದ ೧೯ನೇ ಶತಮಾನದ ಶ್ರೀ ತುಳಸಿರಾಮದಾಸರು ಹರಿದಾಸ ಸಾಹಿತ್ಯಕ್ಕೆ ನೀಡಿದ ಮಹತ್ತರ ಕೊಡುಗೆಯಾಗಿದೆ.

ಅನುಬಂಧ

೧. ತುಳಸೀರಾಮದಾಸರು : (ಸಂ) ನಾ. ಗೀತಾಚಾರ್ಯರು ೨೦೦೫
ತುಳಸೀರಾಮದಾಸರ ಶತಮಾನೋತ್ಸವ ಸಮಿತಿ,
ನಾರಾಯಣಶರ್ಮ ಸಂಸ್ಕೃತಿ ಕೇಂದ್ರ,
ಬೆಂಗಳೂರು.

೨. ವೆಂಕಟರಾಮದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು : (ಸಂ) ನಾ. ಗೀತಾಚಾರ್ಯರು, ೨೦೦೭, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು.

೩. ಬೇಲೂರು ವೈಕುಂಠದಾಸರ ಕೀರ್ತನೆಗಳು : ನಾ. ಗೀತಾಚಾರ್ಯರು (ಸಂ): ೨೦೦೪, ನಾರಾಯಣಶರ್ಮ ಸಂಸ್ಕೃತಿ ಕೇಂದ್ರ, ಬೆಂಗಳೂರು.

೪. ಸಮಗ್ರ ಹರಿದಾಸರ ಸಾಹಿತ್ಯ ಸಂಪುಟ ೩೫, ಭಾಗ ೧ : ಕನ್ನಡ ಸಂಸ್ಕೃತಿ ಇಲಾಖೆ, ೨೦೦೪ ಬೆಂಗಳೂರು.

೫. ಹರಿದಾಸ ಆಂದೋಲನ : ಡಾ.ನಿ.ಕೃ.ರಾಮಶೇಷನ್, ಬೆಂಗಳೂರು.

೬. ಹರಿದಾಸ ಪರಂಪರೆ ಸಂಪುಟ : ಶ್ರೀ ಕಪಾಟರಾಳ ಕೃಷ್ಣರಾಯ, ಪ್ರಬುದ್ಧ ಕರ್ನಾಟಕ

೭. ಶ್ರೀ ಪಾದರಾಜರ ಕೃತಿಗಳು : ಜಿ.ವರದರಾಜಾರಾವ್, ೧೯೭೩ ಮೈಸೂರು ಪ್ರಕಟಣೆ

೮. ಕರ್ನಾಟಕ ಹರಿದಾಸರು ವಿಮರ್ಶಾತ್ಮಕ ಅಧ್ಯಯನ : ಡಾ.ಎಚ್.ಕೆ.ವೇದಾವ್ಯಾಸಚಾರ್ಯ, ಪರಿಮಳ ಸಂಶೋಧನೆ , ೧೦೬೫

೯. ಕನಕದಾಸರು ಮತ್ತು ಅವರ ಕೃತಿಗಳು : ಡಾ.ಎಸ್.ಎಸ್.ಪುರೋಹಿತ, ಕರ್ನಾಟಕ ವಿ.ವಿ. , ೧೯೭೦

೧೦. ಶಿವದಾಸ ಗೀತಾಂಜಲಿ : ಎಲ್.ಬಸವರಾಜು, ೧೯೬೩

೧೧. ದ್ವಿತೀಯ ಘಟ್ಟದ ಹಿನ್ನೆಲೆ (ದಾಸಸಾಹಿತ್ಯ) : ಕೆ.ಜಿ.ಶಾಸ್ತ್ರಿ , ಆರುಉಪನ್ಯಾಸಗಳು, ೧೯೭೦

೧೨. ಹರಿದಾಸಸಾಹಿತ್ಯದಲ್ಲಿ ಭಕ್ತಿಯ ಸ್ವರೂಪ	:	ಡಾ.ಟಿ.ಎಸ್. ನಾಗರತ್ನ, ೧೦೭೫ ಮೈಸೂರು ವಿ.ವಿ.,
೧೩.ಕನ್ನಡದಲ್ಲಿ ಹರಿದಾಸ ಆಂದೋಲನ	:	ಡಾ.ಎಚ್.ಕೆ. ರಾಮಶೇಷಾ, ತಿರಿಪತಿ ತಿರುಮಲ ಪ್ರಕಟಿತ ಬೆಂಗಳೂರು ೧೯೮೧
೧೪. ಹರಿದಾಸ ಸಾಹಿತ್ಯ ಒಂದು ಅವಲೋಕನ	:	ಬೇಲೂರು ಕೇಶವ ದಾಸರು ಮೈಸೂರು, ದ್ವೀತಿಯ ಮುದ್ರಣ ೧೯೮೦
೧೫. ಶ್ರೀಕರ್ನಾಟಕ ಭಕ್ತಿ ವಿಜಯ	:	ಬೇಲೂರು ಕೇಶವ ದಾಸರು ನಾ. ಮು. ೧೯೬೩
೧೬. ೧೯ನೇ ಶತಮಾನದ ಹರಿದಾಸಸಾಹಿತ್ಯ	:	ಅನಂತ ಪದ್ಮನಾಭರಾವ್ ಬೆಂಗಳೂರು ವಿಶ್ವ ವಿದ್ಯಾನಿಲಯ ೧೯೯೧
೧೭. ಹರಿದಾಸ ಸಾಹಿತ್ಯ ಕಾವ್ಯ ಸ್ವರೂಪ	:	ಶ್ರೀಮತಿ.ಆರ್.ಮಾಲಿನಿ
೧೮. ಅನ್ನಮಯ್ಯ ಶ್ರೀಪಾದರಾಯಲು ಅನ್ನಮಯ್ಯ ಪುರಂದರದಾಸರು (ತೆಲುಗು)	:	ಡಾ.ಕೆ.ಸರ್ವೋತ್ತಮನ್ ಪಾರಿಜಾತ ಪ್ರಚಾರಣಲು, ೧೯೮೨
೧೯. ಆಂಧ್ರ ವಾಗ್ಗೇಯಕಾರ ಚರಿತ್ರಮು (ತೆಲುಗು)	:	ಬಿ.ರಜನಿಕಾಂತರಾವ್ ವಿಶಾಲಾಂದ್ರ ಪಬ್ಲಿಷಿಂಗ್, ದ್ವಿತೀಯ ಮುದ್ರಣ ೧೯೭೫
೨೦. ದಾಸ ಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ	:	ಆರ್.ಜಿ.ಗುಡಿ ಕರ್ನಾಟಕ ವಿ.ವಿ., ೧೯೯೩ ಶ್ರೀನಿಧಿ ಪ್ರಕಾಶನ ಅಥಣಿ ೧೯೯೪
೨೧. ದಾಸ ಸಾಹಿತ್ಯ ಮತ್ತು ಸಂಸ್ಕೃತಿ	:	ಸಾ.ಕೃ.ರಾಮಚಂದ್ರರಾವ್ , ಕನ್ನಡ ಪುಸ್ತಕ ಪ್ರಾಧಿಕಾರ ೨೦೦೩
೨೨. ದಾಸ ಸಾಹಿತ್ಯ ದ್ವಿತೀಯ ಘಟ್ಟದ ಸಾಧನೆ	:	(ಸಂ) ಕರ್ನಾಟಕ ವಿಶ್ವವಿದಾ ಧಾರವಾಡ ೧೯೭೦

೨೩. ಹರಿದಾಸ ಸಾಹಿತ್ಯ ಪರಂಪರೆ : ಕೊರಟಿ ಶ್ರೀನಿವಾಸರಾವ್, ಬೆಂಗಳೂರು ೧೯೮೨

೨೪. ಕೀರ್ತನಾಕಾರರು (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ) : ಡಾ.ಎಚ್.ಎಸ್.ವೆಂಕಟೇಶಮೂರ್ತಿ
ಬೆಂಗಳೂರು ವಿಶ್ವವಿದ್ಯಾನಿಲಯ
ಪ್ರಮು, ೧೯೭೫ , ಮ.ಮು.೨೦೦೦

೨೫ .ಹರಿದಾಸ ಸಾಹಿತ್ಯ : ರಾ.ಸ್ವಾ. ಪಂಚಮುಖಿ

೨೬. ದಾಶ ಶಾಹಿತ್ಯ ದರ್ಶನ : (ಸಂ) ಎಚ್.ಎಸ್.ಕೆ.
ಮಂಗಳ ಭಾರತಿ ಪ್ರಕಾಶನ; ಮೈಸೂರು, ೧೯೮೪

೨೭. ಕ್ಷೇತ್ರಯ್ಯ ಪಾಧ ಸಾಹಿತ್ಯಂ (ತೆಲುಗು) : ಡಾ.ಎಸ್.ಗಂಗಪ್ಪ
ಶಶೀ ಪ್ರಚುರುಣ, ೧೯೭೪

೨೮. ತೆಲುಗು ಭಾಷೆ ಮತ್ತು ಸಾಹಿತ್ಯ : ಡಾ.ಅರ್ವಿಯಾಸ್ ಸುದಂರಂ ,
ಮೈಸೂರು ವಿ.ವಿ ೧೯೮೨

೨೯. ಕನಕ ಸಾಹಿತ್ಯ ದರ್ಶನ : (ಸಂ) ಡಾ. ದೇ. ಜವರೇಗೌಡ
ಕನ್ನಡ ಸಂಸ್ಕೃತಿ ನೀರ್ದೇಶನಾಲಯ,
ಬೆಂಗಳೂರು.ಪ್ರ, ೧೯೯೦

೩೦. ಮನುಕುಲಕೆ ಹರಿದಾಸ ಕೊಡುಗೆ ಲೇಖನ : ಕೃಷ ಕೋಲ್ಹಾರ, ಕುಲಕರ್ಣಿ
ಕರ್ಮವೀರ ದೀಪಾವಳಿ ವಿಶೇಷಾಂಕ
ಬೆಂಗಳೂರು. ಪ್ರ,೨೦೦೧

೩೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಎಚ್.ತೀಪ್ಪೇರುದ್ರಸ್ವಾಮಿ ಮೈಸೂರು.ಪ್ರ, ೧೯೮೬

೩೨. ಹರಿದಾಸ ಹೃದಯ : ವರದರಾಜಾರಾವ್ ಜಿ. ಮೈಸೂರು.ಪ್ರ, ೧೯೬೭

೩೩. ಕನ್ನಡ ಸಾಹಿತ್ಯ ಚರಿತ್ರೆ (ಹತ್ತನೆಯ ಪರಿಷ್ಕರಣ ಸಂಸ್ಕರಣ) : ರಂ.ಶ್ರೀ. ಮುಗಳಿ
ಪ್ರಕಾಶಕರು ಗೀತಾಬುಕ್ ಹೌಸ್ ಮೈಸೂರು.
೫೭೦೦೦೧.ಪ್ರಮು ೧೯೫೩
ಹ.ಮು.೧೯೯೮

೩೪. ದಾಸ ಸಾಹಿತ್ಯದಲ್ಲಿ ಜಾನಪದೀಯ : ಡಾ.ಆರ್.ಸುನಂದಮ್ಮ
ಅಂಶಗಳು (ತಿ.ದೇವಸ್ದಾನಗಳದನಸಹಾಯದಿಂದ ಪ್ರಕಟಿತ೩೫.
ಕೃಷ್ಣ ಸಂಸ್ಕೃತಿ ಪುರಂದರ : ನಂದಕುಮಾರ
ಕನಕರ ಕೊಡುಗೆ

೩೬. ತೆಲುಗು ಸಾಹಿತ್ಯ ಮುಲೋ : ಅರ್ರ್ವಿಯಾಸ್ ಸುಂದರಂ
ದೇಶಿ ಕವಿತೆ(ತೆಲುಗು) ಮಾನಸ ಸರೋವರ ಪ್ರಚುರುಣಲು ಪ್ರ, ೧೯೭೦
೩೭ ಹರಿ ಭಕ್ತಿ ವಾಹಿನಿ : ವರದರಾಜಾರಾವ್.ಜಿಬೆಂಗಳೂರು ೧೯೦೨
೩೮. ಛಂದೋವಿಕಾಸ : ಡಿ.ಎಸ್.ಕರ್ಕಿ
೩೯. ಪುರಂದರ ಶೈಲಿ : ಡಾ.ಮುರುಳೀಧರ ಎಚ್.ಎನ್
೪೦. ಜಾನಪದ ಸಾಹಿತ್ಯ ಮತ್ತು ಸ್ವರೂಪ : ಸಂಧ್ಯಾರೆಡ್ಡಿ , ಡಿ ಲಿಂಗಯ್ಯ ಪ್ರ ,೧೯೯೨